
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

BBMP ಮರುಚುನಾವಣೆ ಕಾಂಗ್ರೆಸ್ ರಣವೀಳ್ಯ


ಜೂನ್ 29, 2011 ಪುಟ 20 ರೂ. 14/-




ಕೊಲೆ ಆದಳು ರಜನಿ ಅತ್ತಿಗೆ!



ಹಾಸನ ಪೊಲೀಸ್ ಠಾಣೆಯಲ್ಲಿ



ಪೋಲೀಸರ ಮಜಾಕು



ಸ್ಪೆಷಲ್ ಡೀಸಿ ರಾಮಾಂಜನೇಯನ ಭೂಡಕಾಯಿತಿಯಲ್ಲಿ ಮಂತ್ರಿಗಳು

ಸಾವಿರ ಎಕರೆ ಸ್ವಾಹಾ





ಹುಣಸೂರು

ಪರಿಚಿತರಿಗೇ ಬಲಿಯಾದರೆ?



ಡಿಕೆ ಗೂಂಡಾಗಿರಿ

ನೋ ಕಾಮೆಂಟ್ಸ್

"ಕೃಷ್ಣ-ಗೋದಾವರಿ .ಬೇಸಿನ್‌ನಲ್ಲಿ ನೈಸರ್ಗಿಕ ಅನಿಲದ ಉತ್ಪಾದನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮುಖೇಶ್ ಅಂಬಾನಿಯಂವರ ಕಂಪನಿಗೆ ಎಲ್ಲಾ ಬಗೆಯ ಅನುಕೂಲವಾಗುವಂತಹ ಮತ್ತು ಸರ್ಕಾರಕ್ಕೆ ಅಪಾರ ನಷ್ಟವಾಗುವಂತಹ ನೀತಿಗಳನ್ನು ಅನುಸರಿಸಿದೆ. ಅದರಲ್ಲೂ ಹೆಚ್ಚು ಬಂಡವಾಳ ಹೂಡಿದವರಿಗೆ ಹೆಚ್ಚು ಲಾಭ ಎನ್ನುವ ಲಾಭ ಹಂಚಿಕೆಯ ನೀತಿ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಮೂಲ ಅಲ್ಲಿದೆ. ಇದು ಖಾಸಗಿ ಕಂಪನಿಗಳಿಗೆ ಬಂಡವಾಳ ವೆಚ್ಚವನ್ನು ವಿನಾಕಾರಣ ಜಾಸ್ತಿ ತೋರಿಸಿ ಲಾಭ ಮಾಡುವ ಅವಕಾಶವನ್ನು ಕೊಡುತ್ತದೆ. ಸರ್ಕಾರ ಮೊದಲು ಈ ನೀತಿಯನ್ನು ಮಾರ್ಪಡಿಸಬೇಕು."

- ಭಾರತದ ಲೆಕ್ಕ ಮಹಾಪರಿಶೋಧಕರ ವರದಿ

"ಎಂ.ಎಫ್.ಹುಸೇನ್ ಅವರು ಮುಸ್ಲಿಂ ಎಂಬ ಕಾರಣದಿಂದಲೇ ಅವರು ರಚಿಸಿದ ನಗ್ನ ಚಿತ್ರಗಳು ಆಕ್ಷೇಪಕ್ಕೆ ಒಳಪಟ್ಟವು. ಅದೇ ಕೆಲಸವನ್ನು ಈಗ ನಾನು ಮಾಡಿದ್ದರೆ ಯಾರೂ ಆಕ್ಷೇಪಿಸುತ್ತಿರಲಿಲ್ಲ. ಅವರನ್ನು ದೇಶದಿಂದ ಹೊರಗೆ ಓಡಿಸಲು ಕಾರಣಕರ್ತರಾದವರು ಕೋನಾರ್ಕ್, ಖಜುರಾಹೋಗಳಲ್ಲಿ ಯಾವ ಚಿತ್ರಗಳಿವೆ ಎಂಬುದನ್ನು ಅರಿತಿಲ್ಲ."

- ಎಸ್. ಜಿ. ವಾಸುದೇವ್, ಹಿರಿಯ ಕಲಾವಿದರು

"ಕೃಷಿ ವಿಶ್ವವಿದ್ಯಾಲಯಗಳು ಹಿಂದೆಯೂ ಕೃಷಿಕರಿಗೆ ಹೊಸ ದಾರಿ ತೋರಿಸಿದ್ದು ತೀರಾ ಕಡಿಮೆ. ಅಲ್ಲಿನ ಸಂಶೋಧಕರ ಮತ್ತು ಉಪನ್ಯಾಸಕರ ಪದೋನ್ನತಿಗೂ ಕೃಷಿಕರ ಕಲ್ಯಾಣಕ್ಕೂ ನಾವು ಸಂಬಂಧ ಕಲ್ಪಿಸಲೇ ಇಲ್ಲ. ಸಂಶೋಧನಾ ಪ್ರಬಂಧಗಳನ್ನು ಮತ್ತು ಡಾಕ್ಟರೇಟ್‌ಗಳನ್ನು ಉತ್ಪಾದಿಸುತ್ತಲೇ ಅವರು ಎತ್ತರೆತ್ತರದ ಸ್ಥಾನಕ್ಕೆ ಏರಿ ನಿವೃತ್ತರಾಗುವರೇ ವಿನಃ ಅಸಲೀ ಕಳಕಳಿಯಿಂದ ಕೃಷಿಕರಿಗೆ ಪೂರಕವಾದ ಕೆಲಸ ಮಾಡಿದವರ ಸಂಖ್ಯೆ ಬೆರಳೆಣಿಕೆಯಷ್ಟೆ."

- ನಾಗೇಶ್ ಹೆಗಡೆ

"ಶೇ.31ರಷ್ಟಿದ್ದ ರೇಷ್ಮೆ ಆಮದು ಸುಂಕವನ್ನು ಸರ್ಕಾರ ಶೇ.5ಕ್ಕಿಳಿಸಿದೆ. ಸರ್ಕಾರದ ಈ ಕ್ರಮ ದೇಶದ ರೇಷ್ಮೆ ಬೆಳೆಗಾರರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಆಮದು ಸುಂಕವನ್ನು ಇಳಿಸಿದ ನಂತರ ದೇಶೀಯ ಮಾರುಕಟ್ಟೆಯಲ್ಲಿ ರೇಷ್ಮೆ ಬೆಲೆ ಗಣನೀಯವಾಗಿ ಕುಸಿಯುತ್ತಿದೆ. ಜನವರಿ ತಿಂಗಳಿನಲ್ಲಿ ಕೆ.ಜಿಗೆ 312 ರೂ. ಇದ್ದ ರೇಷ್ಮೆ ಗೂಡಿನ ಬೆಲೆ ಆಮದು ಸುಂಕ ಕಡಿಮೆ ಮಾಡಿದ ಮೇಲೆ 229 ರೂ.ಗೆ ಕುಸಿದಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಕೇಂದ್ರ ಸರ್ಕಾರ ವಾರ್ಷಿಕ 2500 ಮೆಟ್ರಿಕ್ ಟನ್ ರೇಷ್ಮೆಯನ್ನು ಆಮದು ಮಾಡಿಕೊಳ್ಳುವ ನಿರ್ಧಾರ ಕೈಗೊಂಡಿದೆ. ಇದು ರೇಷ್ಮೆ ಬೆಳೆಗಾರರನ್ನು ದಿವಾಳಿ ಮಾಡಲಿದೆ.'

- ಬಯ್ಯಾರೆಡ್ಡಿ, ಪ್ರಾಂತ ರೈತ ಸಂಘ

"ಬಾಬಾ ರಾಮದೇವ್ ಒಬ್ಬ ಸನ್ಯಾಸಿಯೇ ಅಲ್ಲ. ಎಣ್ಣೆ ಸೋಪು, ಬಿಸ್ಕತ್ ಮತ್ತು ಯೋಗವನ್ನು ಮಾರುವುದು ಒಬ್ಬ ಸಾಧುವಿನ ಕೆಲಸವಲ್ಲ. ನಾನು ಒಬ್ಬ ಸನ್ಯಾಸಿ. ನನಗೆ ವೈದ್ಯಕೀಯ ಸಸ್ಯಗಳ ಬಗ್ಗೆ ಗೊತ್ತು. ಹಾಗಂತ ನಾನು ಅದನ್ನು ಮಾರುತ್ತಾ ಹೋಗುವುದಿಲ್ಲ. ಯಾರಾದರೂ ನನ್ನ ಬಳಿ ಬಂದರೆ ನಾನು ಅವರಿಂದ ಸ್ವಲ್ಪವೂ ಹಣವನ್ನು ಸ್ವೀಕರಿಸದೆ ಅವರಿಗೆ ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ. ಸನ್ಯಾಸಿಗಳು ದಾನವನ್ನು ಆಧರಿಸಿ ಬದುಕಬೇಕೇ ವಿನಃ ಲಾಭವನ್ನು ಆಧರಿಸಿಯಲ್ಲ. ಆದ್ದರಿಂದಲೇ ನಾನು ಆತನನ್ನು ಸನ್ಯಾಸಿಯೆಂದು ಒಪ್ಪುವುದೇ ಇಲ್ಲ"

- ಸ್ವಾಮಿ ಹಠಯೋಗಿ, ಅಖಿಲ ಭಾರತ ಸಂತ ಸಮಾಜದ ವಕ್ತಾರ

ಇದು ಕೇಸರಿ ಕಾಮಾಲೆ!

"ಪಾಪ, ಯಡಿಯೂರಪ್ಪನವರು ಅಧಿಕಾರಕ್ಕೆ ಬಂದಾಗಿನಿಂದ ಪ್ರವಾಹದ ವಿರುದ್ಧ ಈಜುವುದೇ ಆಗಿದೆ. ವಿರೋಧ ಪಕ್ಷಗಳು ಅವರನ್ನು ಕೆಲಸ ಮಾಡಲು ಬಿಡದೇ ಅವರನ್ನು ಭ್ರಷ್ಟ ಎಂದು ಜರೆಯುತ್ತಾ ಬಂದಿವೆ. ಆದರೆ ನನ್ನ ಗಮನಕ್ಕೆ ಬಂದಂತೆ ಬಿಜೆಪಿ ಸರ್ಕಾರದಿಂದ ರಾಜ್ಯದ ಅನೇಕ ಕಡೆಗಳಲ್ಲಿ ರಸ್ತೆ ನಿರ್ಮಾಣ, ಕೆರೆ ಸುಧಾರಣೆ, ಇನ್ನಿತರ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಆದರೆ ಒಂದೇ ಒಂದು ದಿನ ಗದ್ದಲವಿಲ್ಲದೆ ಕಾರ್ಯನಿರ್ವಹಿಸಲು ವಿರೋಧ ಪಕ್ಷದವರು ಅವಕಾಶ ಮಾಡಿಕೊಟ್ಟಿಲ್ಲ"


- ಎಸ್. ಎಲ್. ಭೈರಪ್ಪ

ಹಂಪಿಯ ಬಗ್ಗೆ ಇದೇ ನಿಲುವು ಏಕಿಲ್ಲ?

"ಯುನೆಸ್ಕೋ ಪಟ್ಟಿಗೆ ಸೇರಿಸುವುದರಿಂದ ಪಶ್ಚಿಮ ಘಟ್ಟ ಉಳಿಸಲು ವಿಶೇಷ ಅನುದಾನವೇನೂ ಬರುವುದಿಲ್ಲ. ಅಲ್ಲದೇ ಈ ಭಾಗದಲ್ಲಿ ಏನೇ ಅಭಿವೃದ್ಧಿ ಮಾಡಬೇಕೆಂದರೂ ಅದಕ್ಕೆ ಪ್ರತಿ ಹಂತದಲ್ಲಿ ಯುನೆಸ್ಕೋ ಅನುಮತಿ ಪಡೆಯಬೇಕು. ನಮ್ಮ ಆಸ್ತಿ, ನಮ್ಮ ಜಾಗ... ಬೇರೆಯವರ ಕೈಗೇಕೆ ಜುಟ್ಟು ಕೊಡುವುದು..... ಈ ನಿರ್ಧಾರದ ಹಿಂದೆ ಟಿಂಬರ್ ವ್ಯಾಪಾರಿಗಳ ಪ್ರಭಾವವೇನೂ ಇಲ್ಲ"


- ವಿಜಯಶಂಕರ್, ಅರಣ್ಯ ಸಚಿವ

ಅಂಬರ ಮೀರಿದ ಅಂಬಾನಿಯ ಭ್ರಷ್ಟಾಚಾರವನ್ನು ತಡೆಯುವ ತಾಕತ್ತು ಸಂವಿಧಾನಕ್ಕಿದೆಯೇ?



ಶಿವಸುಂದರ್

ಚಾರ್ವಾಕ



ಭ್ರಷ್ಟಾಚಾರ ಎಂದರೇನು ಮತ್ತು ಭ್ರಷ್ಟಾಚಾರಿಗಳು ಯಾರು ಎಂಬ ಚರ್ಚೆ ದೇಶದಾದ್ಯಂತೆ ಬಿಸಿ ಏರುತ್ತಿರುವ ಹೊತ್ತಿನಲ್ಲಿ ಭಾರತದ ಮಹಾಲೆಕ್ಕ ಪರಿಶೋಧಕರು **(Comptroller and Auditor General - CAG)** ಈ ದೇಶದ ಜನತೆಗೆ ಆಗಿರುವ ಮತ್ತೊಂದು ಮಹಾ ವಂಚನೆಯನ್ನು ಬಯಲಿಗೆಳೆದಿದ್ದಾರೆ. ಅದು ಭಾರತ ಉದ್ಯಮಪತಿಗಳಲ್ಲೇ ಅತಿ ಗಣ್ಯರಾದ ಹಾಗೂ ದೇಶದ ಮಾತ್ರವಲ್ಲದೆ ವಿಶ್ವದ ಅತಿ ದೊಡ್ಡ ಶ್ರೀಮಂತರಲ್ಲಿ ಒಬ್ಬನಾದ ಮುಖೇಶ್ ಅಂಬಾನಿಯ ರಿಲಯನ್ಸ್ ಕಂಪನಿ **(RIL)** ಸರ್ಕಾರದ ಬೊಕ್ಕಸಕ್ಕೆ ತೂತು ಕೊರೆದು ಮಾಡಿಕೊಂಡಿರುವ ಸಾವಿರಾರು ಕೋಟಿ ಲಾಭದ ವಂಚನೆ. ಆದರೆ ಭ್ರಷ್ಟಾಚಾರದ ಬಗ್ಗೆ ಹುಯಿಲೆಬ್ಬಿಸುತ್ತಿರುವ ಅಣ್ಣಾ ಹಜಾರೆಯವರಾಗಲೀ ಅಥವಾ ಬೂಸಿ ಬಾಬಾಗಳಾಗಲೀ ಇದನ್ನು ಭ್ರಷ್ಟಾಚಾರವೆಂದೇ ಪರಿಗಣಿಸುವುದಿಲ್ಲ. ಅವರಿರಲಿ ಜಾಗತೀಕರಣದ ನಂತರದಲ್ಲಿ ಈ ದೇಶದಲ್ಲಿ ಬದಲಾಗಿರುವ ಕಾನೂನುಗಳು ಈ ಹಗಲು ದರೋಡೆಯನ್ನು ಕನಿಷ್ಠ ವಂಚನೆಯೆಂದು ಪರಿಗಣಿಸುವುದಿಲ್ಲ. ವಾಸ್ತವವಾಗಿ ಈ ದೇಶದ ಜನತೆಗೆ ದಕ್ಕಬೇಕಿರುವ ಸಂಪನ್ಮೂಲಗಳು ಉಳ್ಳವರ ಪಾಲಾಗುತ್ತಿರುವುದು ಕಾನೂನುಬಾಹಿರ ಭ್ರಷ್ಟಾಚಾರದಿಂದಲ್ಲ - ಬದಲಿಗೆ ಈ ಬಗೆಯ ಕಾನೂನುಬದ್ಧ ಭ್ರಷ್ಟಾಚಾರದಿಂದಲೇ. ಮಹಾ ಲೆಕ್ಕ ಪರಿಶೋಧಕರೂ ತಮ್ಮ ವರದಿಯಲ್ಲಿ ಪರೋಕ್ಷವಾಗಿ ಇದನ್ನೇ ಹೇಳಿದ್ದಾರೆ.

ಭಾರತದ ಅಭಿವೃದ್ಧಿ ದರ ಶೇ.9ರ ಗತಿಯನ್ನು ಉಳಿಸಿಕೊಳ್ಳಬೇಕೆಂದರೂ ಈ ದೇಶದ ಇಂಧನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದೂ ಅದಕ್ಕೆ ಖಾಸಗಿ ಸಹಭಾಗಿತ್ವದೊಂದಿಗೆ ಇಂಧನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಈ ದೇಶದ ಆಳುವ ವರ್ಗಗಳ ಯೋಜನೆ. ಅದಕ್ಕಾಗಿ ಅವರು ಹತ್ತನೇ ಪಂಚವಾರ್ಷಿಕ ಯೋಜನೆಯ ಕಾಲದಿಂದಲೇ ಭವಿಷ್ಯದ ಇಂಧನವಾಗಿ ನೈಸರ್ಗಿಕ ಅನಿಲದ ಅನ್ವೇಷಣೆ, ಉತ್ಪಾದನೆ ಮತ್ತು ವಿತರಣೆಯ ಯೋಜನೆಯನ್ನು ದೊಡ್ಡ ಮಟ್ಟದಲ್ಲಿ ಮಾಡಬೇಕೆಂದು ಯೋಜಿಸಿದ್ದರು. ಆ ವೇಳೆಗಾಗಲೇ ಖಾಸಗಿ ಮತ್ತು ವಿದೇಶಿ ಬಂಡವಾಳವೇ ಈ ದೇಶದ ಅಭಿವೃದ್ಧಿಯನ್ನು ಮಾಡಬಲ್ಲವು ಎಂಬುದು ಜಾಗತೀಕರಣದ ನೀತಿಗಳಾಗಿ ಶಾಸನವೂ ಆಗಿಬಿಟ್ಟಿದ್ದವು. ಹೀಗಾಗಿ ನೈಸರ್ಗಿಕ ಅನಿಲದ ಸಂಶೋಧನೆ, ಉತ್ಪಾದನೆ ಮತ್ತು ವಿತರಣೆ ಎಲ್ಲದರಲ್ಲೂ ಸರ್ಕಾರ ಬಂಡವಾಳ ಮತ್ತು ಇತರ ಎಲ್ಲಾ ಸಂಪನ್ಮೂಲವನ್ನು ಒದಗಿಸಿದರೂ ಅಲ್ಪಸ್ವಲ್ಪ ಬಂಡವಾಳವನ್ನು ಹಾಕಿದ ಏಕೈಕ ಕಾರಣಕ್ಕಾಗಿ ಖಾಸಗಿ ಹೂಡಿಕೆದಾರರೇ ಲಾಭದ ಮತ್ತು ನಿರ್ವಹಣೆಯ ಅಧಿಕಾರದ ಸಿಂಹಪಾಲನ್ನು ಪಡೆಯುವ ರೀತಿಯಲ್ಲಿ ಈ ಖಾಸಗಿ-ಸರ್ಕಾರ ಸಹಭಾಗಿತ್ವ ಯೋಜಿತಗೊಂಡಿತ್ತು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಕಳೆದ ಇಪ್ಪತ್ತು ವರ್ಷದಲ್ಲಿ ದೊಡ್ಡ ಮಟ್ಟದಲ್ಲಿ ನಷ್ಟ ಉಂಟಾಗುತ್ತಿದ್ದರೆ ಅದರ ಲಾಭವನ್ನೆಲ್ಲಾ ಅಂಬಾನಿಯಂತ ಖಾಸಗಿ ಕಂಪನಿಗಳೇ ನುಂಗಿಹಾಕುತ್ತಿದ್ದವು.

ಇಂತಹ ಒಂದು ಯೋಜನೆಯಿಂದ ಅಂಬಾನಿಯ ಕಂಪನಿ ಒಂದು ಯೋಜನೆಯಲ್ಲಿ ಸರ್ಕಾರಕ್ಕೆ ಮಾಡಿರುವ ವಂಚನೆಯ ಕುರಿತಾಗಿಯೇ ಭಾರತದ ಮಹಾಲೆಕ್ಕ ಪರಿಶೋಧಕರು ತಮ್ಮ ತೀವ್ರ ಆಕ್ಷೇಪಣೆಯನ್ನು ಎತ್ತಿದ್ದಾರೆ. ಭಾರತದಲ್ಲಿ ನೈಸರ್ಗಿಕ ಅನಿಲದ ನಿಕ್ಷೇಪಗಳು ದೊಡ್ಡ ಮಟ್ಟದಲ್ಲಿ ಕೃಷ್ಣ-ಗೋದಾವರಿ ಬೇಸಿನ್‌ನಲ್ಲಿ ಕಂಡುಬಂದಿವೆ. ಇದನ್ನು ಸರ್ಕಾರವೇ ತನ್ನ ಖರ್ಚಿನಲ್ಲಿ ಕಂಡುಹಿಡಿದಿತ್ತು. ಸರ್ಕಾರವೇ ತನ್ನ ಬಳಿ ಇರುವ ಬಂಡವಾಳ ಮತ್ತು ತಂತ್ರಜ್ಞಾನವನ್ನು ಹೂಡಿ ಅಗ್ಗದ ಬೆಲೆಯ ಈ ನೈಸರ್ಗಿಕ ಅನಿಲದ ಉತ್ಪಾದನೆ ಮಾಡಿ ಜನತೆಗೆ ಅಗ್ಗದ ವೆಚ್ಚದಲ್ಲಿ ಇಂಧನವನ್ನು ಒದಗಿಸಬಹುದಾಗಿತ್ತು. ಆದರೆ ಜಾಗತೀಕರಣ ಪ್ರಣೀತ ಆರ್ಥಿಕ ನೀತಿಯಿಂದಾಗಿ ಸರ್ಕಾರ ತಾನೇ ಇತರ ಎಲ್ಲಾ ಸೌಕರ್ಯವನ್ನು ಒದಗಿಸಿಕೊಟ್ಟರೂ ಈ ಭಾಗದಲ್ಲಿ ನೈಸರ್ಗಿಕ ಅನಿಲ ಉತ್ಪಾದನೆ ಮತ್ತು ವಿತರಣೆಯನ್ನು ಮಾಡಲು ಮುಖೇಶ್ ಅಂಬಾನಿಯ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ **(RIL)** ಜೊತೆ ಒಪ್ಪಂದ ಮಾಡಿಕೊಂಡಿತು. ಕೃಷ್ಣ-ಗೋದಾವರಿ ಬೇಸಿನ್‌ನಲ್ಲಿ **18** ಕಡೆ ದೊಡ್ಡ ಮಟ್ಟದ ನೈಸರ್ಗಿಕ ಅನಿಲ ನಿಕ್ಷೇಪವನ್ನು ಕಂಡುಹಿಡಿಯಲಾಗಿದೆ. ಅದರಲ್ಲಿ ಅತಿ ಹೆಚ್ಚು ನಿಕ್ಷೇಪ ಇರುವ ಎರಡು ವಿಭಾಗಗಳಲ್ಲಿನ ಉತ್ಪಾದನೆಯನ್ನು ಸರ್ಕಾರ ಅಂಬಾನಿಗೆ ವಹಿಸಿದೆ. ಈ ಯೋಜನೆಯನ್ನು **KG-D6** ಎಂದು ಕರೆಯ ಲಾಗುತ್ತದೆ.

ಆದರೆ ದೇಶದ ಜನತೆಗೆ ಸೇರಬೇಕಿರುವ ಈ ಸಂಪನ್ಮೂಲವನ್ನು ಖಾಸಗಿ ಕಂಪನಿಗೆ ವಹಿಸುವಾಗ ಸರ್ಕಾರದ ಅರ್ಥಾತ್ ಜನತೆಯ ಆರ್ಥಿಕ ಮತ್ತು ಭವಿಷ್ಯದ ಹಿತಾಸಕ್ತಿಯನ್ನು ಎಷ್ಟರಮಟ್ಟಿಗೆ ಗಮನದಲ್ಲಿರಿಸಿಕೊಂಡಿತ್ತು? ಅಂಬಾನಿ ಕಂಪನಿ ಎಷ್ಟರಮಟ್ಟಿಗೆ ಕಾನೂನುಗಳ ಸಂದಿಯನ್ನು ಬಳಸಿಕೊಂಡು ನಷ್ಟವನ್ನು ಸರ್ಕಾರಕ್ಕೂ ಮತ್ತು ಲಾಭವನ್ನೂ ತನಗೂ ವರ್ಗಾಯಿಸಿಕೊಂಡಿತು? ಈ ಬಗೆಯ ಯೋಜನೆಯಲ್ಲಿ ಸರ್ಕಾರ ಮತ್ತು ಖಾಸಗಿ ಕಂಪನಿಗಳು ಪಾಲುದಾರಿಕೆ ಮಾಡಿಕೊಳ್ಳುವಾಗ ಲಾಭವನ್ನು ಹೇಗೆ ಹಂಚಿಕೊಳ್ಳಬೇಕು ಎಂಬ ಬಗ್ಗೆ **Production Sharing Contract (PSC)** ಎಂಬ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತದೆ.

ಈ ಒಪ್ಪಂದವನ್ನು ರೂಪಿಸುವಾಗಲೇ ಅಧಿಕೃತ ಭ್ರಷ್ಟಾಚಾರ ಮೇರೆ ಮೀರಿ ದೇಶವನ್ನು ಬರ್ಬಾದ್ ಮಾಡಿ ಖಾಸಗಿ ಕಂಪನಿಗಳ ತಿಜೋರಿ ತುಂಬಿಕೊಳ್ಳುವುದು. ಈ **PSC** ಒಪ್ಪಂದ ಪ್ರಕಾರ ಲಾಭದ ಹಂಚಿಕೆಯು ಯಾರು ಎಷ್ಟು ಬಂಡವಾಳವನ್ನು ಹೂಡುತ್ತಾರೋ ಆ ಪ್ರಮಾಣದ ಮೇಲೆ ಇರುತ್ತದೆ. ಇದರಲ್ಲಿ ಆಗುವ ಅತಿ ದೊಡ್ಡ ಅನ್ಯಾಯವೆಂದರೆ ನೈಸರ್ಗಿಕ ಸಂಪನ್ಮೂಲ ಪ್ರಧಾನವಾಗಿ ಈ ದೇಶದ ಜನತೆಗೆ ಸೇರಿದೆಯಾದ್ದರಿಂದ ಈ ದೇಶದ ಸರ್ಕಾರ ಈ ದೇಶದ ಜನತೆಯ ಪ್ರತಿನಿಧಿಯಾದ್ದರಿಂದ ಸರ್ಕಾರ ಬಂಡವಾಳ ಕಡಿಮೆ ಹೂಡಿದರೂ ಸರ್ಕಾರಕ್ಕೂ ಅರ್ಥಾತ್ ಜನತೆಗೂ ಸರಿಪ್ರಮಾಣದ ಲಾಭದ ಶೇರು ಸೇರಬೇಕು. ಆದರೆ **PSC** ಒಪ್ಪಂದ ಈ ಪ್ರಮುಖ ಅಂಶವನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಅದಕ್ಕಿಂತ ಹೆಚ್ಚಾ... ಬಂಡವಾಳ ವೆಚ್ಚ ಹೆಚ್ಚು ತೋರಿಸಿದಷ್ಟೂ ಖಾಸಗಿ ಕಂಪನಿಗಳ ಲಾಭದ ಶೇ... ಹೆಚ್ಚುವುದರಿಂದ ಖಾಸಗಿ ಕಂಪನಿಗಳು ವಿನಾಕಾರಣ ತಮ್ಮ ಬಂಡವಾಳ ವೆ... ಅಧಿಕವಾಗಿ ತೋರಿಸಿ ದುಪ್ಪಟ್ಟು ಲಾಭದ ಪಾಲು ಪಡೆಯುತ್ತಾರೆ. ಅಧಿಕೃತವಾಗಿ ಶಾಸನಬದ್ಧವಾಗಿ. ಇದು ಮಾತ್ರ ಲೋಕಪಾಲ್ ಮಸೂದೆಯಲ್ಲಾಗಲೀ, ಹಜಾರೆ ಬಾಬಾಗಳ ಜನಲೋಕಪಾಲ್ ಮಸೂದೆಯಲ್ಲಾಗಲೀ ಭ್ರಷ್ಟಾಚಾರ, ಜನತೆಯ ಸಂಪನ್ಮೂಲದ ಲೂಟಿ ಎಂದು ಎನಿಸಿಕೊಳ್ಳುವುದೇ ಇಲ್ಲ.

ಈ **KG-D6** ಯೋಜನೆಯಲ್ಲಿ ಅಂಬಾನಿಗಳು ಮೊದಲು ತೋರಿಸಿ... ಬಂಡವಾಳ ವೆಚ್ಚ **2.3** ಬಿಲಿಯನ್ ಡಾಲರ್ ಅಂದರೆ ಅಂದಾಜು **13,00...** ಕೋಟಿ ರೂಪಾಯಿಗಳು. ಆದರೆ ಕೇವಲ ಒಂದೇ ವರ್ಷದಲ್ಲಿ ಅದರ ವೆಚ್ಚವನ್ನು ಯಾವುದೇ ವಿಶೇಷ ಕಾರಣವಿಲ್ಲದೆ **5.1** ಬಿಲಿಯನ್ ಡಾಲರ್‌ಗೆ ಏರಿಸಿಕೊಂಡಿತು ಅಂದರೆ ಅಂದಾಜು **30,000** ಕೋಟಿ ರೂಪಾಯಿಗಳು ಎಂದು ತೋರಿಸಿತು ಒಟ್ಟು ಅದು ಈಗ ತೋರಿಸುತ್ತಿರುವ ವೆಚ್ಚ **45,000** ಕೋಟಿ ರೂಪಾಯಿಗಳು. ಹೀಗೆ ಅದರ ಬಂಡವಾಳ ವೆಚ್ಚ ಶೇ.**117**ರಷ್ಟು ಹೆಚ್ಚಾದದ್ದರಿಂದ ಲಾಭದಲ್ಲಿಯೂ ಅದರ ಪಾಲು ಶೇ.**117**ರಷ್ಟು ಜಾಸ್ತಿಯಾಗಿ, ಸರ್ಕಾರದ ಅಂದರೆ ಜನತೆಯ ಪಾಲು ಶೇ.5ಕ್ಕಿಂತಲೂ ಕಡಿಮೆಯಾಗಿದೆ.

ಲೆಕ್ಕ ಮಹಾಪರಿಶೋಧಕರು ಏಕಾಏಕಿ ಬಂಡವಾಳ ಹೆಚ್ಚಲು ಕಾರಣವೇನು ಎಂದು ಹುಡುಕಲು ಅಂಬಾನಿ ಕಂಪನಿಗೆ ತಮ್ಮ ವೆಚ್ಚದ ಲೆಕ್ಕಪತ್ರವನ್ನು ಒದಗಿಸಲು ಆದೇಶಿಸಿದರೂ ಈ ಕಾರ್ಪೊರೇಟ್ ಕಂಪನಿ ತಾನೊಂದು ಖಾಸಗಿ ಕಂಪನಿಯೆಂದೂ ಈ ಯೋಜನೆಯ ನಿರ್ದಿಷ್ಟ ಬಾಬತ್ತಿಗೆ ಬಿಟ್ಟು ಮಿಕ್ಕಂತೆ ತನ್ನ ಲೆಕ್ಕಾಚಾರವನ್ನು ಕೇಳುವ ಅಧಿಕಾರ **CAG** ಗೆ ಇಲ್ಲವೆಂದೂ ಉತ್ತರ ಕೊಟ್ಟಿದೆ. ಖಾಸಗಿ ಕಂಪನಿಗಳ ಎದುರು ನಿಸ್ಸಹಾಯಕವಾದ ಸಾಂವಿಧಾನಿಕ ಸಂಸ್ಥೆಯಾದ **CAG** ಯೂ ಸಹ "ಭಾರತದ ಇಂದಿನ ಪರಿಸ್ಥಿತಿಯಲ್ಲಿ ಪ್ರಸ್ತುತ ಸರ್ಕಾರ ರೂಪಿಸಿರುವ **PSC** ಆಧಾರಿತ ಲಾಭ ಹಂಚಿಕೆ ಸ್ವರೂಪವು ಯಾವ ರೀತಿಯಲ್ಲೂ ಸರ್ಕಾರಕ್ಕೆ ಲಾಭ ತಂದುಕೊಡುವುದಿಲ್ಲ. ಆದ್ದರಿಂದ ಈ ಒಪ್ಪಂದದಲ್ಲೇ ಮೂಲಭೂತ ಬದಲಾವಣೆ ತರಬೇಕು ಮತ್ತು ಬಂಡವಾಳಾಧಾರಿತ ಲಾಭ ಹಂಚಿಕೆಯ ಬದಲಿಗೆ, ರಾಯಲ್ಟಿ (ರಾಯಧನ)ಆಧಾರಿತ ಒಪ್ಪಂದವೇ ಸೂಕ್ತವೆಂದು" ಸಲಹೆ ನೀಡಿದೆ. ಈ ರೀತಿ ಅಂಬಾನಿ ಕಂಪನಿ ಬೇಕಾಬಿಟ್ಟಿ ಬಂಡವಾಳ ವೆಚ್ಚವನ್ನು ಹೆಚ್ಚಿಸಿದ್ದನ್ನು ಸರ್ಕಾರ ಒಪ್ಪಿಕೊಂಡಿದ್ದು ಹೇಗೆ ಎಂದು ಲೆಕ್ಕ ಪರಿಶೋಧಕರು ಪ್ರಶ್ನಿಸಿದ್ದಾರೆ. ಈ ರೀತಿ ಖಾಸಗಿಯವರೊಡನೆ ವ್ಯಾವಹಾರಿಕ ಒಪ್ಪಂದ ಮಾಡಿಕೊಳ್ಳುವಾಗ ಸರ್ಕಾರದ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವಂತೆ ಒಪ್ಪಂದ ರಚಿತವಾಗಬೇಕೆಂದೂ ಸಲಹೆ ನೀಡಿದ್ದಾರೆ.

ಆದರೆ **CAG** ಯೇ ಗುರುತಿಸಿರುವಂತೆ ಲಾಭ ಹಂಚಿಕೆ ಒಪ್ಪಂದದ ಸ್ವರೂಪದಲ್ಲೇ ಸರ್ಕಾರಕ್ಕೆ ಆಗುವ ಅನ್ಯಾಯದ ಮೂಲವಿದೆ. ಅರ್ಥಾತ್ ಖಾಸಗಿ-ಸರ್ಕಾರಿ ಸಹಭಾಗಿತ್ವದಲ್ಲೇ ಜನರ ಸಂಪನ್ಮೂಲ ಲೂಟಿಯಾಗುವುದರ ಮೂಲವಿದೆ, ಆರ್ಥಿಕ ನೀತಿಗಳಲ್ಲಿದೆ. ವಿದೇಶಿ ಮತ್ತು ಖಾಸಗಿ ಬಂಡವಾಳವನ್ನು ಹೆಚ್ಚೆಚ್ಚು ಆಕರ್ಷಿಸುವುದರಿಂದ ಮಾತ್ರ ಈ ದೇಶದ ಅಭಿವೃದ್ಧಿ ಸಾಧ್ಯ ಎಂಬ ಕಾರ್ಪೊರೇಟ್ ಅಭಿವೃದ್ಧಿ ಮೀಮಾಂಸೆಯೇ ಈ ಅಧಿಕೃತ ಹಗಲು-ದರೋಡೆ ಮತ್ತು ಬ್ರಹ್ಮಾಂಡ ಭ್ರಷ್ಟತೆಯ ಜನನಿ. ಆದರೆ ಈ ದೇಶದ ವರಿಷ್ಠ ನ್ಯಾಯಾಲಯವೂ ಸಹ ಈ ಬಗೆಯ ಆರ್ಥಿಕ ನೀತಿಯ ಪರವಾಗಿ ನಿಂತಿದೆ. ಅಷ್ಟೇ ಅಲ್ಲ, ತಾನು ಸರ್ಕಾರ ರೂಪಿಸುವ ಆರ್ಥಿಕ ನೀತಿ ಜನರ ಪರವೋ ಅಲ್ಲವೋ ಎಂಬ ವಿಮರ್ಶೆಯಲ್ಲಿ ತೊಡಗುವುದಿಲ್ಲ, ಅದನ್ನು ಮಾಡಲು ಪಾರ್ಲಿಮೆಂಟೇ ಸೂಕ್ತ ಎಂದು ಹೇಳಿಯಾಗಿದೆ.

ಆದ್ದರಿಂದಲೇ ಅಂಬಾನಿಯಂತವರು ತಾವು ಏಕೆ ಬಂಡವಾಳ ವೆಚ್ಚ ಹೆಚ್ಚಿಸಿದೆವು ಎಂಬುದರ ಲೆಕ್ಕ ಕೇಳುವ ಅಧಿಕಾರ ಸಾಂವಿಧಾನಿಕ ಸಂಸ್ಥೆಯಾದ **CAG** ಗೂ ಇಲ್ಲವೆಂದು ಸಡ್ಡು ಹೊಡೆದಿದ್ದಾರೆ. ಹಾಗೆ ನೋಡಿದರೆ ಈ ಬಾಬತ್ತಿನಲ್ಲಿ ಮಾಜಿ ಇಂಧನ ಮಂತ್ರಿ ಮುರಳಿ ದೆವ್ರೊರಾ ನಂತಹ ಮಂತ್ರಿಗಳ ಕೈ ನೂರಿನ್ನೂರು ಕೋಟಿ ಬೆಚ್ಚಗಾಗಿರಬಹುದು. ಆದರೆ ಜನರಿಗೆ ಸೇರಬೇಕಾದ **30,000** ಕೋಟಿಗೂ ಹೆಚ್ಚು ರೂಪಾಯಿ ಅಂಬಾನಿ ತಿಜೋರಿ ಸೇರುತ್ತದೆ. ಲೋಕಪಾಲ್ ಮಸೂದೆ ಅಥವಾ ಇನ್ನಿತರ ಯಾವುದೇ ಭ್ರಷ್ಟಾಚಾರ ವಿರೋಧಿ ಕಾನೂನುಗಳು ನೂರು ಕೋಟಿ ತಿಂದ ಮಂತ್ರಿಯನ್ನು ಹಿಡಿಯಬಹುದು. ಲಕ್ಷ ಲಕ್ಷ ಕೋಟಿ ತಿನ್ನುತ್ತಿರುವ ಅಂಬಾನಿಗಳನ್ನು ಹಿಡಿಯಲಾರವು ಎಂಬುದನ್ನು ಸಾಂವಿಧಾನಿಕ ಸಂಸ್ಥೆಯಾದ **CAG** ವ್ಯಕ್ತಪಡಿಸಿರುವ ನಿಸ್ಸಹಾಯಕತೆ ಸ್ಪಷ್ಟಪಡಿಸುತ್ತದೆ.

ಆದ್ದರಿಂದಲೇ ಭ್ರಷ್ಟಾಚಾರ ವಿರೋಧಿ ಹೋರಾಟ ನಿಜಕ್ಕೂ ಅರ್ಥಪೂರ್ಣವಾಗಬೇಕೆಂದರೆ ಶಾಸನಬದ್ಧವಾಗಿ ಜನರ ಸಂಪನ್ಮೂಲಗಳನ್ನು ಕಸಿದು ಅಂಬಾನಿಗಳನ್ನು ಮಾತ್ರ ಕುಬೇರರನ್ನಾಗಿ ಮಾಡುತ್ತಿರುವ ಅರ್ಥವ್ಯವಸ್ಥೆಯ ವಿರುದ್ಧವೇ ಸಮರ ಹೂಡಬೇಕು. ಅದಿಲ್ಲದೆ ಭ್ರಷ್ಟಾಚಾರವೆಂಬುದನ್ನು ಕೇವಲ ಒಂದು ನೈತಿಕ ಮೌಲ್ಯವೆಂಬಂತೆ ಅಮೂರ್ತ ರೂಪದಲ್ಲಿ ಹೋರಾಡುತ್ತಿದ್ದರೆ ಯಾವ ಪ್ರಯೋಜನವೂ ಇಲ್ಲ. ಒಂದರ್ಥದಲ್ಲಿ **CAG** ಹೇಳುತ್ತಿರುವುದೂ ಇದನ್ನೇ.

ಅಶ್ಲೀಲತೆ ಇರುವುದು ಹಿಂದೂತ್ವವಾದಿಗಳ ಕಣ್ಣಲ್ಲಿ...




• ಗೌರಿ ಲಂಕೇಶ್
editorlankesh@gmail.com

ಖ್ಯಾತ ಕಲಾವಿದ ಎಮ್.ಎಫ್.ಹುಸೇನರು ತಮ್ಮ ಪ್ರೀತಿಯ ಭಾರತ ದೇಶವನ್ನೇ ಬಿಟ್ಟುಹೋಗುವಂತೆ ಮಾಡಿದ್ದ ಹಿಂದೂತ್ವವಾದಿಗಳು ಅವರ ಮರಣದ ನಂತರವೂ ತಮ್ಮ ನಿಲುವಿನ ಬಗ್ಗೆ ಪುನರಾವಲೋಕನ ಮಾಡಿಕೊಳ್ಳುತ್ತಿಲ್ಲ, ಬದಲಾಗಿ ತಮ್ಮ ಲೇಖನಗಳಲ್ಲಿ ಮತ್ತು ವೆಬ್‌ಸೈಟುಗಳಲ್ಲಿ ಹುಸೇನರನ್ನು ಕುರಿತು ಈಗಲೂ ಕೆಂಡಕಾರುತ್ತಿದ್ದಾರೆ, ಅಶ್ಲೀಲಪದಗಳನ್ನು ಬಳಸುತ್ತಿದ್ದಾರೆ.

ವಾಸ್ತವವಾಗಿ ಹುಸೇನರ ಬಗ್ಗೆ ಹೀಗೆಲ್ಲ ಮಾತನಾಡುತ್ತಿರುವವರು ಅದೇ ಹುಸೇನರಂತೆ ಭಾರತವನ್ನಾಗಲಿ, ಹಿಂದೂಧರ್ಮ ಶಾಸ್ತ್ರಗಳನ್ನಾಗಲಿ ಅರ್ಥಮಾಡಿಕೊಂಡಿಲ್ಲ, ಅಷ್ಟೇ ಅಲ್ಲ, ಇವರೆಲ್ಲ ಹೆಚ್ಚೆಂದರೆ ಅಮರಚಿತ್ರ ಕಥಾಮಾಲಿಕೆಯಲ್ಲಿ ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ಬಗ್ಗೆ ಓದಿರಬಹುದೇ ಹೊರತು ಹುಸೇನರಂತೆ ವಾಲ್ಮೀಕಿ ಮತ್ತು ತುಳಸೀದಾಸರು ಬರೆದಿರುವ ರಾಮಾಯಣವನ್ನು ಓದಿಲ್ಲ, ಪುರಾಣಗಳನ್ನಾಗಲಿ, ಇತರೆ ಆಧ್ಯಾತ್ಮಿಕ ಗ್ರಂಥಗಳನ್ನಾಗಲಿ ಕೈಗೆತ್ತಿಕೊಂಡಿಲ್ಲ, ಹಿಂದೂ ಧರ್ಮದ ಬಗ್ಗೆ ವಾರಣಾಸಿಯ ಪಂಡಿತರೊಂದಿಗೆ ಚರ್ಚಿಸಿಲ್ಲ. ಈ ದೇಶದ ಮೂಲೆಮೂಲೆ ಸುತ್ತುವ ಮೂಲಕ ಇಲ್ಲಿನ ಬ್ರಾಹ್ಮಣ್ಯವನ್ನಲ್ಲದೆ ಜನರ ಸಂಸ್ಕೃತಿಯನ್ನು ಹುಸೇನರಂತೆ ಕಂಡಿಲ್ಲ, ಅರ್ಥೈಸಿಲ್ಲ, ಸ್ಪಂದಿಸಿಲ್ಲ.

ಬದಲಾಗಿ ಹುಸೇನರು ಹಿಂದೂ ದೇವತೆಗಳನ್ನು ನಗ್ನವಾಗಿ ಚಿತ್ರಿಸಿದ್ದಾರೆ, ಆ ಮೂಲಕ ತಮ್ಮ ನಂಬಿಕೆಗಳಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಅವರನ್ನು ವಿವಿಧ ರೀತಿಗಳಲ್ಲಿ ಕಾಡಿದ್ದರು. ವಾಸ್ತವವಾಗಿ ಹಿಂದೂ



ಕುಪ್ಪಸ ಇಲ್ಲದ ಗಂಗೆಯ ಚಿತ್ರ (ರವಿವರ್ಮ)





ಭಾರತಮಾತೆ ಮತ್ತು ಹನುಮಂತನ ಚಿತ್ರ (ಎಂ.ಎಫ್. ಹುಸೇನ್)

ಪುರಾಣಗಳ ಪ್ರಕಾರ ನಗ್ನತೆ ನಿಷ್ಕಳಂಕತೆಗೆ ಒಂದು ರೂಪಕ, ಅದನ್ನೇ ನಾನು ಬಿಂಬಿಸಿದ್ದೇನೆಯೇ ಹೊರತು ಅವಮಾನ ಮಾಡಿಲ್ಲ ಎಂದು ಹುಸೇನರು ಎಷ್ಟೇ ಹೇಳಿದರೂ ಹಿಂದೂತ್ವವಾದಿಗಳು ನಂಬಲಿಲ್ಲ.

ಇಲ್ಲಿ ಬೇರೆ ಕಲಾವಿದರೊಬ್ಬರು ರಚಿಸಿರುವ ಗಂಗೆಯ ಸುಂದರ ಚಿತ್ರವೊಂದನ್ನು ನೀಡಿದ್ದೇನೆ. ಇದರಲ್ಲಿ ಆಕೆ ಕುಪ್ಪಸ ತೊಟ್ಟಿಲ್ಲ, ಆ ಕಾರಣಕ್ಕೇ ಈ ಚಿತ್ರವನ್ನು ರಚಿಸುವ ಮೂಲಕ ಹಿಂದೂ ದೇವತೆಗೆ ಅವಮಾನ ಮಾಡಲಾಗಿದೆ ಎಂದು ಯಾರಾದರು ಹೇಳಿದರೆ ಆತನಿಗಿಂತ ದೊಡ್ಡ ಮುಠ್ಠಾಳ ಇನ್ನೊಬ್ಬನಿರುವುದಿಲ್ಲ. ಅಂದಹಾಗೆ ಗಂಗೆಯ ಈ ಸುಂದರ ಚಿತ್ರವನ್ನು ಚಿತ್ರಿಸಿರುವವರು ಬೇರೆ ಯಾರೂ ಅಲ್ಲ, ಖ್ಯಾತ ಕಲಾವಿದರಾಗಿದ್ದ ರಾಜ ರವಿವರ್ಮ!

ಹುಸೇನರ ಮತ್ತೊಂದು 'ವಿವಾದಿತ' ಕಲಾಕೃತಿಯಲ್ಲಿ ಶಿವನ ತೊಡೆಯ ಮೇಲೆ ಪಾರ್ವತಿ ಕೂತಿದ್ದಾಳೆ. ಮಾತ್ರವಲ್ಲ ಶಿವನ ಒಂದು ಕೈ ಪಾರ್ವತಿಯ ಸ್ತನದ ಮೇಲಿದೆ. ಇಂತಹ ಚಿತ್ರವನ್ನು ಹುಸೇನರು ಯಾವ ಸಂದರ್ಭದಲ್ಲಿ ಸೃಷ್ಟಿಸಿದ್ದರು ಗೊತ್ತಾ? ಹುಸೇನರ ಮಗಳು ಸರಳವಾಗಿ ಮದುವೆಯಾದಾಗ ಆ ವಿಚಾರವನ್ನು ತಮ್ಮ ಗೆಳೆಯರಿಗೆ ತಿಳಿಸಲು ಇಂತಹ ಕಲೆ ಇರುವ ಕಾರ್ಡನ್ನು ಹುಸೇನ್ ರಚಿಸಿದ್ದರು. ಅದಕ್ಕೆ ಕಾರಣ ಅವರ ಪ್ರಕಾರ ಶಿವ-ಪಾರ್ವತಿಯ ಕೂಡಿಕೆ ಇಡೀ ಬ್ರಹ್ಮಾಂಡದಲ್ಲೇ ಪ್ರಥಮ ವಿವಾಹವಾಗಿತ್ತು,

"ಛೀ, ತಮ್ಮ ಮಗಳ ಮದುವೆ ಬಗ್ಗೆ ಇಂತಹ ಕಲೆಯೇ" ಎಂದೋ, ಅಥವಾ "ನೋಡಿ ಇಲ್ಲೂ ಹುಸೇನ್ ಹಿಂದೂ ದೇವತೆಗಳನ್ನು ಅಶ್ಲೀಲವಾಗಿ ಚಿತ್ರಿಸಿದ್ದಾರೆ" ಎಂದೋ ಕಿಡಿಕಾರುವವರು ಮೊದಲು ಅರ್ಥ ಮಾಡಿಕೊಳ್ಳಬೇಕಿರುವುದೇನೆಂದರೆ ಈ ಚಿತ್ರಕ್ಕೆ ಹುಸೇನರು ಸ್ಫೂರ್ತಿ ಪಡೆದಿದ್ದು ಎಲ್ಲೋರ ಗುಹೆಗಳಲ್ಲಿ ಇರುವ ಇಂತಹದ್ದೇ ಒಂದು ಶಿಲ್ಪದಿಂದ. ಅದರ ಚಿತ್ರವನ್ನೂ ಇಲ್ಲಿ ನೀಡಲಾಗಿದೆ. ಅಂದಹಾಗೆ ಎಲ್ಲೋರದಲ್ಲಿರುವ ಶಿಲ್ಪಗಳನ್ನು ಕೆತ್ತಿದ್ದು ಬೇರೆ ಧರ್ಮದವರಲ್ಲ, ಬದಲಾಗಿ ಯಾರನ್ನು 'ಹಿಂದೂ' ಎಂದು ಈಗ ಕರೆಯಲಾಗುತ್ತಿದೆಯೋ ಅವರೇ!

ಇದೆಲ್ಲ ಪಕ್ಕಕ್ಕಿರಲಿ, ನಗ್ನತೆಯೇ ಅವಮಾನ, ಅಶ್ಲೀಲ ಎಂಬುದಾದರೆ ಮೊದಲು ನಮ್ಮ ಶ್ರವಣಬೆಳಗೊಳದಲ್ಲಿರುವ ನಗ್ನ ಗೊಮ್ಮಟೇಶ್ವರನ ವಿಗ್ರಹವನ್ನು ಹೊಡೆದು ಹಾಕಬೇಕಲ್ಲವೇ? ಆ ಪ್ರತಿಮೆಗೆ ಪೂಜೆ ಮಾಡುವವರನ್ನು ಕೆಟ್ಟದಾಗಿ ನೋಡಬೇಕಲ್ಲವೆ? ಹಾಗೆಯೇ ಮುಂದುವರೆದು ನಮ್ಮ ಐತಿಹಾಸಿಕ ದೇಗುಲಗಳಾದ ಹಳೇಬೀಡು ಮತ್ತು ಬೇಲೂರಿನ ಗೋಡೆಗಳ ಮೇಲೂ ಲೈಂಗಿಕ ಕೆತ್ತನೆಗಳಿರುವುದರಿಂದ ಅವುಗಳನ್ನು ಮೊದಲು ಧ್ವಂಸ ಮಾಡಬೇಕಲ್ಲವೇ? ಅಷ್ಟು ಮಾತ್ರವಲ್ಲದೆ, ರಾಜ್ಯದ ಮತ್ತು ದೇಶದ ವಿವಿಧೆಡೆ ಇರುವ ಎಲ್ಲಾ ಐತಿಹಾಸಿಕ ದೇವಸ್ಥಾನಗಳನ್ನು ನೆಲಸಮ ಮಾಡಬೇಕಲ್ಲವೆ? ಹೀಗೆ ಮಾಡಿದರೆ ಅದು ಹುಚ್ಚುತನವಾಗುತ್ತದೆ ಎಂಬುದು ಪ್ರಜ್ಞಾವಂತರಿಗೆ ಅರ್ಥವಾಗುತ್ತದೆ....

ಇಲ್ಲಿ ಹುಸೇನರು ಸೃಷ್ಟಿಸಿದ್ದ ಇನ್ನೆರಡು ಕಲಾಕೃತಿಗಳನ್ನು ನೀಡಿದ್ದೇನೆ. ಒಂದರಲ್ಲಿ ಹನುಮಂತ ಎಲ್ಲಿಂದಲೋ ಈಗ ತಾನೆ ಹಾರಿ ಬಂದಿರುವವನಂತೆ ಅಥವಾ ಎಲ್ಲಿಗೋ ಹಾರಿ ಹೋಗಲು ತುದಿಗಾಲ ಮೇಲೆ ನಿಂತಿರುವವನಂತೆ ತೋರಿಸಿದ್ದಾರೆ ಮಾತ್ರವಲ್ಲ ಆತ ತನ್ನ ಹೃದಯ ಬಗೆದು ಅದರೊಳಗೆ ರಾಮ ಮತ್ತು ಸೀತೆಯನ್ನು ತೋರಿಸುತ್ತಿದ್ದಾನೆ. ಒಂದು ರೀತಿಯಲ್ಲಿ ಇದು ಸೂಪರ್‌ಮ್ಯಾನ್‌ನನ್ನು ಹನುಮಂತ ಮೀರಿಸುತ್ತಾನೆಂದು ತೋರುವ ಕೃತಿ. ಇದು ಎಷ್ಟು ಸುಂದರವಾಗಿದೆಯಲ್ಲವೇ. ಆದರೆ ಹಿಂದೂತ್ವವಾದಿಗಳು ಇದರಲ್ಲಿ ಸೀತೆ ಮತ್ತು ರಾಮನನ್ನು ನಗ್ನರಾಗಿ ತೋರಿಸಿದ್ದಾರೆ ಹುಸೇನ್ ಎಂದು ಹಲ್ಲುಕಡಿದಿದ್ದರು.

ಅದೇ ಧರ್ಮಲಂಪಟರು ಹುಸೇನರು ರಚಿಸಿದ್ದ 'ಭಾರತಮಾತೆ'ಯ ಕಲೆಯನ್ನೂ ವಿರೋಧಿಸಿದ್ದರು. ಅದನ್ನೂ ಇಲ್ಲಿ ನೀಡಿದ್ದೇನೆ. ಇದನ್ನು ಗಮನಿಸಿ. ಇಲ್ಲಿನ ಭಾರತ ಮಾತೆ ನಿಷ್ಕಳಂಕಳಾಗಿದ್ದಾಳೆ, ತನ್ನ ವಿವಿಧ ರಾಜ್ಯಗಳನ್ನು ತನ್ನ ಅಂಗಾಂಗಗಳ ಭಾಗವಾಗಿಸಿಕೊಂಡಿದ್ದಾಳೆ. ಆಕೆಯ ಕೇಶರಾಶಿ ಹಿಮಾಲಯ ಪರ್ವತವಾಗಿದೆ. ಸೂರ್ಯನ ಕಿರಣಗಳಲ್ಲಿ ರಾರಾಜಿಸುತ್ತಿದ್ದಾಳೆ. ಇಷ್ಟು ಸುಂದರವಾಗಿರುವ, ಸಾಂಕೇತಿಕವಾಗಿರುವ ಕಲಾಕೃತಿಯಲ್ಲಿ ವಿರೋಧಿಸುವಂತಹದ್ದು ಏನಿದೆ?

ನನಗನಿಸುವುದು ಇಷ್ಟೇ: ಅಶ್ಲೀಲತೆ ಇರುವುದು ಹುಸೇನರ ಕಲಾಕೃತಿಗಳಲಲ್ಲ, ಬದಲಾಗಿ ಹಿಂದೂತ್ವವಾದಿಗಳ ಮನಸ್ಸಿನಲ್ಲಿ...





ಶಿವ ಪಾರ್ವತಿ-ಹುಸೇನ್ ಕಂಡಂತೆ ಮತ್ತು ಎಲ್ಲೋರಾದಲ್ಲಿ

* * * * * *

ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಲೇಖಕ ಪಾಲೋ ಕೊಲ್ಹೊ ಅವರ ಬ್ಲಾಗ್ ಎಷ್ಟು ಚೆನ್ನಾಗಿರುತ್ತದೆ ಎಂದರೆ ಅದನ್ನು ನನ್ನ 'ಫೇವರೆಟ್' ಪಟ್ಟಿಯಲ್ಲಿ ಸೇರಿಸಿಕೊಂಡು ಪ್ರತೀವಾರ ತಪ್ಪದೆ ಓದುತ್ತಿರುತ್ತೇನೆ. ಕೊಲ್ಹೊ ಅವರೇ ಬರೆದಿರುವ ಅಥವಾ ಅವರ ಓದುಗರು ಕಳುಹಿಸಿರುವ ಚಿಕ್ಕಪುಟ್ಟ ಬರಹಗಳು, ಅನಿಸಿಕೆಗಳು, ಕತೆಗಳು, ಫೋಟೋಗಳು ಇತ್ಯಾದಿಗಳು ಆ ಬ್ಲಾಗ್‌ನಲ್ಲಿ ಇರುತ್ತವೆ.

ಇತ್ತೀಚೆಗೆ ಕೊಲ್ಹೊ ಅವರು ಬರೆದಿರುವ ಒಂದು ಚುಟುಕು ಹೀಗಿದೆ:

ಯಾರೋ ಒಬ್ಬರು ನನ್ನನ್ನು ಹೀಗೆ ಕೇಳಿದರು: "ನಿಮ್ಮ ಸಮಾಧಿಯ ಮೇಲೆ ಎಂತಹ ಬರಹ ಇರಬೇಕೆಂದು ಬಯಸುತ್ತೀರಿ?"

"ನನ್ನ ದೇಹವನ್ನು ದಹನ ಮಾಡಬೇಕೆಂದು ಸೂಚಿಸಿದ್ದೇನೆ. ಆದರೂ ನನಗೊಂದು ಸಮಾಧಿ ಇರುವುದಾದರೆ ಅದರ ಮೇಲೆ 'ಪಾಲೋ ಕೊಲ್ಹೊ ಜೀವಂತ ಇದ್ದಾಗಲೇ ಸತ್ತ' ಎಂದು ಬರೆದಿರಬೇಕು" ಎಂದೆ ನಾನು.

ಆಗ ಆ ವ್ಯಕ್ತಿ "ಯಾಕಿಂತಹ ಬರಹ? ಎಲ್ಲರೂ ಜೀವಂತ ಇದ್ದಾಗ ತಾನೇ ಸಾಯುವುದು?" ಎಂದ.

ಅದಕ್ಕೆ ನಾನು "ಇಲ್ಲ, ಅದು ಸರಿಯಲ್ಲ, ವ್ಯಕ್ತಿಯೊಬ್ಬ ಬದುಕಿನಲ್ಲಿ ಯಾವುದೇ ರಿಸ್ಕ್‌ಅನ್ನು ತೆಗೆದುಕೊಳ್ಳದೆ ಪ್ರತಿನಿತ್ಯ ಮಾಡುತ್ತಿರುವುದನ್ನೇ ಮತ್ತೆ ಮತ್ತೆ ಮಾಡುತ್ತಿದ್ದರೆ ಆತ ಜೀವಂತವಾಗಿ ಉಳಿದಿರುವುದಿಲ್ಲ, ಆತ್ಮಹತ್ಯೆಯಲ್ಲಿ ನನಗೆ ನಂಬಿಕೆ ಇಲ್ಲ, ಆದರೆ ಬದುಕಿನಲ್ಲಿ ಹೊಸ ಅಪಾಯಗಳಿಗೆ, ಸಾಹಸಗಳಿಗೆ ನಮ್ಮನ್ನು ಒಡ್ಡಿಕೊಂಡು ಅದಕ್ಕೆ ಸೂಕ್ತ ಬೆಲೆ ತೆತ್ತಬೇಕು. ಯಾವುದೇ ಹೊಸದನ್ನು ಮಾಡಲು ಹೆದರಿಕೆ ಆಗಬಹುದು, ಅದು ಇಷ್ಟವೂ ಇಲ್ಲದಿರಬಹುದು. ಆದರೂ ಆ ರಿಸ್ಕ್‌ಅನ್ನು ತೆಗೆದುಕೊಳ್ಳಬೇಕು. ಈ ಬದುಕಿನಲ್ಲಿ ಹೀಗೆ ಹಲವಾರು ಬಾರಿ ರಿಸ್ಕ್ ತೆಗೆದುಕೊಳ್ಳುವ ಮೂಲಕವೇ ವ್ಯಕ್ತಿಯೊಬ್ಬ ಪದೇಪದೇ ಸಾಯುತ್ತಲೇ ಸಜೀವವಾಗಿರುತ್ತಾನೆ. ನಾವು ಈ ಬದುಕನ್ನು ಅರ್ಥಮಾಡಿಕೊಳ್ಳಬೇಕೆಂದರೆ ನಾವು ಹೀಗೆ ಹಲವಾರು ಬಾರಿ ಸಾಯಲೇಬೇಕು. ಇಲ್ಲಿ 'ಸಾವು' ಅಂದರೆ ಅರ್ಥ ನಾವು ಹಳೇ ಮೌಲ್ಯಗಳನ್ನು ತೊರೆದು, ಹೊಸ ದಿಕ್ಕಿನತ್ತ ಸಾಗುವುದು. ನಾವು ಯಾವ ಕಡೆ ಹೋಗುತ್ತಿದ್ದೇವೆ ಎಂದು ಗೊತ್ತಿಲ್ಲದಿದ್ದರೂ, ಅದರ ಬಗ್ಗೆ ನಮಗೆ ಹೆದರಿಕೆ ಇದ್ದರೂ, ರಿಸ್ಕ್ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಿಗುವ ಸಂತೋಷ ಎಲ್ಲದಕ್ಕಿಂತ ಮುಖ್ಯ" ಎಂದೆ ನಾನು.

ಕೊಲ್ಹೊ ಅವರು ಈ ಚುಟುಕಿನ ನಂತರ ಹಲವು ಸಮಾಧಿ ಲೇಖನಗಳನ್ನು ಪಟ್ಟಿ ಮಾಡಿದ್ದಾರೆ:

"ಪ್ರಯತ್ನಿಸಬೇಡಿ" - ಚಾರ್ಲ್ಸ್ ಬುಕೊವ್‌ಸ್ಕಿ (ಅಮೆರಿಕದ ಬರಹಗಾರ)

"ಶ್ರೇಷ್ಠವಾದದ್ದು ಇನ್ನೂ ಬರಲಿದೆ" - ಫ್ರಾಂಕ್ ಸಿನಾಟ್ರಾ (ಪ್ರಖ್ಯಾತ ಹಾಡುಗಾರ)

"ಜಗತ್ತಿನೊಂದಿಗೆ ನಾನು ಪ್ರೇಮಿಯಂತೆ ಜಗಳವಾಡಿದೆ" - ರಾಬರ್ಟ್ ಫ್ರಾಸ್ಟ್ (ಖ್ಯಾತ ಕವಿ)

"ಬಿಡುಗಡೆ! ಕೊನೆಗೂ ಬಿಡುಗಡೆ! ದೇವರ ದಯೆಯಿಂದ ಕೊನೆಗೂ ಬಿಡುಗಡೆ ಹೊಂದಿದೆ" - ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ (ಅಮೆರಿಕದ ಮಾನವಹಕ್ಕು ಹೋರಾಟಗಾರ)

"ಜಗತ್ತೇ ಸಾಲದಿದ್ದವನಿಗೆ ಈಗ ಈ ಸಮಾಧಿ ಸಾಲುತ್ತದೆ" - ಅಲೆಕ್ಸಾಂಡರ್ ದಿ ಗ್ರೇಟ್ (ರಾಜಕುಮಾರ)

ಈ ಪಟ್ಟಿಗೆ ನನಗೆ ಇಷ್ಟವಾದ ಕೆಲವು ಸಮಾಧಿ ಲೇಖನಗಳನ್ನು ಸೇರಿಸುತ್ತಿದ್ದೇನೆ:

"ನಾನು ನನ್ನ ಸೃಷ್ಟಿಕರ್ತನನ್ನು ಭೇಟಿಯಾಗಲು ಸಿದ್ಧನಿದ್ದೇನೆ. ಆದರೆ ನನ್ನನ್ನು ಭೇಟಿ ಆಗುವಂತಹ ಉಗ್ರಪರೀಕ್ಷೆಗೆ ಸೃಷ್ಟಿಕರ್ತ ಸಿದ್ಧನಿದ್ದಾನೋ ಇಲ್ಲವೋ ಎಂಬುದು ಬೇರೆ ಮಾತು" - ಬ್ರಿಟನ್ನಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್.

"ಎಲ್ಲಾ ನಾಡುಗಳ ಕಾರ್ಮಿಕರೇ ಒಗ್ಗಟ್ಟಾಗಿ. ಎಲ್ಲಾ ತತ್ವಜ್ಞಾನಿಗಳು ಈ ಜಗತ್ತನ್ನು ಬಗೆಬಗೆಯಾಗಿ ತರ್ಕಿಸಿದ್ದಾರಷ್ಟೇ. ಅದನ್ನು ಬದಲಾಯಿಸಬೇಕಿದೆ." - ಕಾರ್ಲ್‌ಮಾರ್ಕ್ಸ್ (ಕಮ್ಯೂನಿಸ್ಟ್ ಸಿದ್ಧಾಂತರ ಪ್ರತಿಪಾದಕ)

"ಎಷ್ಟಿತ್ತು ಮಾಡಲು, ಎಷ್ಟು ಕಡಿಮೆ ಮಾಡಿದ್ದು" - ಸಿಸಿಲ್ ಜಾನ್ ರೋಡ್ಸ್ (ದಕ್ಷಿಣ ಆಫ್ರಿಕಾದ ರಾಜಕಾರಣಿ)

"ಹಿಂದಕ್ಕೆ ಕರೆಯಲ್ಪಟ್ಟೆ" - ಎಮಿಲಿ ಡಿಕಿನ್ಸನ್ (ಅಮೆರಿಕದ ಕವಿಯತ್ರಿ)

"ಈಗ ಈಕೆ ಎಲ್ಲರಂತಿದ್ದಾಳೆ" - ಫ್ರಾನ್ಸ್ ದೇಶದ ನಾಯಕ ಚಾರ್ಲ್ಸ್ ದೆ ಗಾಲ್ ಅವರು ಬುದ್ಧಿಮಾಂದ್ಯ ಪುತ್ರಿ ಅನ್ನಾಳ ಕುರಿತು

"ನನ್ನ ಧೂಳನ್ನು ಕ್ಷಮಿಸಿ" - ಡೊರೋಥಿ ಪಾರ್ಕರ್ (ಅಮೆರಿಕದ ಬರಹಗಾರ್ತಿ)

"ನಿಲ್ಲು, ಸೂರ್ಯ, ಚಲಿಸದಿರು" - ನಿಕೊಲಾಸ್ ಕೋಪರ್ನಿಕಸ್ (ಖಗೋಳತಜ್ಞ)

"ಕೊನೆಗೂ ನೆಮ್ಮದಿ — ಸ್ವೀಡನ್ನಿನ ರಾಜ ಗುಸ್ತಾವುಸ್

"ಎಂದೂ ಹುಟ್ಟಲಿಲ್ಲ, ಎಂದೂ ಸಾಯಲಿಲ್ಲ. ಡಿಸೆಂಬರ್ 11, 1931ರಿಂದ ಜನವರಿ 19, 1990ರ ತನಕ ಈ ಭೂಮಂಡಲಕ್ಕೆ ಭೇಟಿ ಮಾತ್ರ" - ಓಶೋ

ಕನ್ನಡಕ್ಕೆ ಅನುವಾದಿಸಿದರೆ ತಮ್ಮ ಸತ್ವವನ್ನು ಕಳೆದುಕೊಳ್ಳುವುದರಿಂದ ಒಂದೆರಡನ್ನು ಹಾಗೆಯೇ ನೀಡಿದ್ದೇನೆ:


"Goddamn you all: I told you so." - ಎಚ್.ಜಿ.ವೆಲ್ಸ್ (ಬ್ರಿಟನ್ನಿನ ಬರಹಗಾರ)

"That's All Folks" - ಮೆಲ್. ಬ್ಲಾಂಕ್ (ಅಮೆರಿಕದ ಹಾಸ್ಯನಟ)

ಹಾಸನ ಠಾಣೆಯಲ್ಲಿ ಪೋಲೀಸರ ಮಜಾಕು

ಹಾಸನ ಜಿಲ್ಲೆಯ ತುಂಬಾ ಈಗ ಪೊಲೀಸರ ಪೋಲಿ ಚಿತ್ರದ್ದೇ ಮಾತು. ಸಕಲೇಶಪುರವೆಂಬ ಮಲೆನಾಡಿನ ಭಾಗದಲ್ಲಂತೂ ಮುಂಗಾರು ಮಳೆಯ ನಡುವೆಯೂ ಪೊಲೀಸರ ಪೋಲಿ ಚಿತ್ರ ಬಿಸಿಬಿಸಿ ವಾತಾವರಣ ನಿರ್ಮಿಸಿದೆ.

ಇದು ಜಿಲ್ಲೆಯ ಹೆಸರಿಗೆ ಮಸಿ ಬಳಿದ ಎರಡನೇ ಅಶ್ಲೀಲ ಬೆಳವಣಿಗೆ. 2002ರಲ್ಲಿ ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಹದಿ ಹರೆಯದ ಹುಡುಗ ಹುಡುಗಿ ನಡೆಸಿದ್ದ ಕಾಮಕೇಳಿಗೆ 'ಮೈಸೂರು ಮಲ್ಲಿಗೆ' ಎಂದು ಹೆಸರಿಟ್ಟು ಹೊರಬಂದ ಸಿಡಿ ರಾಡಿಯೆಬ್ಬಿಸಿತ್ತು. ಕಳೆದ ಒಂದೂವರೆ ವರ್ಷದ ಹಿಂದೆ ಚಿತ್ರೀಕರಿಸಲಾಗಿದ್ದ ಪೊಲೀಸ್ ಠಾಣೆಯೊಳಗಿನ ಚಿತ್ರಾವಳಿಗಳು ಇದೀಗ ಸಕಲೇಶಪುರ, ಹಾಸನದ ಯುವಕರ ಮೊಬೈಲ್‌ಗಳಲ್ಲಿ ಮೆರೆದಾಡುತ್ತಿದೆ.



ನಾನು ಆತನಿಗೆ ಕಪಾಳಕ್ಕೆ ಹೊಡೆದಿದ್ದೆ. ಹೋಗಲಿ ಎಂದು ಕ್ಷಮಿಸಿ ಮೇಲಧಿಕಾರಿಗಳ ಗಮನಕ್ಕೆ ತರದೆ ಬಿಟ್ಟಿದ್ದೆ" ಎಂದು ಕಥೆ ಹೆಣೆಯುತ್ತಿದ್ದಾಳೆ.

ಒಂದೂವರೆ ವರ್ಷದ ಹಿಂದೆ...

ಈಗ್ಗೆ ಐದಾರು ದಿನಗಳ ಹಿಂದೆ ಟಿವಿ ಮಾಧ್ಯಮಗಳು ಪೈಪೋಟಿಗೆ ಬಿದ್ದಂತೆ ಸಕಲೇಶಪುರ ಪೊಲೀಸ್ ಠಾಣೆಯೊಳಗೆ ಮಹಿಳಾ ಮತ್ತು ಪುರುಷ ಪೇದೆಗಳು ಪಾಲ್ಗೊಂಡ ಅಶ್ಲೀಲ ಭಂಗಿಗಳ ವಿಡಿಯೋ ತುಣುಕುಗಳನ್ನು ಪ್ರದರ್ಶಿಸುತ್ತಾ ಘಟನೆಯನ್ನು ವಿವರಿಸಿದ್ದು ಎಲ್ಲರಿಗೂ ಜ್ಞಾಪಕವಿರಬಹುದು. ಆ ವಿಡಿಯೋದಲ್ಲಿರುವ ಹಸಿ ಹಸಿ ದೃಶ್ಯಗಳನ್ನು ಮರು ಪ್ರಸಾರ ಮಾಡುತ್ತಾ ತಮ್ಮ ಟಿಆರ್‌ಪಿ ರೇಟನ್ನು ಹೆಚ್ಚಿಸಿಕೊಳ್ಳುವ ತವಕದಲ್ಲಿ ಟಿ.ವಿ. ಮಾಧ್ಯಮಗಳಿದ್ದರೆ, ಮರ್ಯಾದಸ್ಥರು ಮುಜುಗರ ಅನುಭವಿಸುವಂತಾಗಿತ್ತು.

ಇಂಟರೆಸ್ಟಿಂಗ್ ವಿಷಯ ಅಂದರೆ ಈ ದೃಶ್ಯಾವಳಿಗಳು ಸೆರೆಯಾಗಿ ಬರೋಬರಿ ಒಂದೂವರೆ ವರ್ಷವಾಗಿ ಹೋಗಿದೆ. ಸಕಲೇಶಪುರ ಉಪ ವಿಭಾಗದ ಡಿ.ವೈ.ಎಸ್.ಪಿ ಕಲಾ ಕೃಷ್ಣಸ್ವಾಮಿ ಅವರ ಕಚೇರಿಯ ಕಂಪ್ಯೂಟರ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಪೇದೆ ಶ್ರೀಮತಿ ಚಂದ್ರಾವತಿ ಹಾಗೂ ಇದೇ ಸೆಕ್ಷನ್‌ನಲ್ಲಿ ಕೆಲಸ ಮಾಡುವ ನಂದೀಶ ಈ ಅಶ್ಲೀಲ ಚಿತ್ರಾವಳಿಯ ಪಾತ್ರಧಾರಿಗಳು. ಅದೇನು ಸಲುಗೆಯೋ, ಪ್ರೀತಿಯೋ, ಕಾಮವೋ ಅಥವಾ ಮೋಜೋ -ಭಗವಂತನೇ ಬಲ್ಲ.

ನಂದೀಶನದ್ದೇ ಕೆಲಸ!

ಪೊಲೀಸ್ ಪೇದೆ ನಂದೀಶನಿಗೆ ಅದೆಂಥಾ ಕಾಮತೃಷೆ ಕಾಡುತ್ತಿತ್ತೋ ಗೊತ್ತಿಲ್ಲ. ಮಹಿಳಾ ಪೇದೆ ಚಂದ್ರಾವತಿ ಕೆಲಸ ಮಾಡುತ್ತಿದ್ದ ವೇಳೆ ಈತ ಕಂಪ್ಯೂಟರ್ ಸೆಕ್ಷನ್‌ಗೆ ಹೋಗಿ ಮೊದಲು ಕ್ಯಾಮರಾ ರೆಕಾರ್ಡಿಂಗ್ ಆನ್ ಮಾಡಿದ್ದಾನೆ. ಬಳಿಕ ಆತ ಚಂದ್ರಾವತಿಯನ್ನು ಕಾಮಕ್ಕೆ ಪ್ರಚೋದಿಸುತ್ತಾನೆ. ಮುಂದೇನಾಯಿತು ಎಂಬುದನ್ನು ಈಗಾಗಲೇ ದೃಶ್ಯ ಮಾಧ್ಯಮಗಳು ಸವಿವರವಾಗಿ ಬಿತ್ತರಿಸಿವೆ. ಇಲ್ಲಿ ಚಂದ್ರಾವತಿ ಅಮಾಯಕಳೆಂದೂ, ನಂದೀಶ ತಪ್ಪಿತಸ್ಥನೆಂದೂ ಹೇಳಲು ಹೋದರೆ ಅದು ಪಕ್ಕಾ ಮೂರ್ಖತನವಾಗುತ್ತದೆ. ಇಬ್ಬರ ಒಪ್ಪಿಗೆಯೂ ಇರುವುದಕ್ಕೆ ವಿಡಿಯೋ ತುಣುಕುಗಳೇ ಸಾಕ್ಷಿ ನುಡಿಯುತ್ತವೆ. ಚಂದ್ರಮತಿ ಕೊಂಚ ಕೊಸರಾಡಿದರೂ ನಂತರ ನಂದೀಶನಿಗೆ ಸಹಕರಿಸಿದ್ದಾಳೆ. ಈ ಇಬ್ಬರ ಸಂಬಂಧ ತಿಳಿಯಲು ಅಷ್ಟು ಸಾಕು!

ಆದರೆ ಈಗ ಚಂದ್ರಾವತಿ ಉಲ್ಟಾ ಹೊಡೆದಿದ್ದಾಳೆ. "ನನ್ನ ಮೇಲೆ ಆತ ಬಲಾತ್ಕಾರ ಮಾಡಲು ಬಂದ. ಆಗ ನಾನು ಆತನಿಗೆ ಕಪಾಳಕ್ಕೆ ಹೊಡೆದಿದ್ದೆ. ಹೋಗಲಿ ಎಂದು ಕ್ಷಮಿಸಿ ಮೇಲಧಿಕಾರಿಗಳ ಗಮನಕ್ಕೆ ತರದೆ ಬಿಟ್ಟಿದ್ದೆ" ಎಂದು ಕಥೆ ಹೆಣೆಯುತ್ತಿದ್ದಾಳೆ.

ಮೊದಲೇ ಗೊತ್ತಿತ್ತು

ಸಕಲೇಶಪುರ ಉಪವಿಭಾಗದ ಡಿವೈಎಸ್ಪಿ ಕಚೇರಿಯ ಕಂಪ್ಯೂಟರ್ ಕೊಠಡಿಯಲ್ಲಿ ಇಂತಹದೊಂದು ಸೆಕ್ಸ್ ಪುರಾಣ ನಡೆದಿದೆ ಎಂದು ಅಂದಿನ ಡಿವೈಎಸ್ಪಿ ಕಲಾ ಕೃಷ್ಣಸ್ವಾಮಿಯವರಿಂದ ಹಿಡಿದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಶರತ್ ಚಂದ್ರ ಅವರಿಗೂ ತಿಳಿದಿತ್ತು.

ಇಬ್ಬರನ್ನೂ ಕರೆಸಿ ಉಗಿದು ಇಬ್ಬರನ್ನೂ ಬೇರೆಡೆಗೆ ಕಳುಹಿಸಲಾಯಿತು. ಮನ್ಮಥ ಪೇದೆ ನಂದೀಶನನ್ನು ಯಸಳೂರು ಠಾಣೆಗೂ ಮತ್ತು ಚಂದ್ರಾವತಿಯನ್ನು ಆಕೆಯ ಮೂಲ ಠಾಣೆ ಆಲೂರಿಗೂ ವರ್ಗಾವಣೆ ಮಾಡಿ ಕೈ ತೊಳೆದುಕೊಂಡರು.

ಪೇದೆ ನಂದೀಶನಿಗೆ ತನ್ನ ಸಾಧನೆಯನ್ನು ತನ್ನ ಸ್ನೇಹಿತರಿಗೆ ಹೇಳಿಕೊಳ್ಳುವ ಖಯಾಲಿಯಿತ್ತು. ಈತನಿಗೆ ಹುಡುಗಿಯರೊಂದಿಗೆ ಫ್ಲರ್ಟ್ ಮಾಡುವ ತೆವಲೂ ಇತ್ತು. ಮತ್ತೊಂದು ಇಂಟರೆಸ್ಟಿಂಗ್ ವಿಷಯ ಅಂದರೆ ಪೇದೆ ಚಂದ್ರಾವತಿಯೊಂದಿಗಿನ ರಸನಿಮಿಷಗಳನ್ನು ತಾನೇ ಚಿತ್ರಿಸಿ ಅದನ್ನು ತನ್ನ ಸಮಕಾಲೀನ ಪೇದೆಗಳಿಗೆ ತೋರಿಸುತ್ತಾ ಹಿಗ್ಗಿದ್ದ ನಂದೀಶ. ಆ ನಂತರವೇ ಇದು ಮೇಲಧಿಕಾರಿಗಳ ಗಮನಕ್ಕೆ ಬಂದು ಇಬ್ಬರ ವರ್ಗಾವಣೆಗೆ ಕಾರಣವಾಗಿದ್ದು.

ಕಲರ್ಫುಲ್ ನಂದಿ!

ತಾನು ಪರಿಶಿಷ್ಟ ಜನಾಂಗದವನು ಎಂಬ ಹಣೆಪಟ್ಟಿಯೊಂದಿಗೆ ತಮ್ಮ ಸ್ವಜಾತಿಯ ಡಿವೈಎಸ್ಪಿ ಕಲಾ ಕೃಷ್ಣಸ್ವಾಮಿ ಅವರ ಆಸುಪಾಸಿನಲ್ಲಿ ಕಾಣಿಸಿಕೊಂಡ ನಂದೀಶ ಪೊಲೀಸ್ ಡ್ರೆಸ್‌ನಲ್ಲಿ ಕಾಣಿಸಿಕೊಂಡದ್ದಕ್ಕಿಂತ ಕಲರ್ ಕಲರ್ ಜೀನ್ಸ್, ಟೀ ಷರ್ಟ್‌ನಲ್ಲಿ ಕಾಣಿಸಿಕೊಂಡಿದ್ದೇ ಹೆಚ್ಚು ಎನ್ನುತ್ತಾರೆ ಸಕಲೇಶಪುರದ ಜನ. ಈತ ಪಾಸ್‌ಪೋರ್ಟ್ ಚೆಕ್ ಮಾಡುವ ನೆಪದಲ್ಲಿ ಅದೆಷ್ಟೋ ಹುಡುಗಿಯರಿಗೆ ತನ್ನ ಮೊಬೈಲ್ ನಂಬರ್ ಪಾಸ್ ಮಾಡುವ ಗೀಳು ಇಟ್ಟುಕೊಂಡಿದ್ದ.

ಪಾಸ್‌ಪೋರ್ಟ್ ತಪಾಸಣೆ ಸಂದರ್ಭದಲ್ಲಿ ಹುಡುಗಿಯರ ಪಾಸ್‌ಪೋರ್ಟ್ ಇದ್ದರೆ ಮುಗಿಯಿತು. ಮೊದಲು ನಂದೀಶ ಅಂತಹ ಮನೆಗಳಿಗೆ ಭೇಟಿ ಕೊಟ್ಟು ಬರುತ್ತಿದ್ದ ಎನ್ನುವ ಮಾತು ಠಾಣಾ ವಲಯದಿಂದ ಗುಸುಗುಡುತ್ತಿದೆ. ಹೀಗೆ ನಂಬರ್ ಕೊಡಲು ಹೋಗಿ ಹುಡುಗಿಯೊಬ್ಬಳಿಂದ ಉಗಿಸಿಕೊಂಡಿದ್ದೂ ಇದೆ. ಆದರೂ ಜಾತಿ ಮುಲಾಜಿಗೆ ಬಿದ್ದು ಅಂದಿನ ಡಿವೈಎಸ್ಪಿ ಕಲಾ ಕೃಷ್ಣಸ್ವಾಮಿ ನಂದೀಶನನ್ನು ಪೋಷಿಸಿದ್ದರು.

ಶಿಕ್ಷೆ ಚಂದ್ರಾವತಿಗೆ ಮಾತ್ರ?

ಅಶ್ಲೀಲ ಚಿತ್ರೀಕರಣದ ಹೆಸರಿನಲ್ಲಿ ಇಬ್ಬರನ್ನು ಸಹ ಬೇರೆ ಬೇರೆ ಕಡೆಗೆ ವರ್ಗಾ ಮಾಡಲಾಗಿತ್ತಲ್ಲಾ? ಮೂರು ತಿಂಗಳು ಯಸಳೂರಿನಲ್ಲಿ ಕೆಲಸ ಮಾಡಿದ ನಂದೀಶ ಪುನಃ ಜಾತಿ ಪ್ರೀತಿ ಆಧಾರದಲ್ಲಿ ಸಕಲೇಶಪುರದ ಡಿವೈಎಸ್ಪಿ ಕಲಾ ಕೃಷ್ಣಸ್ವಾಮಿ ಅವರ ಕಚೇರಿಯಲ್ಲಿ ಪ್ರತ್ಯಕ್ಷನಾದ. ಇದು ಸಹಜವಾಗಿಯೇ ಸಕಲೇಶಪುರದ ನಗರ ಠಾಣೆಯಲ್ಲಿದ್ದ ಪೇದೆಗಳಿಗೂ ಮತ್ತು ಡಿವೈಎಸ್ಪಿ ಕಚೇರಿಯಲ್ಲಿದ್ದ ಉಳಿದ ಮಾನವಂತ ಸಿಬ್ಬಂದಿಗಳಿಗೂ ಕುದಿಯುವ ನೀರಲ್ಲಿ ಕೆಂಪು ಮೆಣಸಿನ ಕಾಯಿ ಪುಡಿ ಬೆರಸಿ ಕುಡಿಸಿದ ಅನುಭವ ತರಿಸಿತು. ಈ ಕುದಿತದ ಪರಿಣಾಮವಾಗಿಯೇ ಈಗ ಒಂದು ವರ್ಷದ ಹಿಂದಿನ ಸಿಡಿ ಬಹಿರಂಗವಾಗಿದೆ.

ಡಿವೈಎಸ್ಪಿ ವರ್ಗಾವಣೆ

ಕಾಮುಕ ನಂದೀಶನಿಗೆ ಒಂದು ಗತಿ ಕಾಣಿಸಲು ಸ್ಕೆಚ್ಚು ಹಾಕಿದ್ದ ಇಲಾಖೆಯೊಳಗಿನ ಕೆಲ ಸಿಬ್ಬಂದಿ ಕೊನೆಗೂ ಮುಹೂರ್ತ ಫಿಕ್ಸ್ ಮಾಡಿದರು. ಈ ನಡುವೆಯೇ ಸಕಲೇಶಪುರ ಡಿವೈಎಸ್ಪಿಯಾಗಿದ್ದ ಕಲಾಕೃಷ್ಣಸ್ವಾಮಿ ಅವರನ್ನು ಸರ್ಕಾರ ಚಿತ್ರದುರ್ಗಕ್ಕೆ ವರ್ಗ ಮಾಡಿ ಅಲ್ಲಿಗೆ ಖಡಕ್ ಅಧಿಕಾರಿ ಉಪೇಂದ್ರ ಎಂಬುವವರನ್ನು ನೇಮಿಸಿತು. ಅದೇ ಸಮಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಕೆ.ವಿ.ಶರತ್‌ಚಂದ್ರ ಅವರು ಬಡ್ತಿ ಪಡೆದು ಬೆಂಗಳೂರಿಗೆ ಹೋದರೆ ಆ ಸ್ಥಾನಕ್ಕೆ ಖಡಕ್ ಯುವ ಪೊಲೀಸ್ ಅಧಿಕಾರಿ ಅಮಿತ್ ಸಿಂಗ್ ಬಂದು ಕುಳಿತರು.

ಹುಡುಗಿಯರೊಂದಿಗೆ ತಾನು ನಡೆಸುವ ಫ್ಲರ್ಟ್‌ಗಳನ್ನು ಗೌಪ್ಯವಾಗಿ ರೆಕಾರ್ಡ್ ಮಾಡಿಕೊಂಡು ಅದನ್ನು ತನ್ನ ಸಹೋದ್ಯೋಗಿಗಳಿಗೆ ತೋರಿಸುತ್ತಾ ಎಂಜಾಯ್ ಮಾಡುತ್ತಿದ್ದ ನಂದೀಶನಿಗೆ ಆತನ ತಂತ್ರವೇ ರಿವರ್ಸ್ ಹೊಡೆಯಿತು. ಇಲಾಖೆಯ ಸಿಬ್ಬಂದಿಯೇ ಆತನಿಂದ ಆ ದೃಶ್ಯಗಳನ್ನು ಕಾಪಿ ಮಾಡಿಕೊಂಡು ಹೊರ ಜಗತ್ತಿಗೆ ಪ್ರಸಾರ ಮಾಡಿದರು. ಅದು ಮಾಧ್ಯಮದವರ ಕದ ತಟ್ಟುವುದಕ್ಕೆ ತಡವಾಗಲಿಲ್ಲ.

ಈ ವಿಷಯ ಬೆಳಕಿಗೆ ಬಂದ ತಕ್ಷಣ ಎಸ್ಪಿ ಅಮಿತ್ ಸಿಂಗ್ ಈ ಬಗ್ಗೆ ಸೂಕ್ತ ತನಿಖೆ ನಡೆಸಿ ವರದಿ ನೀಡುವಂತೆ ಡಿವೈಎಸ್ಪಿ ಉಪೇಂದ್ರ ಅವರಿಗೆ ಸೂಚನೆ ನೀಡಿದ್ದಾರೆನ್ನಲಾಗಿದೆ. ಸದ್ಯ ಚಂದ್ರಾವತಿಯನ್ನು ಪ್ರೀತಿಸಿ ಮದುವೆಯಾಗಿದ್ದ ಅವರ ಪತಿ ವಕೀಲ ಬಸವರಾಜು ಮತ್ತವರ ಇಬ್ಬರು ಮಕ್ಕಳು ತಾವು ಮಾಡದ ತಪ್ಪಿಗೆ ಅಜ್ಞಾತವಾಸ ಅನುಭವಿಸುವಂತಾಗಿದೆ. ಅತ್ತ ಚಂದ್ರಾವತಿ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿಕೊಳ್ಳುತ್ತಿದ್ದಾಳೆ. ನಂದೀಶ ಸದ್ಯಕ್ಕೆ ಯಾರ ಕೈಗೂ ಸಿಗದೆ ತಲೆ ಮರೆಸಿಕೊಂಡಿದ್ದಾನೆ.

ನಂದೀಶನ ಕಾಮುಕತನ, ದರ್ಪಗಳ ಅರಿವಿರುವ ಸಿಬ್ಬಂದಿ ಆತ ಇಲಾಖೆಯಿಂದ ಶಾಶ್ವತವಾಗಿ ತೊಲಗುವುದನ್ನು ಎದುರು ನೋಡುತ್ತಿದ್ದಾರೆ. ❖

ಹಾಸನದಲ್ಲೂ ನಡೆದಿತ್ತು ಇಂತಹದ್ದೇ ಪ್ರಕರಣ


ಸಕಲೇಶಪುರದ ಪಿಸಿಗಳ ಈ ಅಶ್ಲೀಲ ವರ್ತನೆ ಕುರಿತು ಇಲಾಖೆಯಲ್ಲೇ ಗೊತ್ತಾದಾಗ ನಂದೀಶ ಮತ್ತು ಚಂದ್ರಾವತಿಯನ್ನು ಅಂದಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಶರತ್‌ಚಂದ್ರ ಇಲ್ಲಿಂದ ವರ್ಗ ಮಾಡಿದ್ದರು. ಆದ್ರೆ ಹಾಸನದಲ್ಲಿಯೂ ಇಂತಹದ್ದೆ ಒಂದು ಪ್ರಕರಣ ನಡೆದಿದ್ದು ಇದೇ ಅಧಿಕಾರಿ ಅದನ್ನು ರಾಜೀ ಮೂಲಕ ಬಗೆಹರಿಸಿದ್ದರು.

ಆಗ ಹಾಸನದ ಬಡಾವಣೆ ಠಾಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಮಹಾಶಯನೊಬ್ಬ ಹಾಸನ ನಗರ ಠಾಣೆಯಲ್ಲಿದ್ದ ಮಹಿಳಾ ಪೇದೆಯೊಬ್ಬಳೊಂದಿಗೆ ಡೇಟಿಂಗ್ ಶುರುವಿಟ್ಟುಕೊಂಡಿದ್ದ. ಮಾತ್ರವಲ್ಲದೆ ಹೊತ್ತಲ್ಲದ ಹೊತ್ತಿನಲ್ಲಿ ನಗರದ ಕೆ.ಆರ್.ಪುರಂ ಬಡಾವಣೆಯಲ್ಲಿ ಪ್ರೈವೇಟ್ ಗೆಸ್ಟ್ ಹೌಸ್ ಮಾಡಿಕೊಂಡು ಅಲ್ಲಿಗೆ ಆಕೆಯೊಂದಿಗೆ ಹೋಗಿ ಬರಲಾರಂಭಿಸಿದ್ದ. ಈ ವಿಷಯ ಇಡೀ ಇಲಾಖೆಗೆ ಮಾತ್ರವಲ್ಲದೆ ಈ ಸಬ್ ಇನ್ಸ್‌ಪೆಕ್ಟರ್ ಮಹಾಶಯನ ಧರ್ಮ ಪತ್ನಿಗೂ ಮತ್ತು ಮಹಿಳಾ ಪೊಲೀಸ್ ಪೇದೆಯ ಪತಿಗೂ ತಿಳಿದು ರಂಪಾಟವಾಗಿತ್ತು.

ಆನಂತರ ಮಹಿಳಾ ಪೊಲೀಸ್ ಪೇದೆಯ ಪತಿರಾಯ ಜೀವನದಲ್ಲಿ ಜಿಗುಪ್ಸೆಗೊಂಡು ವಿಷ ಸೇವಿಸಿ ನಗರದ ಸಂಜೀವಿನಿ ನರ್ಸಿಂಗ್ ಹೋಂನಲ್ಲಿ ದಾಖಲಾಗಿದ್ದ. ಅತ್ತ ಯಂಗ್ ಅಂಡ್ ಎನರ್ಜೆಟಿಕ್ ಎನ್ನುತ್ತಾ ಅಹಂಕಾರದ ತುತ್ತ ತುದಿಯಲ್ಲಿದ್ದ ಸಬ್‌ಇನ್ಸ್‌ಪೆಕ್ಟರ್ ಸಾಹೇಬರ ಧರ್ಮಪತ್ನಿ ತಾನೂ ವಿಷ ಕುಡಿಯುವುದಾಗಿ ಎಸ್.ಪಿ. ಶರತ್‌ಚಂದ್ರ ಅವರ ಬಳಿ ಕಣ್ಣೀರಿಟ್ಟಿದ್ದರು. ಇದೆಲ್ಲದರ ಪರಿಣಾಮವಾಗಿ ಶರತ್‌ಚಂದ್ರ ಸಾಹೇಬರು ಎರಡೂ ಕುಟುಂಬಗಳನ್ನು ಕರೆಸಿ ಪಂಚಾಯತಿ ನಡೆಸಿದರು. ಮಾತ್ರವಲ್ಲದೆ, ಮಹಿಳಾ ಪೇದೆಯ ಪತಿಗೂ ಮತ್ತು ಮಹಿಳಾ ಪೇದೆಗೂ ವಿಚ್ಛೇದನ ಕೊಡಿಸಿದರು. ಮತ್ತು ಆಕೆಯನ್ನು ಅದೇ ಠಾಣೆಯಲ್ಲಿ ಕೆಲಸದಲ್ಲಿ ಮುಂದುವರೆಯುವಂತೆ ಮಾಡಿದರು.

ಕೆಲದಿನಗಳ ನಂತರ ಆ ಸಬ್‌ಇನ್ಸ್‌ಪೆಕ್ಟರ್ ಮಹಾಶಯನ ಠಾಣೆಯಲ್ಲೇ ಅದೇ ಹಳೆಯ ಪ್ರೇಯಸಿ ಠಾಣಾ ಪೇದೆಯಾಗಿದ್ದಳು. ಇಡೀ ಇಲಾಖೆಯ ಸಿಬ್ಬಂದಿಗಳು ಇದೇನು ಅಸಹ್ಯ ಎಂದುಕೊಳ್ಳುವಷ್ಟರಲ್ಲಿ ಡಿವೈಎಸ್ಪಿ ಚನ್ನಬಸಪ್ಪ ಮಹಿಳಾ ಪೇದೆಯನ್ನು ದುದ್ದ ಠಾಣೆಗೆ ಒಒಡಿ ಮೇಲೆ ಕಳುಹಿಸಿದರು. ಇದನ್ನು ಯಾಕೆ ಇಲ್ಲಿ ಪ್ರಸ್ತಾಪ ಮಾಡಬೇಕಾಯಿತೆಂದರೆ ಪೊಲೀಸ್ ಇಲಾಖೆಯಲ್ಲಿ ಯಾರೇ ತಪ್ಪು ಮಾಡಿದರೂ ಅದಕ್ಕೆ ಮಹಿಳೆಯೇ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂಬುದನ್ನು ನೆನಪಿಸಲು! ❖

ಆನಂದರಾಶಿ : ಹದಿನೈದು ಲಕ್ಷ ಮುಂಡಾಯಿಸಿದ ಬ್ರೋಕರ್ ಮುರಳಿ



ಮುರಳಿ

ಪೊಲೀಸ್ ಇಲಾಖೆ, ಮಾಧ್ಯಮಗಳು ಅದೆಷ್ಟೇ ಎಚ್ಚರ ವಹಿಸಿದರೂ ಬೆಂಗಳೂರಿನಲ್ಲಿ ಬ್ಲೇಡ್ ಕಂಪನಿಗಳಾಗಲಿ, ತರಹೇವಾರಿ ವಂಚನೆಗಳಾಗಲಿ ಕಡಿಮೆಯಾಗಿಲ್ಲ. ಇವರ ಕರಾಮತ್ತುಗಳ ಅರಿವಿದ್ದರೂ ಕೂಡಾ ಆರ್ಥಿಕ ಹಪಾಹಪಿಯಿಂದಾಗಿ ಬಲಿ ಬೀಳುವವರ ಸಂಖ್ಯೆಯೂ ಕರಗುತ್ತಿಲ್ಲ. ಇಂಥಾ ಕಂಪನಿಗಳು ಮತ್ತು ಅವುಗಳ ಭೂಮಿಕೆಯಿಂದ ಕಣಕ್ಕಿಳಿಯುವವರು ಎಂಥಾ ಪ್ರಳಯಾಂತಕರೆಂದರೆ, ಎಲ್ಲಾ ತಿಳಿದ ಅಕ್ಷರಸ್ಥರನ್ನೂ ಕೂಡಾ ಯಾಮಾರಿಸಿ ಬಿಡುತ್ತಾರೆ. ಸದ್ಯ ಜಯನಗರದ ಆನಂದರಾಶಿ ಕಂಪನಿಯ ಕಡೆಯಿಂದ ಇಂತಹುದೊಂದು ವಂಚನೆ ನಡೆದುಹೋಗಿದೆ.

ಆನಂದರಾಶಿ ಶೇರು ವ್ಯವಹಾರ ನಡೆಸುವ ಕಂಪನಿ. ಇದರ ಮ್ಯಾನೇಜರ್ ಅಂತ ಹೇಳಿಕೊಂಡೇ ಅಸಂಖ್ಯ ಜನರಿಗೆ ನಾಮ ತೀಡಿರುವವನು ಎಸ್. ಮುರಳಿಕೃಷ್ಣ ಈತ ಚಿಕ್ಕಬಳ್ಳಾಪುರ ತಾಲ್ಲೂಕಿನ ಗುಡಿಬಂಡೆ ಮೂಲದವನು. ಇಂಥಾ ಆಸಾಮಿಯಿಂದ ಅಖಂಡ ಹದಿನೈದು ಲಕ್ಷಕ್ಕೆ ವಂಚಿಸಿಕೊಂಡಿರುವಾಕೆ ಚಾಮರಾಜಪೇಟೆಯ ಗೃಹಿಣಿ ಅಂಬಿಕಾ. ಹಣಗಳಿಸುವ ಮನುಷ್ಯ ಸಹಜ ಹಂಬಲಿಕೆಯಿಂದ ಕಷ್ಟಪಟ್ಟು ದುಡಿದ ಕಾಸನ್ನು ಮುರಳಿಕೃಷ್ಣನ ಕೈಗಿಟ್ಟ ಈಕೆ ತನ್ನದೇ ಹಣ ಮರಳಿ ಪಡೆಯಲು ಇನ್ನಿಲ್ಲದಂತೆ ಹರಸಾಹಸ ಪಡುತ್ತಿದ್ದಾರೆ.

ಅಂಬಿಕಾ ಆನ್‌ಟೈಮ್ ಸಾಫ್ಟ್‌ವೇರ್ ಟ್ರೇನಿಂಗ್ ಸಂಸ್ಥೆಯ ಎಂ.ಡಿ. ಆಗಿರುವವರು. ಈಕೆಯ ಗಂಡ ಉಮೇಶ ಚಿಕ್ಕಾಬಳ್ಳಾಪುರದ ಗುಡಿಬಂಡೆಯವರು. ಮುರಳಿಕೃಷ್ಣ ಕೂಡಾ ಅದೇ ಊರಿನವನಾದ್ದರಿಂದ ಗೆಳೆತನ ಬೆಳೆದು ಈ ಕುಟುಂಬಕ್ಕೆ ಹತ್ತಿರಾಗಿದ್ದ. ತನ್ನನ್ನು ತಾನು ಮಹಾ ಸಾಚಾ ಅಂತಲೇ ತೋರಿಸಿಕೊಳ್ಳುತ್ತಿದ್ದ ಮುರಳಿ ತಾನು ಜಯನಗರದ 4 ನೇ ಹಂತದಲ್ಲಿರುವ ಆನಂದರಾಶಿ ಕಂಪನಿಯ ಮ್ಯಾನೇಜರ್ ಅಂತ ಸುಳ್ಳು ಒದರಿದ್ದ. ಅಂಬಿಕಾ ಹಾಗೂ ಉಮೇಶ್‌ಗೆ ಕೂಡಾ ಈ ಬಗ್ಗೆ ಗುಮಾನಿ ಹುಟ್ಟಲಿಲ್ಲ. ತದನಂತರ ಈ ದಂಪತಿಗೆ ತೀರಾ ಹತ್ತಿರದ ಗೆಳೆಯನಾಗಿ ಬದಲಾದ ಮುರಳಿ ತಣ್ಣಗೆ ವಂಚನೆಯ ವರಸೆ ಶುರುವಿಟ್ಟುಕೊಂಡ. 'ನಮ್ಮ ಕಂಪನಿ ತುಂಬಾ ಫೇಮಸ್ಸು. ಇದಕ್ಕೆ ಹಣ ಇನ್ವೆಸ್ಟ್ ಮಾಡಿದರೆ ಮೂರೇ ಮೂರು ತಿಂಗಳಲ್ಲಿ ಒಟ್ಟು ಮೊತ್ತಕ್ಕೆ 30 ಪರ್ಸೆಂಟ್ ಸೇರಿಸಿ ಕೊಡುತ್ತೇವೆ' ಅಂತ ಆಸೆ ಹುಟ್ಟಿಸಲಾರಂಭಿಸಿದವನು ಬರುಬರುತ್ತಾ ಇನ್ವೆಸ್ಟ್ ಮಾಡುವಂತೆ ದುಂಬಾಲು ಬೀಳಲಾರಂಭಿಸಿದ. ಜೊತೆಗೆ ಕೊಟ್ಟ ಹಣಕ್ಕೆ ಯಾವುದೇ ರೀತಿಯ ಮೋಸ ಆಗುವುದಿಲ್ಲ ಅಂತಲೂ ಆಶ್ವಾಸನೆ ಕೊಟ್ಟ. ಹೇಳಿಕೇಳಿ ಈ ದಂಪತಿಗೆ ಮುರಳಿಕೃಷ್ಣನೊಂದಿಗೆ ಅಖಂಡ 20 ವರ್ಷಗಳ ಪರಿಚಯವಿತ್ತಲ್ಲಾ? ಅದಕ್ಕೆ ಸರಿಯಾಗಿ ತಾನು ಆನಂದರಾಶಿಯ ಮ್ಯಾನೇಜರ್ ಅಂತ ಥರಥರದ ಪ್ರೂಫ್ ಮೂಲಕ ನಂಬಿಸಿದ್ದರಿಂದ ಅಂಬಿಕಾ ಹಾಗೂ ಉಮೇಶ್ ಇಂಡಸ್ ಇಂಡ್ ಬ್ಯಾಂಕ್‌ನ ಬಸವನಗುಡಿ ಬ್ರಾಂಚ್‌ಗೆ 5 ಲಕ್ಷದ ಅಕೌಂಟ್ ಚೆಕ್ ಅನ್ನು ಮುರಳಿಯ ಕೈಗಿಟ್ಟರು. ಅದಾಗಿ ಮೂರು ತಿಂಗಳವರೆಗೆ ಮುರಳಿ ಮುಗುಮ್ಮಾಗೇ ಇದ್ದ. ಅಂಬಿಕಾ ಈ ಬಗ್ಗೆ ವಿಚಾರಿಸಿದ ಬಳಿಕವಷ್ಟೆ 70 ಸಾವಿರವನ್ನು ಆನಂದರಾಶಿ ಚೆಕ್ ಮೂಲಕ ಆಕೆಯ ಅಕೌಂಟಿಗೆ ಹಾಕಿಸಿದ. ಇದರಿಂದಾಗಿ ಈ ದಂಪತಿಯ ನಂಬುಗೆ ಇನ್ನೂ ಹೆಚ್ಚಿತು. ಅದಾಗಿ ಕೆಲ ದಿನಗಳವರೆಗೆ ಮುರಳಿ ಮಾತೇ ಆಡದಿದ್ದಾಗ ಅಂಬಿಕಾ ಹಣ ವಾಪಸು ಕೊಡುವಂತೆ ಕೇಳಿದ್ದಾರೆ. ಆತ ಇನ್ನೇನೇನೋ ಕಥೆ ಕಟ್ಟಿದ್ದೇ ಈ ದಂಪತಿ ಇನ್ನೊಂದು ಹತ್ತು ಲಕ್ಷವನ್ನು ಕೊಟ್ಟಿದ್ದಾರೆ. ಎರಡು ತಿಂಗಳ ನಂತರ 2 ಲಕ್ಷ ರೂಪಾಯಿ ಆನಂದರಾಶಿ ಕಂಪನಿ ಮೂಲಕವೇ ಈ ದಂಪತಿಯ ಖಾತೆಗೆ ಜಮೆ ಆಗಿದೆ.

ಆದರೆ 2010 ಮೇ ತಿಂಗಳಿಂದ ರಿಟರ್ನ್ಸ್ ಬರುವುದು ನಿಂತೇಹೋಯಿತು. ಈ ಬಗ್ಗೆ ವಿಚಾರಿಸಿದರೆ ವಂಚಕ ಮುರಳಿ ಸುಮ್ಮಸುಮ್ಮನೆ ಗಡುವು ಹೇಳುತ್ತಾ ಕಾಲ ತಳ್ಳಲಾರಂಭಿಸಿದ. ಅಂಬಿಕಾ ಮತ್ತು ಉಮೇಶ್‌ಗೆ ಮೋಸಹೋದವರ ಸೂಚನೆ ಸಿಕ್ಕಿದ್ದು ಆವಾಗಲೇ. ಅಖಂಡ ಹತ್ತೂ ಚಿಲ್ಲರೆ ಲಕ್ಷ ಕೈತಪ್ಪುತ್ತದೆಂಬ ಧಾವಂತದಲ್ಲಿ ಪದೇಪದೇ ವಿಚಾರಿಸಿದ್ದೇ ಮುರಳಿ ಪೂರ್ತಿ ಉಲ್ಟಾ ಹೊಡೆದ. 'ನಿಮ್ಮ ಹಣವನ್ನು ಶೇರು ಮಾರ್ಕೆಟ್‌ನಲ್ಲಿ ತೊಡಗಿಸಿದ್ದೀನಿ. ಅದೀಗ ಲಾಸ್‌ನಲ್ಲಿದೆ. ಏನ್ ಮಾಡ್ತೀರೋ ಮಾಡ್ಕೊಳ್ಳಿ' ಅಂತ ಅವಾಜ್ ಹಾಕಿಬಿಟ್ಟ. ಇದಲ್ಲದೆ ಜಾಸ್ತಿ ಮಾತಾಡಿದರೆ ಕೊಂದೇಬಿಡುವುದಾಗಿಯೂ ಬೆದರಿಕೆ ಹಾಕಿದ. ಈ ಬಗ್ಗೆ ಜಯನಗರದಲ್ಲಿರುವ ಆನಂದರಾಶಿ ಶೇರ್ ಮತ್ತು ಸ್ಟಾಕ್ ಬ್ರೋಕರ್ ಕಂಪನಿಗೆ ಹೋಗಿ ವಿಚಾರಿಸಿದರೆ ಮುರಳಿಯ ನಿಜಬಣ್ಣ ಬಯಲಾಗಿದೆ. ಅಷ್ಟಕ್ಕೂ ಆತ ಕಂಪನಿಯಲ್ಲಿ ಬ್ರೋಕರ್ ಆಗಿ ಕೆಲಸ ಮಾಡುವಾತ. ಇದರ ಮ್ಯಾನೇಜರ್ ನಾಗರಾಜು ಪ್ರಕಾರ ಅಂಬಿಕಾರಿಂದ ತೆಗೆದುಕೊಂಡ 15 ಲಕ್ಷ ಡಿಪಾಸಿಟ್ ಆಗಿದೆ. ಆದರದನ್ನು ಶೇರ್ ಮೇಲೆ ಹಾಕಿದ್ದರಿಂದ ನಷ್ಟ ಆಗಿದೆ. ಇದರಲ್ಲಿ ಕಂಪನಿಯದ್ದೇನೂ ತಪ್ಪಿಲ್ಲ! ಆದರೆ ಖಂಡಿತವಾಗಿಯೂ ಇದರಲ್ಲಿ ಆನಂದರಾಶಿ ಕಂಪನಿಯ ತಪ್ಪಿದೆ. ಇದರ ಮಹಾನುಭಾವರು ಮುರಳಿಯಂಥವರನ್ನು ಮುಂದೆಬಿಟ್ಟು ಹಣ ಹೊಡೆಯುತ್ತಿದ್ದಾರೆಂಬ ಗುಮಾನಿಗಳೂ ದಟ್ಟವಾಗುತ್ತವೆ. ಈ ಹದಿನೈದು ಲಕ್ಷದ ವ್ಯವಹಾರ, ಆನಂದರಾಶಿ ಕಂಪನಿಯ ಹೆಸರಲ್ಲೇ ನಡೆದಿದೆ. ಈಗ ವಂಚನೆಯಾದ ಸಂದರ್ಭದಲ್ಲಿ ತನಗೂ ಅದಕ್ಕೂ ಸಂಬಂಧವಿಲ್ಲ ಅನ್ನುವುದು ಶುದ್ಧ ವಂಚಕತನ.

ಈ ರೀತಿ ವಂಚನೆಗೊಳಗಾಗಿರುವ ಅಂಬಿಕಾ ಮತ್ತು ಉಮೇಶ್ ದಂಪತಿ ಪೊಲೀಸರಿಗೂ ದೂರು ನೀಡಿದ್ದಾರೆ. ಪೊಲೀಸರೂ ಸಹ ಮುರಳಿಯನ್ನು ಕರೆದು ಉಗಿದಿದ್ದಾರೆ. ಇದರಿಂದಾಗಿ ದುಡ್ಡು ವಾಪಾಸು ಕೊಡುತ್ತೇನೆಂದಿದ್ದ ಆತ ಚೆಕ್ಕು ಕೊಟ್ಟಿದ್ದಾನಾದರೂ ಅವೆಲ್ಲ ಬೌನ್ಸ್ ಆಗಿವೆ. ಇದರಿಂದ ಜೈಲು ಗ್ಯಾರಂಟಿ ಎಂದರಿತ ಆತ ಬನ್ನೇರುಘಟ್ಟ ಸಮೀಪ ಬಿಲ ಸೇರಿಕೊಂಡಿದ್ದಾನೆ.

ಆದರೂ ಕೂಡಾ ಆತನಿಂದ, ಆತನ ಸಂಬಂಧಿಕರಿಂದ ಅಂಬಿಕಾ ದಂಪತಿಗೆ ಜೀವ ಬೆದರಿಕೆಗಳು ಬರುತ್ತಲೇ ಇವೆ. ಪೊಲೀಸರು ತಕ್ಷಣ ಮುರಳಿಯ ಬುಡಕ್ಕೊದ್ದು ಜೈಲಿಗೆ ಗದುಮಿ ಆನಂದರಾಶಿ ಕಂಪನಿಯಿಂದ ಈ ದಂಪತಿಗೆ ಹಣ ಮರಳಿ ಕೊಡಿಸಬೇಕಿದೆ. ❖




ಡಿಸ್ಕೋ ರೇಣುಕಾಚಾರಿಗೆ ಬಾರ್ ಹುಡುಗೀರಂದ್ರೆ ಬೋ ಖುಷಿ!

ಭಾರತೀಯ ಸಂಸ್ಕೃತಿಯ ಬಗ್ಗೆ ಬಿಡುವು ಸಿಕ್ಕಾಗಲೆಲ್ಲ ಬಾಯಿ ಬಡಿದುಕೊಳ್ಳುವುದು, ಮಹಿಳೆಯರ ಬಗ್ಗೆ ಭಕ್ತಿ ಪ್ರಕಟಿಸುವುದು ಬಿಜೆಪಿ ಮಂದಿಯ ಖಯಾಲಿ. ಈ ಬಗ್ಗೆ ಇವರಿಗೆ ಕೊಂಚ ಬದ್ಧತೆಯಿದ್ದಿದ್ದರೂ ಸಹಿಸಿಕೊಳ್ಳಬಹುದಿತ್ತು. ಆದರೆ ಈ ಜನರ 'ವೇದಾಂತ'ಗಳೆಲ್ಲ ಶುದ್ಧ ಭಟ್ಟಂಗಿತನವೇ ಹೊರತು ಸಹಜವಾದುದಲ್ಲವೆಂಬ ವಿಚಾರ ಲೆಕ್ಕವಿಲ್ಲದಷ್ಟು ಸಲ ಬಯಲಾಗಿದೆ. ಸದ್ಯ ಬಿಜೆಪಿ ನೆಚ್ಚಿಕೊಂಡಿರುವ ಅಜೆಂಡಾದ ಸಕಲ ಅಸಲಿಯತ್ತುಗಳೂ ಮತ್ತೊಮ್ಮೆ ಬೆತ್ತಲಾಗಿವೆ; ಎಣ್ಣೆ ಸಚಿವ ರೇಣುಕಾಚಾರ್ಯನ ಹರಕುಬಾಯಿಯ ಮೂಲಕ!

ತನ್ನ ಕೈಲಿರುವುದು ಯಾರೂ ನಿರ್ವಹಿಸಲಸಾಧ್ಯವಾದ ಖಾತೆ, ಈ ವ್ಯಾಪ್ತಿಗೆ ಯಾರೂ ತಲೆ ಹಾಕುವಂತಿಲ್ಲ ಮುಂತಾದ ಅನೇಕ ಭ್ರಮೆಗಳ ನಡುವೆ ತೇಲಾಡುತ್ತಿರುವವನು ನರ್ಸ್ ರೇಣುಕ. ಸರ್ಕಾರ ಉದುರುವ ಮುನ್ನ ಸಾಧ್ಯವಾದಷ್ಟು ಕಾಸು ಕಬಳಿಸುವ ಉತ್ಸಾಹದಲ್ಲಿರುವ ಈತ ಅಬ್ಕಾರಿ ಖಾತೆಯನ್ನು ಮನಬಂದಂತೆ ಹಿಂಡಿ ತಿಜೋರಿ ತುಂಬಿಸುತ್ತಿರುವುದು ಬಹಿರಂಗ ಸತ್ಯ. ಯಾರು ಹೇಗಾದರೂ ಹಾಳಾಗಿ ಹೋಗಲಿ, ಮದ್ಯ ಮಾರಾಟವಾದರೆ ಸಾಕೆಂಬ ಸೂತ್ರಕ್ಕಂಟಿಕೊಂಡಿರುವ ರೇಣುಕ ಇದೀಗ ಬಾರ್‌ಗರ್ಲ್ಸ್ ನೇಮಕದ ಪರವಾಗಿ ಮಾತಾಡುತ್ತಾ, ಪೊಲೀಸ್ ಇಲಾಖೆಯನ್ನೇ ಜರಿಯುತ್ತಾ ಹುಂಬತನ ಪ್ರದರ್ಶಿಸ ಹತ್ತಿದ್ದಾನೆ.

ಈ ವಿದ್ಯಮಾನದಲ್ಲಿ ಕೆಲಸ ಮಾಡಿರುವುದು ಕೇವಲ ರೇಣುಕನ ಎಡಬಿಡಂಗಿತನ ಮಾತ್ರವಲ್ಲ, ಇದು ಖಂಡಿತವಾಗಿಯೂ ಬಾರ್ ಮಾಫಿಯಾದ ಸೂಟ್‌ಕೇಸಿನ ಪ್ರಭಾವ. ದಶಕದಷ್ಟು ಹಿಂದೆ ಲೈವ್‌ಬ್ಯಾಂಡ್ ಭರಾಟೆಗೆ ಅಂಕುಶ ಬಿದ್ದ ಬಳಿಕ ಆ ಮಾಫಿಯಾ ಮತ್ತೆ ದಂಧೆ ನಡೆಸಲು ಇನ್ನಿಲ್ಲದಂತೆ ಪ್ರಯತ್ನಿಸಿತ್ತು. ಹೆಣ್ಮಕ್ಕಳನ್ನ ಮನಬಂದಂತೆ ಬಳಸಿಕೊಂಡು ಕೊಬ್ಬಿ ಹೋಗಿದ್ದ ಮಾಫಿಯಾದ ಮಂದಿ ಅವರ ಉದ್ಯೋಗ ಹಾಗೂ ಜೀವನದ ಪ್ರಶ್ನೆ ಮುಂದಿಟ್ಟುಕೊಂಡು ಹೈಕೋರ್ಟ್, ಸುಪ್ರೀಂಕೋರ್ಟ್‌ನಲ್ಲೂ ದನಿಯೆತ್ತಿದ್ದರು. ಈ ನಡುವೆ ಬಂದ ಸರ್ಕಾರಗಳ ಸಚಿವ ಮಹಾಶಯರು ಎಣ್ಣೆ ಕಾಸಿಗೆ ಬಾಯಗಲಿಸಿದ ಪರಿಣಾಮ ಲೈವ್‌ಬ್ಯಾಂಡ್ ಮಾಫಿಯಾ ಮೇಲುಗೈ ಪಡೆದು ಬಾರ್‌ಗರ್ಲ್ಸ್ ಹೆಸರಲ್ಲಿ ಮರುಜನ್ಮ ಪೆತ್ತಿದ್ದೀಗ ಇತಿಹಾಸ. ಆದರೆ ಲೈವ್‌ಬ್ಯಾಂಡ್‌ಗಳಲ್ಲಿ ಏನೇನು ನಡೆಸಲಾಗುತ್ತಿತ್ತೋ ಆದೆಲ್ಲವೂ ಬಾರ್ ಗರ್ಲ್ಸ್‌ಗಳ ನೆಪದಲ್ಲಿ ಸಾಂಗವಾಗಿ ಮುಂದುವರೆಯುತ್ತಿದೆ.



ಅದರಲ್ಲೂ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು ರೇಣುಕಾಚಾರ್ಯ ನೆಂಬ ಅಬ್ಬೇಪಾರಿ ಅಬ್ಕಾರಿ ಸಚಿವನಾದದ್ದೇ, ಬಾರ್‌ಗರ್ಲ್ಸ್ ಮಾಫಿಯಾಕ್ಕೆ ನೀರು-ಗೊಬ್ಬರ ಸಿಕ್ಕಂತಾಗಿದೆ. ಈತ ಅಬ್ಕಾರಿ ಸಚಿವನಾದ ಬಳಿಕ ಬಾರ್‌ಗರ್ಲ್ಸ್ ವಿಚಾರ ವ್ಯಾಪಕವಾಗಿ ಸದ್ದು ಮಾಡಲಾರಂಭಿಸಿತು. ಬಾರುಗಳಲ್ಲಿ ಲಲನೆಯರ ಕಲರವ ಶುರುವಾಗುತ್ತಲೇ ಎಣ್ಣೆ ವ್ಯಾಪಾರವೂ ಏರತೊಡಗಿತು. ಇಂಥಾ ಬಾರ್‌ಗಳ ಮಾಲೀಕರಿಂದ ರೇಣುಕನ ತಿಜೋರಿಗೆ ಕಪ್ಪ ಸಲ್ಲಿಕೆಯಾಗಿದ್ದರಿಂದ ಅಕ್ರಮ-ಅನೈತಿಕ ವ್ಯವಹಾರಗಳೆಲ್ಲ ಹೊರಜಗತ್ತಿಗೆ ತೆರೆದುಕೊಳ್ಳಲಿಲ್ಲ.


ಆದರೆ ಬಾರ್‌ಗರ್ಲ್ಸ್ ನೇಮಕದ ನೆಪದಲ್ಲಿ ನಡೆಯುತ್ತಿರುವ ಅಪ್ಪಟ ವೇಶ್ಯಾ ದಂಧೆ ಬೆಂಗಳೂರು ಪೊಲೀಸರ ಪಾಲಿಗೆ ತಲೆನೋವಾಗಿ ಪರಿಣಮಿಸಿತ್ತು. ಇದನ್ನು ಹೀಗೇಬಿಟ್ಟರೆ ಬರಖತ್ತಿಲ್ಲವೆಂದರಿತ ಅಧಿಕಾರಿಗಳು ರೇಡು ನಡೆಸಲು ಸೂಚನೆ ನೀಡಿದ್ದೇ ಬಾರ್ ಹಾಗೂ ಹೋಟೆಲ್‌ಗಳ ನಿಜದ ದಂಧೆ ಅನಾವರಣಗೊಂಡಿತ್ತು. ಈಗೊಂದು ಎರಡು ತಿಂಗಳಿಂದ ನೂರಾರು ಯುವತಿಯರು ವೇಶ್ಯಾವಾಟಿಕೆಯ ನೆಪದಲ್ಲಿ ಬಂಧಿಸಲ್ಪಟ್ಟಿದ್ದರಲ್ಲಾ? ಇವರಲ್ಲಿ ಬಹುತೇಕರು ಬಾರ್‌ಗರ್ಲ್ಸ್ ದಂಧೆಯ ಮರೆಯಲ್ಲಿದ್ದವರೆ. ಈ ಪರಿ ಹಠಾತ್ತನೆ ಭಾರೀ ಕಮಾಯಿಗೇ ಬಿಸಿನೀರು ತಾಕಿದ್ದರಿಂದಾಗಿ ಬಾರ್ ಹೆಸರಿನಲ್ಲಿ ದಂಧೆ ನಡೆಸುವ ಮಾಲೀಕರು ಕಂಗಾಲಾಗಿ ನರ್ಸ್ ರೇಣುಕನ ಮೊರೆ ಹೋಗಿದ್ದಾರೆ. ಈ ಸಂದರ್ಭದಲ್ಲಿ ದೊಡ್ಡ ಮೊತ್ತದ ಡೀಲ್ ಕುದುರಿದ ಬಳಿಕವಷ್ಟೇ ರೇಣುಕಾ ಪರಿಚಾರಕಿಯರ ಪರವಾಗಿ ಮಾತಾಡಿದ್ದಾನೆಂಬುದು ನಿರ್ವಿವಾದ.

ಇಂಥಾ ಬಾರ್ ಮಾಲೀಕರು ಆಡಳಿತ ವ್ಯವಸ್ಥೆಯನ್ನೇ ಕೊಂಡುಕೊಳ್ಳುವ ಹಂತಕ್ಕೆ ಬೆಳೆದಿದ್ದರ ಹಿಂದೆ ಖಂಡಿತವಾಗಿಯೂ ಅಕ್ರಮ ಸಂಪಾದನೆಯ ಬೆಂಬಲವಿದೆ. ಕೇವಲ ಮದ್ಯವನ್ನಷ್ಟೇ ಪೂರೈಸುವ ಶಾಪ್‌ಗಳ ಆದಾಯಕ್ಕೂ ಬಾರ್‌ಗರ್ಲ್ಸ್ 'ಸೇವೆ' ಇರುವಲ್ಲಿನ ಆದಾಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಸಾಮಾನ್ಯವಾಗಿ ಬಾಟಲ್ಲೊಂದರ ಬೆಲೆಗಿಂತ ಎರಡ್ಮೂರು ಪಟ್ಟು ಹೆಚ್ಚು ಹಣವನ್ನು ಬಾರ್‌ಗರ್ಲ್ಸ್ ನೆಪದಲ್ಲಿ ಪೀಕಲಾಗುತ್ತದೆ.

ಈ ರೀತಿ ಬಾರ್‌ಗರ್ಲ್ಸ್‌ಗಳನ್ನಿಟ್ಟುಕೊಂಡಿರುವ ಶಾಪ್‌ಗಳೀಗ ಕೇವಲ ಮದ್ಯ ಸರಬರಾಜಿನ ಕೇಂದ್ರಗಳಾಗುಳಿದಿಲ್ಲ, ಅವುಗಳೆಲ್ಲ ಪಕ್ಕಾ ವೇಶ್ಯಾ ಅಡ್ಡೆಗಳಾಗಿ ಬದಲಾಗಿವೆ. ಇಂಥವುಗಳ ಮಾಲೀಕರಂತೂ ಅಕ್ಷರಶಃ ಪಿಂಪ್‌ಗಿರಿ ನಡೆಸಹತ್ತಿದ್ದಾರೆ. ಇಂತಿಷ್ಟೇ ಪರಿಚಾರಕಿಯರನ್ನಿಟ್ಟುಕೊಳ್ಳಬೇಕೆಂಬ ನಿಯಮ ಇಲ್ಲವಾದ್ದರಿಂದ ಹೆಚ್ಚುಹೆಚ್ಚು ಹೆಣ್ಮಕ್ಕಳನ್ನಿಟ್ಟುಕೊಳ್ಳುವುದು ಸಾಮಾನ್ಯವಾಗಿದೆ. ಇದರಲ್ಲಿ ಕೆಲವರಿಂದ ಕುಳಿತಲ್ಲೇ ಸರಬರಾಜಿನ ಮಜಾ ಕೊಡಿಸಿದರೆ, ಮಿಕ್ಕವರನ್ನು ಕರೆದಲ್ಲಿಗೆ ಕಳಿಸಿಕೊಡುವ ಚಾಳಿ ವಿಪರೀತವಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಈ ಬಾರ್‌ಗರ್ಲ್ಸ್ ಸೌಲಭ್ಯವಿರುವ ಬಹುತೇಕ ಶಾಪ್‌ಗಳಿಂದು ಸಕಲ ಅನೈತಿಕ ಚಟುವಟಿಕೆಗಳಿಗೂ ಕೇಂದ್ರಬಿಂದುವಾಗಿ ಹೋಗಿವೆ.

ಇನ್ನುಳಿದಂತೆ ಇಂಥ ಬಾರ್‌ಗರ್ಲ್ಸ್‌ಗೆ ಯಾವುದೇ ವಸ್ತ್ರ ನಿಬಂಧನೆಗಳಿಲ್ಲ, ರೇಣುಕಾಚಾರ್ಯನಂತೂ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ಇದರಿಂದಾಗಿಯೇ ಕೆಲವರ್ಷಗಳ ಹಿಂದೆ ಬೆಂಗಳೂರನ್ನು ಬೆಚ್ಚಿ ಬೀಳಿಸಿದ್ದ ಕ್ಯಾಬರೆಯೆಂಬುದು ಪರೋಕ್ಷವಾಗಿ ಮತ್ತೆ ತಲೆ ಎತ್ತಿದೆ. ಇಷ್ಟೂ ವಿಚಾರಗಳು ಖಂಡಿತವಾಗಿಯೂ ಸರ್ಕಾರದ ಅನೇಕ ಇಲಾಖೆಗಳವರಿಗೆ ತಿಳಿದಿದೆ. ಆದರೆ ರೇಣುಕಾಚಾರ್ಯನೇ ಆ ಪಾಪದ ಹಣದ ಪಾಲುದಾರನಾಗಿರುವುದರಿಂದ ಎಲ್ಲರೂ ತೆಪ್ಪಗಿದ್ದಾರೆ. ಯಡಿಯೂರಪ್ಪನಿಗಂತೂ ತನ್ನ ಮಾನಸ ಪುತ್ರನ ಮಾನಸಿಕ ಅಸಮತೋಲನ ಮಡಿಲ ಕೂಸಿನ ತುಂಟಾಟದಂತೆಯೇ ಕಾಣಿಸಹತ್ತಿದೆ!

ಈ ಇಡೀ ಪ್ರಕ್ರಿಯೆಯಲ್ಲಿ ಬಿಜೆಪಿ ಮಂದಿ ಚಿಕ್ಕದೊಂದು ಅರಿವೆಯೂ ಇಲ್ಲದಂತೆ ಬೆತ್ತಲಾಗಿದ್ದಾರೆ. ಮಹಿಳೆಯರ ಬಗ್ಗೆ, ಹೆಣ್ಮಕ್ಕಳ ಮಾನದ ಬಗ್ಗೆ ಅವಕಾಶ ಸಿಕ್ಕಾಗಲೆಲ್ಲ ಒದರಾಡುವ ಜನ ಇವರು. ಮಂಗಳೂರಿನ ಪಬ್‌ಗಳನ್ನು ವೇಶ್ಯಾ ಅಡ್ಡೆಗಳೆಂದು ಚಿತ್ರಿಸಿ ಮುತಾಲಿಕನಂಥ ಮುಖೇಡಿಗಳಿಂದ ದಾಳಿ ನಡೆಸಿ ದಾಂಧಲೆಯೆಬ್ಬಿಸಿದ್ದು ಇವರೇ. ಇಂಥಾ ಹಿಂದೂ ಸಹೋದರಿಯರ ಮಾನ ಕಾಪಾಡುವ ಧೀರರೇ ತುಂಬಿರುವ ಸರ್ಕಾರವೊಂದು ಬಾರ್‌ಗರ್ಲ್ಸ್ ನೇಮಕದಂಥ ಅನೈತಿಕ ದಂಧೆಗೆ ಕುಮ್ಮಕ್ಕು ಕೊಡುತ್ತದೆಂದರೆ ಏನನ್ನಬೇಕು?



ಹಾಗೂ ಹೇಳಬೇಕೆಂದರೆ ಈ ಬಾರ್ ಗರ್ಲ್ಸ್ ಸಂಸ್ಕೃತಿ ಲೈವ್‌ಬ್ಯಾಂಡ್ ಮಾಫಿಯಾಕ್ಕಿಂತ ಅಪಾಯಕಾರಿಯಾದುದು. ಲೈವ್‌ಬ್ಯಾಂಡ್‌ಗಳಲ್ಲಿದ್ದರೆ ಯುವತಿಯರು ನಿಗದಿಪಡಿಸಿದ ಮೂಲೆಯೊಂದರಲ್ಲಿ ಕುಣಿದಾಡುತ್ತಾರೆ. ಆದರೆ ಬಾರ್‌ಗರ್ಲ್ಸ್‌ಗಳು ಸ್ವತಃ ತಾವೇ ಗಿರಾಕಿಗಳಿಗೆ ಸರ್ವ್ ಮಾಡಬೇಕಾಗುತ್ತದೆ. ವ್ಯವಹಾರಗಳೆಲ್ಲ ಈ ಸಂದರ್ಭದಲ್ಲಿ ಕುದುರುವ ಸಾಧ್ಯತೆಗಳೇ ಹೆಚ್ಚು.

ಇದು ಭಾರತೀಯ ಸಂಸ್ಕೃತಿಯೇ? ಸಂಸ್ಕೃತಿಯ ವಿಚಾರ ಒತ್ತಟ್ಟಿಗಿರಲಿ. ಈ ನೆಪದಲ್ಲೇ ಹೆಣ್ಮಕ್ಕಳ ಮೇಲೆ ನಡೆಯುವ ಕ್ರೂರ ದಬ್ಬಾಳಿಕೆಗಳು ಯಾಕೆ ಈ ವೀರ ಸಹೋದರರಿಗೆ ತಿಳಿಯುತ್ತಿಲ್ಲ? ರೇಣುಕಾಚಾರ್ಯನ ವಿಚಾರ ಬಿಡಿ. ಆತ ಪಕ್ಕಾ ಅರಿವುಗೇಡಿ. ಯಡಿಯೂರಪ್ಪ ಆತನ ಸೇವೆ ಬಯಸುವ, ಹೊಗಳಿಕೆ ನಿರೀಕ್ಷಿಸುವ ಸಣ್ಣತನದ ಮನುಷ್ಯ.

ಆದರೆ ಇಡೀ ಬಿಜೆಪಿ ಕ್ಯಾಬಿನೆಟ್ಟಿನಲ್ಲಿ ಯಾರೊಬ್ಬರೂ ಈ ಅನಾಹುತದ ವಿರುದ್ಧ ಮಾತಾಡುತ್ತಿಲ್ಲ, ಆದುದರಿಂದಲೇ ಇದು ಬಿಜೆಪಿ ಪಕ್ಷದ ನೈಜ ಅಜೆಂಡಾದ ಅನಾವರಣದಂತೆಯೇ ಭಾಸವಾಗುತ್ತಿದೆ.

✤ ಬಾಗಿಲಗದ್ದೆ

ಯಡ್ಡೀನ ಹೀರೋ ಮಾಡ್ತಾನಂತೆ ಡಿಸ್ಕೋ ರೇಣುಕ!

ನಿಜ ಹೇಳಬೇಕೆಂದರೆ ಇಡೀ ಯಡ್ಡಿ ಸಂಪುಟದಲ್ಲಿ ಖಾತೆಗೆ ತಕ್ಕಂತ ನಡವಳಿಕೆ, ವ್ಯಕ್ತಿತ್ವ ಹೊಂದಿರುವ ಏಕೈಕ ಸಚಿವ ರೇಣುಕಾಚಾರ್ಯ. ಇದನ್ನ ವಿರೋಧ ಪಕ್ಷದವರೂ ತಳ್ಳಿಹಾಕಲಿಕ್ಕಿಲ್ಲ! ಅದು ಅಕ್ರಮ ಸಾರಾಯಿ ಅಡ್ಡೆಗಳ ಮೇಲಿನ ದಾಳಿಯಿರಲಿ, ಪತ್ರಿಕಾಗೋಷ್ಠಿಗಳೇ ಇರಲಿ-ಅವೆಲ್ಲವನ್ನು ಎಣ್ಣೆ ಏಟು ತಲೆಗೇರಿದ ಸ್ಥಿತಿಯಲ್ಲೇ ಮಾಡಿ ಮುಗಿಸುವುದು ಡಿಸ್ಕೋ ರೇಣುಕನ ಮಹತ್ವದ ಪ್ರತಿಭೆಗಳಲ್ಲೊಂದು. ಡಿಸ್ಕೋ ರೇಣುಕನ ಇನ್ನೊಂದು ಪ್ರತಿಭೆ ಬಕೀಟುಗಿರಿ. ಸದ್ಯ ಈತ ಯಡ್ಡಿ ಬಗಲಲ್ಲಿ ಅಡ್ಡಾಡುತ್ತಿರುವುದಕ್ಕೆ ಅದೇ ಪ್ರಮುಖ ಕಾರಣ. ಈತನ ಈ ಬಕೀಟು ಬುದ್ಧಿ ಯಾವ ಮಟ್ಟಕ್ಕೇರಿದೆಯೆಂದರೆ ಇದೀಗ ತನ್ನ 'ಮಾನಸಿಕ ಪಿತೃ' ಯಡಿಯೂರಪ್ಪನನ್ನು ಹೀರೋ ಮಾಡ ಹೊರಟಿದ್ದಾನೆ. ಇದರ ಡೈರೆಕ್ಟರ್ ಗಾಂಧಿನಗರದ ಸವಕಲು ಆಸಾಮಿ ರಾಜೇಂದ್ರಸಿಂಗ್ ಬಾಬು. ಖುದ್ದು ರೇಣುಕನೇ ಅದರ ನಿರ್ಮಾಪಕ!

ನಿಜಕ್ಕೂ ಇದು ತಮಾಷೆಯಲ್ಲ, ಬಹುಹಿಂದಿನಿಂದಲೇ ನಡೆಯುತ್ತಿದ್ದ ಈ ತಯಾರಿ ಇದೀಗ ಮಾಧ್ಯಮಗಳ ಮೂಲಕ ಅಧಿಕೃತವಾಗಿ ಹೊರಬಿದ್ದಿದೆ. ಸದರಿ ಚಿತ್ರಕ್ಕೆ ಹಠವಾದಿ ಅಂತ ನಾಮಕರಣವನ್ನೂ ಮಾಡಿ ಮುಗಿಸಲಾಗಿದೆ. ಆರೆಸ್ಸೆಸ್ ಪಟುವಾದ ಯಡ್ಡಿಯ 'ಓರಾಟದ' ಬದುಕೇ ಈ ಚಿತ್ರದ ಕಥಾವಸ್ತು. ಈ ಪ್ರಾಜೆಕ್ಟ್ ಯಾವ ರೀತಿ ನಿರ್ಣಾಯಕ ಹಂತ ತಲುಪಿದೆಯೆಂದರೆ ಯಡಿಯೂರಪ್ಪ ಕೂಲಿಂಗ್ ಕ್ಲಾಸ್ ಹಾಕಿಕೊಂಡಿರುವ, ಅರೆಬೆತ್ತಲೆಯಾಗಿ ಕೈಲೊಂದು ಆರೆಸ್ಸೆಸ್ ಲಾಠಿಗಿಂತ ಕೊಂಚ ಉದ್ದದ ಕೋಲು ಹಿಡಿದು ವೀರಾವೇಶ ಪ್ರಕಟಿಸುವ ಭಯಂಕರ ಕೊಲಾಜ್ ಫೋಟೋಗಳೂ ಸಿದ್ಧವಾಗಿವೆ!

ಮೇಲುನೋಟಕ್ಕಿದು ರೇಣುಕಾಚಾರ್ಯನ ಕುಚೇಷ್ಟೆಯಂತೆ ಕಂಡರೂ ಆಳದಲ್ಲಿ ಯಡ್ಡಿಯ ಕ್ರಿಮಿನಲ್ ಮೈಂಡು ಇದರ ಹಿಂದಿರುವುದು ಸ್ಪಷ್ಟವಾಗಿದೆ. ಭೂಹಗರಣಗಳಿಂದ ಹೆಸರನ್ನು ಹೀನಾಯವಾಗಿ ಕೆಡಿಸಿಕೊಂಡಿರುವ, ಆಡಳಿತ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ಲಯ ತಪ್ಪಿರುವ ಯಡಿಯೂರಪ್ಪನಿಗೀಗ ಇಂತಹುದೊಂದು ಗಿಮಿಕ್‌ನ ಅವಶ್ಯಕತೆಯಿದೆ. ಅದರನ್ವಯ ಖುದ್ದು ರೇಣುಕನೇ ಚಾನೆಲ್‌ಗಳಲ್ಲಿ ಮುಸುಡಿ ತೋರಿಸಿ 'ಇದು ಯಡಿಯೂರಪ್ಪನವರಂಥ ಮಹಾನ್ ಹೋರಾಟಗಾರನ ಆದರ್ಶ ಬಿಂಬಿಸುವ ಚಿತ್ರ. ಯುವ ಪೀಳಿಗೆಗೆ ಮಾದರಿಯಾಗುವ ಮಹತ್ವದ ಉದ್ದೇಶದಿಂದ ಇದನ್ನು ನಿರ್ಮಿಸಲಾಗುತ್ತಿದೆ' ಅಂತೆಲ್ಲ ಹಲ್ಕಿರಿಯುತ್ತಿದ್ದಾನೆ. ಇನ್ನು ರಾಜೇಂದ್ರಸಿಂಗ್ ಬಾಬು ಅಂತೂ 'ಯಡಿಯೂರಪ್ಪ ನವರಂಥ ಜನಪ್ರಿಯ ಮುಖ್ಯಮಂತ್ರಿಯ ಬಗ್ಗೆ ಚಿತ್ರ ನಿರ್ಮಿಸುವ ಅವಕಾಶ ಬಂದಿದ್ದೇ ಮಹಾಭಾಗ್ಯ' ಅಂತ ದೈನೇಸಿಯಂತಾಡುತ್ತಿದ್ದಾನೆ! ಇದು ನಿಜಕ್ಕೂ ಜನರ ಸಿಂಪಥಿ ಗಿಟ್ಟಿಸಿಕೊಳ್ಳುವ ಪ್ರಯತ್ನವಲ್ಲದೇ ಮತ್ತೇನೂ ಅಲ್ಲ.


ಘನತೆ ಗಾಂಭೀರ್ಯವಿಲ್ಲದ ಲೂಸು ಗಿರಾಕಿ ರೇಣುಕ, ಮುಂದಿನ ಚುನಾವಣೆಯಲ್ಲಿ ತಿಪ್ಪೆ ಸೇರಲಿರುವ ಯಡಿಯೂರಪ್ಪ ಹಾಗೂ ನೆಟ್ಟಗೊಂದು ಚಿತ್ರವನ್ನೂ ಗೆಲ್ಲಿಸಿಕೊಳ್ಳಲಾಗದ ಸ್ಥಿತಿಯಲ್ಲಿರುವ ರಾಜೇಂದ್ರಸಿಂಗ್ ಬಾಬು-ಇವರೆಲ್ಲರೂ ಬರಗೆಟ್ಟ ಸ್ಥಿತಿಯಲ್ಲಿರುವವರೆ.

ಆದುದರಿಂದ ಸದರಿ ಚಿತ್ರಕ್ಕೆ 'ಹಠವಾದಿ' ಎಂಬುದಕ್ಕಿಂತ 'ಬರಗೆಟ್ಟವರು' ಎಂಬುದೇ ಸೂಕ್ತ ಟೈಟಲ್ಲೆಂಬುದು ನಿಜಕ್ಕೂ ಕುಹಕವಲ್ಲ! ✤

ರಣಜಿತ್ ನೆಲಸಮವಾಗಲಿದೆಯೇ?



ಬದಲಾವಣೆ ಮತ್ತು ಭಾವುಕತೆ ಪರಸ್ಪರ ಎದುರು ಬದುರಾದಂಥ ಸಂದಿಗ್ಧ ಪರಿಸ್ಥಿತಿಯೊಂದು ಮೈಸೂರಿನ ಚಿತ್ರಪ್ರೇಮಿಗಳ ಮುಂದೆ ಅವತರಿಸಿದೆ. ಇದಕ್ಕೆ ಕಾರಣ ಅಖಂಡ ಆರು ದಶಕಗಳ ಐತಿಹ್ಯವಿರುವ ರಣಜಿತ್ ಚಿತ್ರಮಂದಿರ ನೆಲಸಮವಾಗಲಿರುವ ಸುದ್ದಿ.



ಮೈಸೂರು ಮಾತ್ರವಲ್ಲ, ಕರ್ನಾಟಕದ ಚಿತ್ರಜಗತ್ತಿನ ಭಾವಕೋಶದಲ್ಲಿ ರಣಜಿತ್ ಚಿತ್ರಮಂದಿರಕ್ಕೊಂದು ವಿಶಿಷ್ಟ ಸ್ಥಾನವಿದೆ. ನಗರದ ಹೃದಯ ಭಾಗದಲ್ಲಿ 1949 ರಲ್ಲಿ ನಿರ್ಮಾಣಗೊಂಡ ರಣಜಿತ್ ಬೆಂಗಳೂರು ಮೂಲದ ರಾಮ್‌ಬಾಯ್ ಪಟೇಲ್ ಅಂಡ್ ಸನ್ಸ್ ಮಾಲೀಕತ್ವ ಹೊಂದಿತ್ತು, ರಾಜ್‌ಕುಮಾರ್ ಅಭಿನಯದ ಬಹುತೇಕ ಚಿತ್ರಗಳು ಭರ್ಜರಿ ಪ್ರದರ್ಶನ ಕಂಡ ಪರಿಣಾಮ ರಾಜ್‌ಕುಮಾರ್ ಚಿತ್ರಮಂದಿರವೆಂಬ ಹೆಸರೂ ಇದಕ್ಕಿದೆ. ಕಪ್ಪುಬಿಳುಪು ಜಮಾನವನ್ನು ಕಂಡುಂಡು ಬಣ್ಣದಲ್ಲೂ ತೊಯ್ದು ತೊನೆದಿರುವ ರಣಜಿತ್ ಚಿತ್ರಮಂದಿರ ಸಹಜವಾಗಿಯೇ ಮೈಸೂರಿನ ಚಿತ್ರರಸಿಕರ ಮನಗೆದ್ದಿದೆ. ಮೊದಮೊದಲು ಹಿಂದಿ ಚಿತ್ರಗಳಿಗೇ ಸೀಮಿತವಾಗಿದ್ದ ಈ ಚಿತ್ರಮಂದಿರ ಬರಬರುತ್ತಾ ಕನ್ನಡ ಚಿತ್ರಗಳಿಗೆ ಖಾಯಮ್ಮಾಯಿತು. 870 ಆಸನ, ಏರ್‌ಕೂಲರ್ ಒಳಗೊಂಡಂತೆ ಅತ್ಯಂತ ಸುಸಜ್ಜಿತವಾಗಿ ಹಲವಾರು 'ಮೊದಲು'ಗಳನ್ನೂ ರಣಜಿತ್ ಮುಡಿಗೇರಿಸಿಕೊಂಡಿದೆ.

ಸದ್ಯ ಈ ಚಿತ್ರಮಂದಿರದ ಮಾಲೀಕ ರಾಮ್‌ಬಾಯ್ ಪಟೇಲ್ ಮರೆಯಾಗಿದ್ದಾರೆ. ಅವರ ವಹಿವಾಟಿನ ಆಡಳಿತ ಸೂತ್ರ ಮಕ್ಕಳ ಕೈಗೆ ಸಿಕ್ಕಿದೆ. ಅವರ ಸಹಜ ವ್ಯಾಪಾರಿ ಕಣ್ಣುಗಳಿಗೆ ನಗರದ ಹೃದಯಭಾಗದಲ್ಲಿರುವ ಈ ಕಟ್ಟಡ ಇನ್ನೂ ಹೆಚ್ಚಿನ ಆದಾಯ ಮೂಲ ತರಬಲ್ಲುದೆಂಬಂತೆ ಕಂಡಿದೆ. ಆದುದರಿಂದಲೇ ಈ ಜಾಗವನ್ನು ಬೆಂಗಳೂರಿನ ನಟ ಕಂ ಶ್ರೀಲಕ್ಷ್ಮಿ ಗೋಲ್ಡ್ ಪ್ಯಾಲೇಸ್ ಮಾಲೀಕ ಕೆ.ಪಿ. ನಂಜುಂಡಿಗೆ ಮಾರಲು ನಿರ್ಧರಿಸಿದ್ದಾರೆ. ಇದು ನಿಜವೇ ಆದರೆ, ರಣಜಿತ್ ನೆಲಸಮಗೊಂಡು ಆ ಜಾಗೆಯಲ್ಲೊಂದು ವಾಣಿಜ್ಯ ಸಂಕೀರ್ಣ ತಲೆ ಎತ್ತುವುದು ಗ್ಯಾರಂಟಿ.

ಈ ನಿಟ್ಟಿನಲ್ಲಿ ಬದಲಾವಣೆಯೇ ಮೇಲುಗೈ ಪಡೆದಿದೆ. ಆದರೆ ಭಾವುಕತೆಯ ಸೆಳೆತ ಬಿಡಬೇಕಲ್ಲ? ತೀರಾ ಬುದ್ಧಿಬಲಿತಾಗನಿಂದ ರಣಜಿತ್ ಚಿತ್ರಮಂದಿರದ ಸಖ್ಯ ಬೆಳೆಸಿಕೊಂಡ ಚಿತ್ರಪ್ರೇಮಿಗಳನೇಕರು ಇದರ ವಿರುದ್ಧ ಹೋರಾಟ ಆರಂಭಿಸಿದ್ದಾರೆ. ಸಂಘ-ಸಂಸ್ಥೆಗಳೂ ಅದಕ್ಕೆ ಸಾಥ್ ನೀಡಿವೆ. ಅಷ್ಟಕ್ಕೂ ಈ ಚಿತ್ರಮಂದಿರವೇನೂ ನಷ್ಟದಲ್ಲಿಲ್ಲ, ಅಂಥಾದ್ದರಲ್ಲಿ ಅನ್ಯಾಯವಾಗಿ ನೆಲಸಮಗೊಳಿಸುವುದು ಸರಿಯಲ್ಲ ಎಂಬುದು ಹೋರಾಟ ನಿರತರ ವಾದ.


ಮೈಸೂರು ವಾಸಿಗಳ ಬಾವುಕತೆಗೂ ಅರ್ಥವಿದೆ. ಅದು ಬದಲಾವಣೆಯೆಂಬ ವಾಸ್ತವಕ್ಕೆ ಬಗ್ಗಲು ರೆಡಿಯಿಲ್ಲ, 'ಅವರಿಗೆ ವಾಣಿಜ್ಯ ಸಂಕೀರ್ಣ ನಡೆಸಿ ವ್ಯಾಪಾರ ನಡೆಸಲು ಚಿತ್ರಜಗತ್ತಿನ ಸ್ಮಾರಕದಂತಿರುವ ರಣಜಿತ್ ಚಿತ್ರಮಂದಿರದ ಜಾಗವೇ ಆಗಬೇಕಾ?' ಎಂಬುದು ಅವರ ಪ್ರಶ್ನೆ.

ಬಣ್ಣದ ಜಗತ್ತು ಹಾಗೂ ಅದರೆಡೆಗಿನ ಅಭಿಮಾನದ ಅರಿವಿರುವವರು ಕೆ.ಪಿ. ನಂಜುಂಡಿ. ಇವರಿಗೆ ಮೈಸೂರು ಜನರ ಭಾವುಕತೆ ಅರ್ಥವಾಗಲಿ ಎಂಬುದು ನಮ್ಮ ಆಶಯ.

ಎಂಥ ವಿಪರ್ಯಾಸ ನೋಡಿ!

ಅಲ್ಲಿ ವಿಧಾನಸಭೆಯಲ್ಲಿ ಸಾಕ್ಷಾತ್ ಸಿಎಂ ಸಾಹೇಬ ಯಡ್ಡಿಯೇ "ಅರಣ್ಯಭೂಮಿ ಅತಿಕ್ರಮಿಸಿ ವಾಸವಾಗಿರುವವರು ಆತಂಕಪಡಬೇಕಿಲ್ಲ... ಅವರನ್ನು ಒಕ್ಕಲೆಬ್ಬಿಸುವುದಿಲ್ಲ... ಅವರಿಗೆ ಮೂಲ ಸೌಕರ್ಯ ಒದಗಿಸಲಾಗಿದೆ... ಆದಷ್ಟು ಬೇಗ ಹಕ್ಕುಪತ್ರ ಕೊಡಲು ಪ್ರಯತ್ನಿಸುತ್ತೇನೆ...." ಎಂದು ವೀರಾವೇಶದಿಂದ ಹೇಳುತ್ತಿದ್ದರೆ, ಇಲ್ಲಿ ಉತ್ತರ ಕನ್ನಡದ ಭಟ್ಕಳದಲ್ಲಿ ಅದೇ ಸಮಯದಲ್ಲಿ ಪಾಪಿ ಅರಣ್ಯ ಅಂಗೈ ಅಗಲದ ಬದುಕಿನಾಧಾರವಾದ ತೋಟ-ಗದ್ದೆ ಕಂಡರೆ ರಣೋತ್ಸಾಹದಿಂದ ನಿರ್ನಾಮಕ್ಕೆ ನುಗ್ಗುತ್ತಾರೆ!!

ಲಾಗಾಯ್ತಿನಿಂದಲೂ ಉತ್ತರ ಕನ್ನಡದ ಅರಣ್ಯ ಅಧಿಕಾರಿಗಳದು ಮತ್ತು ಕಂತ್ರಿ ಕಾಗೇರಿಯಂಥ ಜಿಲ್ಲಾ ಮಂತ್ರಿ-ಶಾಸಕ ಸಂಸರದು ಅತಿಕ್ರಮಣ ಇಶ್ಯೂ ಬಗ್ಗೆ ಇಬ್ಬಗೆ ನೀತಿ; ಬಲಾಢ್ಯರಿಗೆ ಬೆಣ್ಣೆ-ದುರ್ಬಲರಿಗೆ ಸುಣ್ಣ ಕೊಡುವ ಧೋರಣೆ! ಹೀಗಾಗಿ ಕುಖ್ಯಾತ 'ಪರಿಸರ ವ್ಯಾಧಿ"-ಪಶ್ಚಿಮಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಗದ್ದಲದಲ್ಲಿ ಅರ್ಹ ಅರಣ್ಯ ಅತಿಕ್ರಮಣದಾರರ ಹಕ್ಕೊತ್ತಾಯ ಗೌಣವಾಗಿಹೋಗಿದೆ. ಹಿಂದುಳಿದವರೇ ಅತಿಕ್ರಮದಾರರಲ್ಲಿ ಹೆಚ್ಚಿದ್ದಾರೆ. ಹೀಗಾಗಿ ಬ್ರಾಹ್ಮಣ ಮಂತ್ರಿಯ ಪಾರುಪತ್ಯದಲ್ಲಿರುವ ಉತ್ತರ ಕನ್ನಡದ ಜಿಲ್ಲಾಡಳಿತ-ಅರಣ್ಯ ಇಲಾಖೆಗಳೆಲ್ಲ ಈ ಸಮಸ್ಯೆಯನ್ನು ಸೀರಿಯಸ್ಸಾಗಿ ಪರಿಗಣಿಸಿರುವುದರಿಂದ ಅತಿಕ್ರಮಣ ದಾರರು ಸಂಘಟಿತರಾಗಿ ತಮ್ಮ ಮೇಲಾಗುತ್ತಿರುವ ದೌರ್ಜನ್ಯ ತಮ್ಮ ಹಕ್ಕಿನ ಬೇಡಿಕೆಗಾಗಿ ಆಗಾಗ ಪ್ರತಿಭಟಿಸುತ್ತಲೇ ಇದ್ದಾರೆ. ಮ್ಯಾಗಿ ಶಿಷ್ಯ ರವೀಂದ್ರ



ಹೆಣವಾದ ಈರಪ್ಪ...

ಉತ್ತರ ಕನ್ನಡ: ಅರಣ್ಯಾಧಿಕಾರಿಗಳಿಗೆ ಬಡರೈತ ಬಲಿ!

ಅಧಿಕಾರಿಗಳು ಹಲವು ವರ್ಷದಿಂದ ಕಾಡಲ್ಲಿ ತೋಟ ಮಾಡಿಕೊಂಡು ಬದುಕುತ್ತಿದ್ದ ಬಡ ರೈತನೊಬ್ಬನ ಎದೆಯೆತ್ತರಕ್ಕೆ ಬೆಳೆದ ಮರಗಿಡ ಕಡಿದೆಸೆದು ಆತ ಆಘಾತದಿಂದ ಸಾಯುವಂತೆ ಮಾಡಿದ್ದಾರೆ!!

ಒಂದು ಕಾಲದಲ್ಲಿ ಕಾಡಿನ ಜಿಲ್ಲೆ ಎನಿಸಿದ್ದ ಉತ್ತರ ಕನ್ನಡದಲ್ಲೀಗ ಅರಣ್ಯ ಅತಿಕ್ರಮಣ ಮತ್ತು ಈ ಅತಿಕ್ರಮಣ ಖುಲ್ಲಾಪಡಿಸುವಿಕೆ ಚಿತ್ರವಿಚಿತ್ರ ಕ್ಲೇಷೆಯ-ಜಂಜಾಟದ ಸಂಗತಿಯಾಗಿ ಹೋಗಿದೆ. ಶೇ.81ರಷ್ಟು ಕಾಡೇ ತುಂಬಿಕೊಂಡಿದ್ದ ಉತ್ತರ ಕನ್ನಡದಲ್ಲಿ ಹಿಂದುಳಿದವರಿಗೆ-ಬಡವರಿಗೆ ಅರಣ್ಯ ಅತಿಕ್ರಮಿಸಿ ಬದುಕು ಕಟ್ಟಿಕೊಳ್ಳುವುದು ಅನಿವಾರ್ಯವಾಗಿತ್ತು. ತಲತಲಾಂತರದಿಂದ ಜಿಲ್ಲೆಯ ಉದ್ದಗಲಕ್ಕೆ ಲಕ್ಷಾಂತರ ಮಂದಿ ಅರಣ್ಯ ಒತ್ತುವರಿ ಮಾಡಿಕೊಂಡು ಜೀವಿಸುತ್ತಿದ್ದಾರೆ. ಇದರಲ್ಲಿ ಉಳ್ಳವರೂ ಇದ್ದಾರೆ; ಇಲ್ಲದ ದೀನ-ದಲಿತರೂ ಇದ್ದಾರೆ. ಮೇಲ್ವರ್ಗದ ಉಳ್ಳವರಿಗೆ ತಾವು ಕಬಳಿಸಿದ ಎಕರೆಗಟ್ಟಲೆ ಜಮೀನು ಪ್ರತಿಷ್ಠೆಯ ಸಂಕೇತವಾದರೆ, ಅಸಹಾಯಕ ಕೆಳವರ್ಗಕ್ಕೆ ಗುಂಟೆಗಳ ಲೆಕ್ಕದ ಒತ್ತುವರಿ ಭೂಮಿಯೇ ಜೀವನಾಧಾರ!

ಅರಣ್ಯ ಅತಿಕ್ರಮಣ ಅಪರಾಧ ಎಂಬ ಕಟ್ಟುನಿಟ್ಟಿನ ಕಾನೂನನ್ನು ಕೇಂದ್ರ ಸರ್ಕಾರ ಮಾಡುವ ಮೊದಲೇ ಒತ್ತುವರಿ ಮಾಡಿಕೊಂಡವರಲ್ಲಿ ಬಹುತೇಕರು ಕಾಡಿನ ಮಕ್ಕಳು. ಈ ದುರ್ಬಲರಿಗೆ ಅತಿಕ್ರಮಿತ ಭೂಮಿಯ ಹಕ್ಕು ಸಿಗಬೇಕಾದ್ದು ನ್ಯಾಯೋಚಿತ. ಈ ಭೂಮಿಯಲ್ಲೇ ಅವರ ಬದುಕು ಕಂಡಿದ್ದಾರೆ. ಆದರೆ ಕೇಂದ್ರದ ಕಾನೂನು ಜಾರಿಯಾದ ನಂತರವೂ ರಾಜಕೀಯ ಬಲ-ತೋಳ್ಬಲ-ಧನಬಲದ ಹರಾಮಿಗಳು ಅರಣ್ಯ ಅತಿಕ್ರಮಿಸಿ ಹಳೆಯ ಒತ್ತುವರಿ ತಮ್ಮದೆಂದು ಸಾಧಿಸುತ್ತಿದ್ದಾರೆ. ಜಿಲ್ಲೆಯಾದ್ಯಂತ ಅರಣ್ಯ ಲೂಟ ಅವ್ಯಾಹತವಾಗಿ ನಡೆಯುತ್ತಿದೆ. ಒಂದೆಡೆ ಅರಣ್ಯ ಅತಿಕ್ರಮಣ ಆಗುತ್ತಿದ್ದರೆ, ಇನ್ನೊಂದೆಡೆ ಅರಣ್ಯಾಧಿಕಾರಿಗಳು ಈ ಅತಿಕ್ರಮಣ ತೆರವುಗೊಳಿಸಲು ಹತಾರ ಪ್ರಯೋಗಿಸುತ್ತಲೇ ಇದ್ದಾರೆ.

ಈ ಅರಣ್ಯ ಒತ್ತುವರಿ ಖುಲ್ಲಾಪಡಿಸುವ ಅಸ್ತ್ರವನ್ನು ಭ್ರಷ್ಟ-ದುಷ್ಟ ಅರಣ್ಯ ಅಧಿಕಾರಿಗಳು ದುಡ್ಡು ದೋಚಲು ಬಳಸಿಕೊಳ್ಳುತ್ತಿದ್ದಾರೆ. ಹಳೆಯ ಅತಿಕ್ರಮಣದಾರರನ್ನು ಅವರ ಒತ್ತುವರಿ ಹೊಸತೆಂದು ಬ್ಲ್ಯಾಕ್‌ಮೇಲ್ ಮಾಡಿ ಸುಲಿಗೆ ನಡೆಸಿದ್ದಾರೆ. ರಾಜಕೀಯ ಬಲ-ಕಾಸಿನ ಕಸುವು ಇರುವವರ ಹತ್ತಾರು ಹೆಕ್ಟೇರ್ ಅಕ್ರಮ ಅತಿಕ್ರಮಣದತ್ತ ಈ ಚೋರರು ಕಣ್ಣೆತ್ತಿಯೂ ನೋಡುವುದಿಲ್ಲ! ಆದರೆ ಬಡ-ಅಸಹಾಯಕರ ಆಸೀಸರನಂಥ ಅಸಡ್ಡಾಳ ಚಿಡ್ಡಿ ವಿಪ್ರರು ಹಸಿ-ಹಸಿರು ಮರಗಳನ್ನೇ ಕಡಿದುರುಳಿಸಿ ಅರಣ್ಯ ಭೂಮಿ ಕಬ್ಜಾ ಮಾಡಿಕೊಂಡು ಭರ್ಜರಿ ತೋಟ ತಯಾರಿಸಿ ಹಾಯಾಗಿದ್ದಾರೆ!! ವಾಸಿಸಲು-ವ್ಯವಸಾಯ ಮಾಡಲೆಂದು ನಿರ್ಗತಿಕರು ಅತಿಕ್ರಮಣ ಮಾಡಿದರೆ ನಿತ್ಯ ಅರಣ್ಯ ಅಧಿಕಾರಿ ವೇಷದ ರಾಕ್ಷಸರ ಕಾಟ! ಯಾವಾಗ ದಾಳಿ ಮಾಡಿ ಬದುಕು ಧ್ವಂಸ ಮಾಡುತ್ತಾರೋ ಎಂಬ ಆತಂಕ. ಅನಾದಿಕಾಲದಿಂದ ಕಾಡಿನ ಭೂಮಿಯಲ್ಲೇ ಉತ್ತು-ಬಿತ್ತಿ ಬದುಕುತ್ತಿರುವವರ ಮೇಲೆ ಅರಣ್ಯ ಅಧಿಕಾರಿಗಳ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ.

ಹೇಗೆ ಈ ಅರಣ್ಯ ಅತಿಕ್ರಮಣ ಮತ್ತು ಒತ್ತುವರಿ ತೆರವು ಕಾನೂನು ಕಳ್ಳ ಅರಣ್ಯಾಧಿಕಾರಿಗಳ ಕೈಯಲ್ಲಿ ದಾದಾಗಿರಿ ಧನದಾಹ ತೀರಿಕೆಗೆ ಅಸ್ತ್ರವಾಗಿದೆಯೋ ಹಾಗೆ ಕಂಗಾಲಾಗಿರುವ ಲಕ್ಷಾಂತರ ಅತಿಕ್ರಮಣಕಾರರ ಅಸಹಾಯಕತೆ ಮಂತ್ರಿ ಕಾಗೇರಿ, ಸೋಗಲಾಡಿ ಸಂಸದ ಅನಂತ್ಮಾಣಿ ಮತ್ತು ಅತಿಕ್ರಮಣದಾರರ ಹೋರಾಟ ಸಂಘದ ಸ್ವಯಂ ಘೋಷಿತ ಅಧ್ಯಕ್ಷ ರವೀಂದ್ರನಾಥ ನಾಯ್ಕ ಯಾನೆ ಎ.ರವೀಂದ್ರ ನಾಯ್ಕನಂಥ ಪುಢಾರಿಗಳಿಗೆ ಸದ್ದು ಸುದ್ದಿಗೆ ಇಶ್ಯೂ ಆಗಿಬಿಟ್ಟಿದೆ. ಪ್ರತಿ ತಾಲ್ಲೂಕಲ್ಲಿ ಅರಣ್ಯ ಅತಿಕ್ರಮಿತರ ಹಿತಚಿಂತಕ ವೇಷದ ನಯವಂಚಕರು ಹುಟ್ಟಿಕೊಂಡಿದ್ದಾರೆ. ಈ ಓರಾಟಗಾರರ ಹಿಂದೆ ಭಟ್ಕಳದಂಥ ಕಡೆ ನವಾಯತ ಲ್ಯಾಂಡ್ ಮಾಫಿಯಾದ ಫೈನಾನ್ಸಿಯರ್‌ಗಳಿದ್ದರೆ, ಘಟ್ಟದ ಮೇಲೆ ಪುರೋಹಿತಶಾಹಿ ಲಾಬಿ ಜೋರಾಗಿದೆ. ಕೆನರಾ ಪ್ರಿವಿಲೇಜ್ ಆಕ್ಟ್‌ನ 'ಸೊಪ್ಪಿನ ಬೆಟ್ಟ' ಕ್ಲಾಜ್ ತೋರಿಸಿ ಅರಣ್ಯ ಭೂಮಿ ಸ್ವಾಹಾ ಹುನ್ನಾರ ಹೈಗರ ಗ್ಯಾಂಗ್ ನಾಜೂಕಾಗಿ ನಡೆಸಿದೆ.

ಅಕ್ರಮ-ಸಕ್ರಮ ಅರಣ್ಯ ಒತ್ತುವರಿ ಸಮಸ್ಯೆ ಸುತ್ತಲೀಗ ರಾಜಕಾರಣ-ಲ್ಯಾಂಡ್ ಮಾಫಿಯಾ-ವೈದಿಕ ತಂತ್ರಗಾರಿಕೆಗಳೆಲ್ಲ ಥೈ ತಕ ಕುಣಿಯುತ್ತಿವೆ. ಈ

ನಾಯ್ಕ ಅತಿಕ್ರಮಣದಾರರ ಸಂಘಟಿಸಿ ಬೊಬ್ಬೆ ಹೊಡೆಯುತ್ತಿದ್ದಾರೆ.

ಹಾಗಂತ ಅರಣ್ಯ ಅಧಿಕಾರಿಗಳ ಹುಚ್ಚಾಟ-ಕ್ರೌರ್ಯವೇನೂ ಕಡಿಮೆ ಆಗಿಲ್ಲ. ಈ ಖಾಕಿ ಕಿರಾತಕರ ಕಂಟ್ರೋಲ್ ಮಾಡಬೇಕೆಂಬ ಜನಪರ ಯೋಚನೆ ಎಂದೂ ಜಿಲ್ಲಾ ಮಂತ್ರಿ ಕಾಗೇರಿ ಮಾಡಿಲ್ಲ. ಅತಿಕ್ರಮಣದಾರರ ಹೋರಾಟಕ್ಕೆ ಹೆದರಿ ಕಾಗೇರಿ "ಅತಿಕ್ರಮಣ ಖುಲ್ಲಾಪಡಿಸಬೇಡಿ..." ಎಂದು ಅಧಿಕಾರಿಗಳಿಗೆ ಹೇಳಿ ನಾಟಕವಾಡಿದ್ದೂ ಇದೆ. ಆದರೆ ಈ ಹೇತ್ಲಾಂಡಿ ಮಂತ್ರಿ ಮಾತಿಗೆ ಅರಣ್ಯಾಧಿಕಾರಿಗಳು ಕೇರ್ ಮಾಡಿದ್ದೇ ಇಲ್ಲ. ಹತ್ತಿಪ್ಪತ್ತು ವರ್ಷದ ಹಿಂದಿನ ಅರಣ್ಯ ಅತಿಕ್ರಮಣ ಭೂಮಿಯಲ್ಲಿಯ ಫಲಭರಿತ ತೆಂಗು-ಕಂಗು- ಬಾಳೆ-ಹಣ್ಣು-ಹಂಪಲಿನ ಗಿಡಮರಗಳನ್ನು ಅರಣ್ಯ ಅಧಿಕಾರಿಗಳೆಂಬ ಕಟುಕರು ಕಡಿದುರುಳಿಸಿದ್ದಾರೆ. ಕೇಂದ್ರದ ಅರಣ್ಯ ಹಕ್ಕು ಕಾಯ್ದೆ ಜಾರಿಯಲ್ಲಿದ್ದಾಗಲೂ ಪಾಪದವರ ತೋಟ-ಮನೆ ಧ್ವಂಸ ಮಾಡಿ ಕೇಕೆ ಹಾಕಿದ್ದಾರೆ.

ಇತ್ತೀಚೆಗೆ ಸಿಎಂ ಯಡ್ಡಿ ಜಿಲ್ಲೆಗೆ ಬಂದಾಗ "ಹಳೇ ಅತಿಕ್ರಮಣ ತೆರವು ಮಾಡಬೇಡಿ... ಹೊಸ ಅತಿಕ್ರಮಣ ಆಗದಂತೆ ಎಚ್ಚರ ವಹಿಸಿ" ಎಂದು ಅರಣ್ಯಾಧಿಕಾರಿಗಳಿಗೆ-ಜಿಲ್ಲಾಡಳಿತಕ್ಕೆ ಸೂಚಿಸಿದ್ದರು. ಆದರೆ ಸ್ಯಾಡಿಸ್ಟ್ ಅರಣ್ಯಾಧಿಕಾರಿಗಳು ಮನಸೋಇಚ್ಛೆ ಹಾವಳಿ ಮಾಡುತ್ತಿದ್ದಾರೆ. ಅಮಾಯಕರ ತೋಟ-ಗದ್ದೆ-ಮನೆ-ಮಠ ನಿರ್ನಾಮ ಮಾಡಿ ಕ್ರಿಮಿನಲ್ ಕೇಸೂ ಜಡಿಯುತ್ತಿದ್ದಾರೆ. ಕಳೆದ ಮೂರ್ನಾಲ್ಕು ತಿಂಗಳಿಂದ ಅಧಿಕಾರಿಗಳ ಪಾತಕ ಮಿತಿಮೀರಿ ಹೋಗಿದೆ. ನೂರಾರು ಕೇಸ್‌ಗಳು ದುರ್ಬಲರ ಮೇಲೆ ಹಾಕಲಾಗಿದೆ. ಭಟ್ಕಳ ತಾಲ್ಲೂಕೊಂದರಲ್ಲೇ ಮೂರು ತಿಂಗಳಲ್ಲಿ ಬರೋಬ್ಬರಿ 27 ಕೇಸ್‌ಗಳನ್ನು ಅರಣ್ಯ ಇಲಾಖೆ ದಾಖಲಿಸಿ ಮುಗ್ಧರ ಸತಾಯಿಸಿದೆ. ಕೆಲವು ದಿನಗಳಿಂದ ಆಗಾಗ ಅರಣ್ಯ ಅತಿಕ್ರಮಣದಾರರು ಮತ್ತು ಅರಣ್ಯಾಧಿಕಾರಿಗಳ ನಡುವೆ ದೊಡ್ಡ ಸಂಘರ್ಷವೇ ನಡೆಯುತ್ತಿದೆ. ಹಠಕ್ಕೆ ಬಿದ್ದವರಂತೆ ಅರಣ್ಯ ಇಲಾಖಾಧಿಕಾರಿಗಳು ಬಡ ಅತಿಕ್ರಮಣದಾರರ ಕಾಡುತ್ತಿದ್ದಾರೆ.

ಭಟ್ಕಳದ ಅರಣ್ಯ ಇಲಾಖೆಯ ಅಧಿಕಪ್ರಸಂಗಿ ಅಧಿಕಾರಿಗಳಿಗೆ ಅತಿಕ್ರಮಣದಾರರ ಮೇಲೆ ಯಾಕಿಷ್ಟು ಹಗೆಯೋ ಗೊತ್ತಿಲ್ಲ, ಸಿಎಂ-ಜಿಲ್ಲಾ ಮಂತ್ರಿ ಮಾತನ್ನೆಲ್ಲ ಧಿಕ್ಕರಿಸಿ ಸೇಡು ತೀರಿಕೆಗೆ ಹವಣಿಸುವ ಅರಣ್ಯಾಧಿಕಾರಿಗಳಿಗೆ ಲಂಗುಲಗಾಮೇ ಇಲ್ಲದಂತಾಗಿದೆ. ವೇದಾಂತ ಹೇಳುತ್ತಲೇ ಗಾಳ ಹಾಕುವ ಚಾಲಾಕಿ ಡಿಸಿಎಫ್ ಉದುಪುಡಿ ಸಾಹೇಬರ ದೌರ್ಬಲ್ಯ ಬಲ್ಲ ಅಧೀನಾಧಿಕಾರಿಗಳು ಬೇಕಾಬಿಟ್ಟಿ ಅತಿಕ್ರಮಣದಾರರ ಭೂಮಿಗೆ ಮುಗಿಬಿದ್ದು ಫಲಭರಿತ ಅಡಿಕೆ-ತೆಂಗು-ಬಾಳೆ ಮರ ಕಡಿದುಹಾಕುತ್ತಿದ್ದಾರೆ. ಮೊನ್ನೆ ಸೋಮವಾರ (6-6-2011) ಭಟ್ಕಳದ ಎಸಿಎಫ್ ಉದಯಕುಮಾರ್ ಜೋಗಿ, ಆರ್‌ಎಫ್‌ಓ ಎಂ.ಜಿ.ನಾಯ್ಕ ಮತ್ತು ಗಾರ್ಡ್-ಫಾರೆಸ್ಟರ್ ಪಡೆ ಬೆಟ್ಕೂರು ಗ್ರಾಮದ ತಲಮುಂಗುಳಿ ಅರಣ್ಯಪ್ರದೇಶದಲ್ಲಿ ಬಡವನ ತೋಟ ನಾಶಮಾಡಿ ಪೌರುಷ ಮೆರೆದಿದೆ! ಕಷ್ಟಪಟ್ಟು ಬೆಳೆಸಿದ್ದ ತೆಂಗು-ಅಡಿಕೆ-ಬಾಳೆ ಮರ-ಗಿಡಗಳನ್ನು ಖಾಕಿ ಪಾತಕಿಗಳು ಸವರಿ ಹಾಕಿದ್ದು ನೋಡಲಾಗದೆ ಅತಿಕ್ರಮಣದಾರ ಈರಪ್ಪ ನಾಯ್ಕ ಎಂಬ 60ರ ವೃದ್ಧ ಎದೆಯೊಡೆದುಕೊಂಡು ತೋಟದಲ್ಲೇ ಅಸುನೀಗಿದ್ದಾನೆ!!


ಸುಮಾರು 15-20 ವರ್ಷದ ಹಿಂದೆಯೇ ಈರಪ್ಪ ನಾಯ್ಕ ತಲಮುಂಗುಳಿ ಅರಣ್ಯ ಏರಿಯಾದಲ್ಲಿ 20 ಗುಂಟೆಯಷ್ಟು ಭೂಮಿ ಅತಿಕ್ರಮಣ ಮಾಡಿದ್ದರು. ಯಾಕೋ ಈ ಈರಪ್ಪ ನಾಯ್ಕನ ಅತಿಕ್ರಮಣ ತೋಟ ಕಂಡರೆ ಅರಣ್ಯ ಇಲಾಖೆಗೆ ಆಗುವುದಿಲ್ಲ, ಬರೋಬ್ಬರಿ 4 ಬಾರಿ ಆತನ ತೋಟ, ಮನೆ ಮೇಲೆ ಅರಣ್ಯ ಅಧಿಕಾರಿ ಪಡೆ ದಾಳಿ ಮಾಡಿದೆ. ಆದರೂ ಈರಪ್ಪ ನಾಯ್ಕ ರಕ್ತವನ್ನು ಬೆವರಾಗಿ ಸುರಿಸಿ ಅಡಿಕೆ-ತೆಂಗು ಬೆಳೆಸುತ್ತ ಬಂದಿದ್ದ. ಆತನ ಜಾಗದ ಮೇಲೆ ಕಣ್ಣಿಟ್ಟಿದ್ದ ಬಲಾಢ್ಯನೊಬ್ಬನ ಕಿತಾಪತಿ ಮತ್ತು ತಮಗೆ ಕೇಳಿದಾಗೆಲ್ಲ ಕಾಸು ಕೊಟ್ಟಿಲ್ಲವೆಂಬ ಸಿಟ್ಟಿಂದ ಅರಣ್ಯ ಅಧಿಕಾರಿಗಳು ಆಗಾಗ ಆತನ ತೋಟ ನಾಶ ಮಾಡುವ ಪರಿಪಾಠ ಬೆಳೆಸಿಕೊಂಡಿದ್ದರು.

ಅಂತೆಯೇ ಮೊನ್ನೆಯೂ ಖಾಕಿ ಖದೀಮರು ಈರಪ್ಪನ ತೋಟ-ಮನೆ ಹಾಳು ಮಾಡಿ ದಿಗ್ವಿಜಯದ ಗತ್ತಿನಿಂದ ಮರಳಿದ್ದಾರೆ. ಅದೆಷ್ಟು ಅಮಾನುಷವಾಗಿ ಈ ಸರ್ಕಾರಿ ಧೂರ್ತರು ವರ್ತಿಸಿದ್ದಾರೆಂದರೆ ಬರೀ ಹದಿನೈದೇ ದಿನದ ಹಿಂದೆ ಸತ್ತ ಹೆಂಡತಿಯ ಸೂತಕದಲ್ಲಿದ್ದ ಈರಪ್ಪನ ಜತೆ ಜಗಳಾಡಿದ್ದಾರೆ. ಆತನಿಗೆ ಬೆದರಿಸಿದ್ದಾರೆ. ನೆಡಲೆಂದು ತಂದಿಟ್ಟಿದ್ದ ಸಾವಿರಾರು ರೂ.ಗಳ ಅಡಿಕೆ-ತೆಂಗಿನ ಸಸಿಗಳನ್ನು ಹೊತ್ತೊಯ್ದು ಪಕ್ಕದ ಕಾಡಿನಲ್ಲಿ ಬಿಸಾಡಿದ್ದಾರೆ. ಮನೆಹೆಂಚು ಕಿತ್ತೆಸೆದಿದ್ದಾರೆ. ಇಲಾಖೆ ನೌಕರರ ಕ್ರೌರ್ಯದಿಂದ ಈರಪ್ಪ ಜರ್ಜರಿತನಾಗಿ ಹೋಗಿದ್ದಾನೆ. ಶ್ರಮಪಟ್ಟು-ಪ್ರೀತಿಯಿಂದ ಬೆಳೆಸಿದ್ದ ತೋಟ ಕಣ್ಣೆದುರೇ ಧ್ವಂಸಮಾಡಿದ್ದು ಕಂಡು





ಅರಣ್ಯಾಧಿಕಾರಿಗಳ ಕಾಟದಿಂದ ತನ್ನ ತೋಟದಲ್ಲಿ ಹೆಣವಾದ ಈರಪ್ಪ... ಮತ್ತು ಜನರ ಪ್ರತಿಭಟನೆ.....




ಕಿಮ್ಮತ್ತಿಲ್ಲದ ಕಾಗೇರಿ

ಉತ್ತರ ಕನ್ನಡದ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿಯೆಂದರೆ ಪೇದೆ-ಚಪರಾಸಿಯೂ ಕೇರ್ ಮಾಡುವುದಿಲ್ಲ, ಮಂತ್ರಿ ಮಾತಿಗೆ ಕಿಮ್ಮತ್ತೇ ಇಲ್ಲ. ಕಾಗೇರಿ ಹೇಳೋದೇ ಒಂದು ಅಧಿಕಾರಿಗಳು ಮಾಡೋದೇ ಮತ್ತೊಂದು. ಜಿಲ್ಲೆಯ ಪ್ರತಿ ಸಮಸ್ಯೆ-ದೈನಂದಿನ ಆಡಳಿತದಲ್ಲಿ ಇದು ಮಾಮೂಲು. ಅರಣ್ಯ ಅತಿಕ್ರಮಣ ಪ್ರಕರಣವನ್ನೇ ತೆಗೆದುಕೊಳ್ಳಿ. ಭಟ್ಕಳದಲ್ಲಿ ಪದೇಪದೆ ಅರಣ್ಯ ಅಧಿಕಾರಿಗಳು ಮತ್ತು ಅತಿಕ್ರಮಣಕಾರರ ಮಧ್ಯೆ ಸಂಘರ್ಷ ನಡೆಯುತ್ತಿದ್ದಾಗೊಮ್ಮೆ ಕಾಗೇರಿ ಮೀಟಿಂಗ್ ತೆಗೆದುಕೊಂಡಿದ್ದರು.

ಅತಿಕ್ರಮಣ ಖುಲ್ಲಾಪಡಿಸಲೇಬೇಕಾಗಿ ಬಂದರೆ ತಹಶೀಲ್ದಾರ್ ಅಥವಾ ಎಸಿ ಸಮ್ಮುಖದಲ್ಲಿ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ನಡೆಸಬೇಕು. ಹಳೆಯ ಅತಿಕ್ರಮಣಕಾರರಿಗೆ ತೊಂದರೆ ಕೊಡಕೂಡದು ಎಂದು ಮಂತ್ರಿ ಮಾನ್ಯ ಕಾಗೇರಿ ಅರಣ್ಯಾಧಿಕಾರಿಗಳಿಗೆ ತಾಕೀತು ಮಾಡಿದ್ದರು. ಆದರೆ ಕಾಗೇರಿ ಆದೇಶಕ್ಕೆ ಅಧಿಕಾರಿಗಳು ಬಿಲ್ಲಿಬೆಲೆಯೂ ಕೊಡುತ್ತಿಲ್ಲ, ಸಿಕ್ಕಸಿಕ್ಕ ಅತಿಕ್ರಮಣಕಾರರ ಮೇಲೆ ದಾಳಿ ಮಾಡುತ್ತಿದ್ದಾರೆ. ಈ ಪಾಪಿಗಳ ದರ್ಪಕ್ಕೆ ಬಡ ಜೀವವೊಂದು ಬಲಿಯಾಗಿ ಹೋಗಿದೆ.

ಹಾಗಂತ ಭಟ್ಕಳದ ಅರಣ್ಯ ಇಲಾಖೆಗೆ ವೆಂಕ್ಟಾಪುರ, ಜಾಲಿ, ಹೆಬ್ಳೆ ಮುಂತಾದೆಡೆ ಹಣವಂತರು ಎಕರೆಗಟ್ಟಲೆ ಅರಣ್ಯ ಅತಿಕ್ರಮಿಸಿ ಬಂಗಲೆಗಳ ಕಟ್ಟಿ ಮಾರುತ್ತಿದ್ದಾರೆ. ಇಂಥವರ ಮೇಲೆ ಕ್ರಮಕೈಗೊಳ್ಳುವ ಧಮ್ ಡಿಸಿಎಫ್ ಉದುಪುಡಿ ಮತ್ತವನ ಖಾಕಿ ಪಡೆಗಿಲ್ಲ. ಹಳ್ಳಿಗಳಲ್ಲಿ ಬುಡಕಟ್ಟು ಮರಾಠಿಗಳು, ಹಿಂದುಳಿದ ವರ್ಗದವರು ಅರಣ್ಯ ಅತಿಕ್ರಮಿಸಿ ಬದುಕುತ್ತಿದ್ದಾರೆ. ಆದರೆ ಭಟ್ಕಳದ ಹೊರವಲಯದಲ್ಲಿ ಅರಣ್ಯ ಭೂಮಿ ಕಬಳಿಸಿ ಲ್ಯಾಂಡ್ ದಂಧೆ ಮಾಡುವ ದೊಡ್ಡ ಮಾಫಿಯಾನೇ ಇದೆ. ಈ ಮಾಫಿಯಾ ಮತ್ತು ಅರಣ್ಯಾಧಿಕಾರಿಗಳು ಅನ್ಯೋನ್ಯವಾಗಿದ್ದಾರೆ. ಭಟ್ಕಳದ ಹಣವಂತ ನವಾಯತ ಮುಸ್ಲಿಮರಿಗೆ ಕಾನೂನು ಕಟ್ಟಳೆಗಳ ಪರಿಜ್ಞಾನ ಅಷ್ಟಕಷ್ಟೇ. ಅವರನ್ನು ಯಾಮಾರಿಸಿ ಭೂವ್ಯವಹಾರ, ಲ್ಯಾಂಡ್ ಮಾಫಿಯಾ ಮತ್ತು ಅರಣ್ಯ ಅಧಿಕಾರಿಗಳು ನಾಜೂಕಾಗಿ ನಡೆಸುತ್ತಿದ್ದಾರೆ.



ರವೀಂದ್ರ ನಾಯ್ಕ

ಇದೇ ಭಟ್ಕಳದ ಅತಿಕ್ರಮಣಕಾರರ ಮತ್ತು ಅರಣ್ಯಾಧಿಕಾರಿಗಳ ಜಗಳದ ಮೂಲ ಕಾರಣ. ಅರಣ್ಯ ಅತಿಕ್ರಮಣದಾರರ ನೇತಾರನೆಂದು ಪೋಸು ಕೊಡುವ ರಾಮ ಮೊಗೇರ್ ಎಂಬ ಗೋಲ್‌ಮಾಲ್ ಗಿರಾಕಿ ಲ್ಯಾಂಡ್ ಮಾಫಿಯಾ ಮತ್ತು ಅರಣ್ಯಾಧಿಕಾರಿಗಳ ನಡುವಿನ ದಲ್ಲಾಳಿ ಎನ್ನುವವರೂ ಇದ್ದಾರೆ. ಜಿಲ್ಲಾ ಅತಿಕ್ರಮಣದಾರರ ಹೋರಾಟ ಸಂಘ ಕಟ್ಟಿರುವ ಹಾರಾಟಗಾರ ರವೀಂದ್ರ ನಾಯ್ಕ ಭಟ್ಕಳದ ಅತಿಕ್ರಮಣ ಅವಾಂತರದ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿದೆ. ರಾಮನಂಥವರಿಂದ ಅರ್ಹ ಅತಿಕ್ರಮಣದಾರರ ನ್ಯಾಯೋಚಿತ ಹಕ್ಕು-ಬೇಡಿಕೆ ಕೂಗಿಗೆ ಅಪಚಾರ ಆಗದಂತೆ ನೋಡಿಕೊಳ್ಳಬೇಕಿದೆ.

ಹಿಂದುಳಿದ ವರ್ಗದ ನಾಯಕ ರವೀಂದ್ರ ನಾಯ್ಕ ಎರಡೂವರೆ ದಶಕದಿಂದ 'ಹುದ್ದೆಗಾಗಿ ಹೋರಾಟ' ನಡೆಸಿರುವುದು ಏನೇ ಇರಲಿ; ಆತನ ತರಹೇವಾರಿ ಹೋರಾಟದ ಪುರಾಣ ಎಂಥದ್ದೇ ಇರಲಿ ಆತ ಬುಡಕಟ್ಟು ಸಮುದಾಯದ ಅತಿಕ್ರಮಣಕಾರರ ಪರ ಪ್ರಾಮಾಣಿಕವಾಗಿ ನೈಜ ಕಳಕಳಿಯಿಂದ ಹೋರಾಡುತ್ತಿದ್ದಾರೆ. ಅತಿಕ್ರಮಣದಾರರು ತನ್ನ ಮೇಲಿಟ್ಟಿರುವ ನಂಬಿಕೆ ಹುಸಿಯಾಗದಂತೆ-ಹೋರಾಟ ಕಾವು ಕಳೆದುಕೊಳ್ಳದಂತೆ ರವಿ ನಿಯತ್ತಿನಿಂದ ಕೆಲಸ ಮಾಡಬೇಕಿದೆ. ಆತನ ಇತರ ಫ್ಲಾಪ್ ಹೋರಾಟಗಳಂತೆ ಇದಾಗದಿರಲಿ....


ನಾಶಗೊಂಡಿರುವ ಈರಪ್ಪನ ತೋಟ...

ಂಗಲಾಚಿದರೂ ಕಲ್ಲು ಹೃದಯದ ಖಾಕಿಗಳು ಕೇಳದೆ ೋಟ ಕಡಿದುಹಾಕಿದ್ದು ಈರಪ್ಪನ ಮುದಿ ದೇಹದಿಂದ ಹಿಸಿಕೊಳ್ಳಲಾಗಲಿಲ್ಲ. ಅಂದೇ ರಾತ್ರಿ ಆತ ತೋಟದ ಡುವೆಯೇ ಹೆಣವಾಗಿ ಬಿದ್ದಿದ್ದಾನೆ.

ಈರಪ್ಪನ ಸಾವಿನ ಸುದ್ದಿ ಬೆಳಗಾಗುತ್ತಲೇ ಇಡೀ ಟ್ಟಳದ ತುಂಬ ಹಬ್ಬಿದೆ. ಆತನ ಕಡಿದು ಹಾಕಿದ್ದ ಡ-ಮರಗಳ ಮಧ್ಯವೇ ಹೆಣವಾಗಿ ಬಿದ್ದಿದ್ದು ತಿಕ್ರಮಣದಾರರನ್ನು ಕೆರಳಿಸಿದೆ. ಮುಂದೆ ತಮಗೂ ದೇ ಗತಿ ಬಂದೀತೆಂಬ ಭಯ ಕಾಡಿದೆ. ಗುಂಪು-ಂಪಾಗಿ ಜನ ಜಮೆಯಾಗಿದ್ದಾರೆ. ಈರಪ್ಪನ ಶವ ಟ್ಟುಕೊಂಡು ಅರಣ್ಯ ಇಲಾಖೆಯ ಪಾತಕ ಅಧಿಕಾರಿಗಳ ೀಲೆ ಕ್ರಿಮಿನಲ್ ಕೇಸು ಹಾಕುವಂತೆ ಒತ್ತಾಯಿಸಿದ್ದಾರೆ. ತ ಅತಿಕ್ರಮಿತರ ಭೂಮಿಯ ಹಕ್ಕು ಮತ್ತು ಕುಟುಂಬಕ್ಕೆ ರಿಹಾರ ಕೊಡಬೇಕೆಂದು ಜನ ಒತ್ತಾಯಿಸತೊಡಗಿದರು. ್ಳಕ್ಕೆ ಡಿ.ಸಿ., ಎಸ್ಪಿ ಬರುವತನಕ ಶವಸಂಸ್ಕಾರ ಾಡುವುದಿಲ್ಲವೆಂದು ಹಠಹಿಡಿದರು.

ಡಿ.ಸಿ.ಕೃಷ್ಣಯ್ಯ ಮತ್ತು ಎಸ್ಪಿ ರಮೇಶ್ ಬರುವಾಗ ಂಜೆಯಾಗಿತ್ತು. ಡಿಸಿ ಪ್ರತಿಭಟನಾಕಾರರ ಬೇಡಿಕೆ ಈಡೇರಿಸುವ ಭರವಸೆ ಕೊಟ್ಟಾಗ ಜನ ಸುಮ್ಮನಾದರು. ಸಿ-ಎಸ್ಪಿ ಬಂದರೂ ಅರಣ್ಯ ಅಧಿಕಾರಿಗಳು ಮಾತ್ರ ರಲೇ ಇಲ್ಲ. ಕಾನೂನಿನಂತೆ ತೋಟ ತೆರವು ಮಾಡಿದ್ದೇವೆ ನ್ನುತ್ತಿರುವ ಅರಣ್ಯ ಅಧಿಕಾರಿಗಳು ಹೇಡಿಗಳಂತೆ ತಲೆ ರೆಸಿಕೊಂಡಿದ್ದು ನಾಚಿಕೆಗೇಡು. ಕಾನೂನು ನಿಷ್ಠೆಯಿಂದ ಳಸಿದ್ದೇ ಆಗಿದ್ದರೆ ಮುಂದಿನ ಪರಿಣಾಮ ಎದುರಿಸಲು ಸಿಎಫ್ ಉದುಪುಡಿ, ಎಸಿಎಫ್ ಉದಯ ಜೋಗಿ, ರ್‌ಎಫ್‌ಓ ಎಂ.ಜಿ.ನಾಯ್ಕ ಮತ್ತವರ ಫಾರೆಸ್ಟ್-ಗಾರ್ಡ್ ಡೆ ಹೆದರಿದ್ದೇಕೆ?

ಈರಪ್ಪ ನಾಯ್ಕ ಅತಿಕ್ರಮಣ ಪ್ರಕರಣದಲ್ಲಿ ರಣ್ಯಾಧಿಕಾರಿಗಳು ಆವಸರ, ಅನ್ಯಾಯ-ಸೇಡಿನಿಂದ ರ್ತಿಸಿದ್ದಾರೆ; ಕಾನೂನು ಬುದ್ಧಿಪೂರ್ವಕವಾಗೇ ಕಡೆಗಣಿಸಿ ೌರ್ಜನ್ಯ ಎಸಗಿದ್ದಾರೆ. ಈರಪ್ಪ ನಾಯ್ಕರ ಅತಿಕ್ರಮಣ ್ರಕರಣದ ಬಗ್ಗೆ ಎರಡೆರಡು ಕೇಸುಗಳನ್ನು ಇದೇ ಧಿಕಾರಿಗಳು ದಾಖಲಿಸಿದ್ದಾರೆ. ಕಟಗಾರಕೊಪ್ಪದ ಸರ್ವೆ ಂಬರ್ 338ರಲ್ಲಿ ಈರಪ್ಪ ಅತಿಕ್ರಮಿಸಿರುವ 10 ಗುಂಟೆ ರಣ್ಯ ಜಾಗ ಖುಲ್ಲಾಪಡಿಸಿ ಸರ್ಕಾರದ ವಶಕ್ಕೆ ಪಡೆಯಲು ನುಮತಿ ಕೊಡುವಂತೆ ಆರ್‌ಎಫ್‌ಓ ಉಪ ಅರಣ್ಯ ಂರಕ್ಷಣಾಧಿಕಾರಿ ಕೋರ್ಟ್‌ನಲ್ಲಿ ಕೇಸು ದಾಖಲಿಸಿದ್ದರು. ನ್ನೊಂದು ಕೇಸ್ ಭಟ್ಕಳ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ರಣ್ಯ ಇಲಾಖೆ ಹಾಕಿತ್ತು. ಇದರಲ್ಲಿ ಈರಪ್ಪ ಅರಣ್ಯ ಮೀನು ಅತಿಕ್ರಮಿಸಿ ಕ್ರಿಮಿನಲ್ ಅಪರಾಧ ಮಾಡಿ ್ದಾನೆಂದು ಆರೋಪಿಸಲಾಗಿದೆ. ಇವೆರಡೂ ಕೇಸುಗಳು ಚಾರಣಾ ಹಂತದಲ್ಲಿದೆ.

ಹೀಗಿರುವಾಗ ಕಾನೂನುಬಾಹಿರವಾಗಿ ಈರಪ್ಪನ ೋಟಕ್ಕೆ ಅರಣ್ಯಾಧಿಕಾರಿಗಳು ನುಗ್ಗಿ ಗಿಡ-ಮರ ಕಡಿದು, ನೆ ಮುರಿದು ಹಾಕಿದ್ದು ಅಕ್ಷಮ್ಯ ಅಪರಾಧವೇ ಸರಿ!! ಾನೂನು-ನ್ಯಾಯಾಲಯಕ್ಕೆ ಉಪದ್ರವಿ ಡಿಸಿಎಫ್ ಉದುಪುಡಿ ಮತ್ತವನ ಮನೆಹಾಳ ಎಸಿಎಫ್, ರ್‌ಎಫ್‌ಓಗಳು ಕಿಮ್ಮತ್ತು ಕೊಡುವ ಪೈಕಿಯಲ್ಲ ಂಬುದು ಅತಿಕ್ರಮಣದಾರ ಈರಪ್ಪನ ಸಾವಿನಿಂದ ಾಬೀತಾಗಿಹೋಗಿದೆ. ಅತಿಕ್ರಮಣ ತೆರವುಗೊಳಿಸುವ ಾನೂನು ಈ ಭಂಡ ಅಧಿಕಾರಿಗಳ ಕೈಯಲ್ಲಿದ್ದರೆ ಮತ್ತೆ ರಡೆರಡು ಕೇಸು ಹಾಕಿದ್ಯಾಕೆ? ಹಾಗೆಯೇ ಈರಪ್ಪನ ಗ ತನ್ನ ತಂದೆ ಸಾವಿಗೆ ಅರಣ್ಯಾಧಿಕಾರಿಗಳ ದರ್ಪ-ೌರ್ಜನ್ಯವೇ ಕಾರಣವೆಂದು ಪೊಲೀಸರಿಗೆ ಕಂಪ್ಲೇಂಟು ೊಟ್ಟಿದ್ದ. ಆದರೆ ಎಫ್‌ಐಆರ್‌ನಲ್ಲಿ ಪ್ರಮುಖ ಪಾತಕಿ ಧಿಕಾರಿಗಳ ಹೆಸರೇ ಇಲ್ಲ ಯಾಕೆ?


ಹಾಗಂತ ಜಿಲ್ಲೆಯ ಜನ ಕೇಳುತ್ತಿದ್ದಾರೆ. ಆದರೆ ದೆಲ್ಲ ಅಧಿಕಾರಿಗಳ ಕಿವಿ ಹಿಂಡಿ ಕೇಳುವ ತಾಕತ್ತು ೊಕ್ಕು ಜಿಲ್ಲಾ ಮಂತ್ರಿ ಕಾಗೇರಿ ಮಾಣಿಗೆ ಎಲ್ಲಿಂದ ಂದೀತು? ಹಾಗಾಗಿ ಜಿಲ್ಲೆಯಲ್ಲಿ ದಗಲ್ಬಾಜಿ ಅಧಿಕಾರಿಗಳು ೇಳಿದ್ದೇ ಕಾನೂನು-ಆಡಿದ್ದೇ ಆಟದಂತಾಗಿ ಹೋಗಿದೆ. ಧಿಕಾರಿಗಳ ಮೇಯಲು ಬಿಟ್ಟು ಕಾಗೇರಿ ಅದೆತ್ತಲೋ ರುಗಿ ತಾನೂ ಮೇಯುತ್ತಿದ್ದರೆ ಅಮಾಯಕ ಜನ ಧಿಕಾರಿಗಳ ದರ್ಪ-ದೌರ್ಜನ್ಯ-ಸುಲಿಗೆ ಸಂಕಟಕ್ಕೆ ಸಿಲುಕಿ ಬವಿಲಿ ಒದ್ದಾಡುತ್ತಿದ್ದಾರೆ. ಜನದ್ರೋಹಿ ಬೆಪ್ಪ ಕಾಗೇರಿ ಂಡ ಜಿಲ್ಲೆಗೆ ಮುಕ್ತಿ ಎಂದು?

• ನಹುಷ

BBMP-ಬನಶಂಕರಿ ಮರುಚುನಾವಣೆ

ಬಿಜೆಪಿ ಗೆಲ್ಲಿಸಲು ಕಾಂಗ್ರೆಸ್ ರಣವೀಳ್ಯ

ಬನಶಂಕರಿಗೆ ಜೆಡಿಎಸ್ ಕೌನ್ಸಿಲರ್ ಆಗಿದ್ದ ದಿವಾನ್ ಆಲಿಯನ್ನು ಕೊಂದು ಹಾಕಿದ ಪಾತಕಿ ಮಾಹಿನ್ ಗ್ಯಾಂಗ್ ಈಗ ಬಿಜೆಪಿ ಬೆನ್ನಿಗೆ ನಿಂತಿದೆ. ಇದೇ 26 ಕ್ಕೆ ಬಿಬಿಎಂಪಿಯ ಬನಶಂಕರಿ ದೇವಸ್ಥಾನದ ವಾರ್ಡಿಗೆ ಮರುಚುನಾವಣೆ. ಇಲ್ಲಿಗೆ ವರ್ಷದ ಹಿಂದಷ್ಟೇ ಎರಡು ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಅಯ್ಯೂಬ್‌ನನ್ನು ಸೋಲಿಸಿ ಗೆದ್ದವನು ದಿವಾನ್ ಆಲಿ. ಆತನನ್ನು ಮಾಹಿನ್ ಕೊಂದು ಹಾಕಿದ ಕಾರಣಕ್ಕೇ ಈಗ ನಡೆಯುತ್ತಿರುವ ಮರುಚುನಾವಣೆಯಲ್ಲಿ ಆಲಿಯ ತಮ್ಮ ಅಕಬರ್ ಇಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದಾನೆ.



ಅಕಬರ್

2011ರ ಜನವರಿ 16ರ ಅಪರಾಹ್ನ ಕೌನ್ಸಿಲರ್ ಆಲಿಯನ್ನು ಹಂತಕ ಪಡೆ ನಡುರಸ್ತೆಯಲ್ಲಿ ಗುಂಡಿಟ್ಟು ಕೊಂದಾಗ ಬನಶಂಕರಿ ವಾರ್ಡಿನ ಹಿಂದೂ ಮುಸ್ಲಿಮರೆನ್ನದೇ ಕಣ್ಣೀರಿಟ್ಟರು. ಯಾರೇನೇ ರೌಡಿ ಪಟ್ಟ ಕಟ್ಟಿದರೂ ಆಲಿ ಜನರ ಕಣ್ಣಲ್ಲಿ ನಾಯಕನೆ. ತಾನೇ ನಿಂತು ಗಣೇಶೋತ್ಸವವನ್ನು ನಡೆಸುತ್ತಿದ್ದ. ಅಣ್ಣಮ್ಮ ಕಾರ್ಯಕ್ರಮಕ್ಕೂ ದುಡ್ಡು ಕೊಡುತ್ತಿದ್ದ. ಗೆದ್ದ ಖುಷಿಯಲ್ಲಿ ಟೀವಿ ಕ್ಯಾಮೆರಾಗಳ ಮುಂದೆ ಬನಶಂಕರಿ ತಾಯಿಯ ಕೃಪೆಯಿಂದಲೇ ತಾನು ಗೆದ್ದೆನೆಂದು ಹೇಳಿಕೆ ಕೊಟ್ಟ. ಆದರೆ ಅಂಡರ್‌ವರ್ಲ್ಡ್ ಆತನನ್ನು ಬಿಡಲಿಲ್ಲ. ಮಚ್ಚಿ ಶೌಕತ್ ಎಂಬ ಫುಟ್‌ಪಾತ್ ವ್ಯಾಪಾರಿಯನ್ನು ಕೊಲ್ಲಿಸಿದ ಮಾಹಿನ್ ಶಿಷ್ಯರ ವಿರುದ್ಧ ಕೋರ್ಟಿನಲ್ಲಿ ಸಾಕ್ಷಿ ಹೇಳಿಸಲು ಹಠಕ್ಕೆ ಬೀಳದೇ ಹೋಗಿದ್ದರೆ ಆಲಿ ಬದುಕಿರುತ್ತಿದ್ದನೇನೋ.



ರಾ.ಲಿಂ. ರೆಡ್ಡಿ

ಆಲಿ ಹತ್ಯೆಯಿಂದ ಲಾಭವಾಗಿದ್ದು ಕೇವಲ ಮುಸ್ಲಿಂ ಪಾತಕಿಗಳಿಗಷ್ಟೇ ಅಲ್ಲ, ಅದಕ್ಕಿಂತಲೂ ದೊಡ್ಡಮಟ್ಟದ ಫಾಯಿದೆಯಾಗಿದ್ದು ಬಿಜೆಪಿಗೆ. ಪಕ್ಕದ ಗಣೇಶ್ ಮಂದಿರ ವಾರ್ಡಿನಿಂದ ಕಾಂಗ್ರೆಸ್‌ನ ಗೋವಿಂದರಾಜು ವಿರುದ್ಧ ಕೇವಲ 240 ಮತಗಳ ಅಂತರದಿಂದ ಸೋತಿದ್ದ ಎ.ಎಚ್. ಬಸವರಾಜುವಿನ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು. ಗೆದ್ದಿದ್ದರೆ ಬಸವರಾಜು ಮೇಯರ್ ಆಗಿಬಿಡುತ್ತಿದ್ದ. ಆ ಕಾಲಕ್ಕೇ ಅಶೋಕ್‌ಗೆ ಸರಿಸಮನಾಗಿ ಲೋಕಲ್ ಬಿಜೆಪಿ ನಾಯಕನೆಂಬಂತೆ ಮೆರೆದವನು ಬಸವರಾಜು. ಶತಾಗತಾಯ ತಾನು ಕೌನ್ಸಿಲರ್ ಆಗಲೇಬೇಕೆಂದು ಗೆದ್ದ ಗೋವಿಂದರಾಜುವನ್ನು ಲೋಕಾಯುಕ್ತಕ್ಕೆ ಹಿಡಿಸಿಕೊಟ್ಟ. ಹೈಕೋರ್ಟ್ ತಡೆ ನೀಡದೇ ಹೋಗಿದ್ದರೆ ಗೋವಿಂದರಾಜು ಕೌನ್ಸಿಲರ್‌ಗಿರಿ ಕಳಕೊಂಡು ಬಸವರಾಜು ಈ ಹೊತ್ತಿಗಾಗಲೇ ಕೌನ್ಸಿಲರ್ ಆಗಿಬಿಡುತ್ತಿದ್ದ. ರೋಗಿ ಬಯಸಿದ್ದೂ ಡಾಕ್ಟರ್ ಹೇಳಿದ್ದೂ ಒಂದೇ ಆದಂತೆ ಪಾತಕಿ ಮಾಹಿನ್ ಆಲಿಯನ್ನು ಕೊಂದು ಬಸವರಾಜುವಿನ ಕೌನ್ಸಿಲರ್‌ಗಿರಿಗೆ ಮರುಜೀವ ಕಲ್ಪಿಸಿಬಿಟ್ಟ.

ಸದ್ಯ ಬನಶಂಕರಿ ವಾರ್ಡಿನ ಮರುಚುನಾವಣೆಯಲ್ಲಿ ಬಿಜೆಪಿ ಕಣಕ್ಕಿಳಿಸಿರುವುದು ಇದೇ ಮಾಜಿ ಕೌನ್ಸಿಲರ್ ಬಸವರಾಜನನ್ನು. ಕಳೆದ ಬಾರಿ ಆಲಿ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದ ಎಂ.ಸಿ. ರಾಜಣ್ಣ ಸದ್ಯ ರಾಜರಾಜೇಶ್ವರಿಗೆ ಶಾಸಕರಾಗಿರುವ ಎಂ. ಶ್ರೀನಿವಾಸ್‌ರ ಬಲಗೈ ಬಂಟ. ಆಲಿ ವಿರುದ್ಧ ಏನೇ ಹೆಣಗಾಡಿದರೂ ಬಂದದ್ದು ಕೇವಲ 5385 ಮತಗಳು ಮಾತ್ರ. ಆಗಲೂ ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯನ್ನು ಹಾಕಿತ್ತು. ನಾಯಕ ಗುರಪ್ಪ ನಾಯ್ಡುಗೆ ಎಣ್ಣೆ ತಿಕ್ಕಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ ಅಯ್ಯೂಬ್ ನಾಲ್ಕೂವರೆ ಸಾವಿರದಷ್ಟು ಓಟು ಬಾಚುವಷ್ಟರಲ್ಲೇ ಹೈರಾಣಾಗಿಹೋಗಿದ್ದ. ಮುಸ್ಲಿಂ ಅಭ್ಯರ್ಥಿಯಿದ್ದಾಗಲೂ ಆಲಿಯೇ ಗೆದ್ದನೆಂದರೆ ಅದು ಆತನ ತಾಕತ್ತಲ್ಲದೇ ಮತ್ತೇನಲ್ಲ.


ಅಕ್ಬರ್ ಅಲಿ

ಈಗ ಪರಿಸ್ಥಿತಿ ಹಾಗಿಲ್ಲ. ಜೆಡಿಎಸ್ ಆಲಿ ತಮ್ಮ ಅಕಬರ್‌ನನ್ನು ಕಣಕ್ಕಿಳಿಸಿದೆಯಾದರೂ ಆಲಿಯ ಶಕ್ತಿಯೇ ಬೇರೆ ಆತನ ತಮ್ಮನ ಸಾಧ್ಯತೆಯೇ ಬೇರೆ. ಚಾಮರಾಜಪೇಟೆ ಶಾಸಕ ಜಮೀರ್, ಪದ್ಮನಾಭನಗರದ ಜೆಡಿಎಸ್ ಅಧಿಪತಿ ಕಬಡ್ಡಿ ಬಾಬು ಮುಂತಾದವರೆಲ್ಲ ಬೆವರು ಹರಿಸಿದರಷ್ಟೇ ಅಕಬರ್ ಗೆಲ್ಲಲು ಸಾಧ್ಯ. ಇದರ ಹೊರತಾಗಿಯೂ ಇಲ್ಲಿ ಜೆಡಿಎಸ್‌ಗೆ ಅವಕಾಶವೆಂದಿದ್ದರೆ ಅದು ಆಲಿ ಹತ್ಯೆಯ ಅನುಕಂಪ. ಜೀವ ಮಾನವಿಡಿ ಗಳಿಸಿ ದ್ದನ್ನೆಲ್ಲ ಸುರಿದು ಆಲಿ ಕೌನ್ಸಿಲರ್ ಆಗಿದ್ದ. ಆಲಿ ಹತ್ಯೆಯ ಅನುಕಂಪವೇನಾದರೂ ಫಲಗೂಡಿದ್ದೇ ಆದ, ಪಕ್ಷದಲ್ಲಿ ಬಿಜೆಪಿಯ ಬಸವರಾಜು. ಆಸೆ ಮಣ್ಣುಗೂಡಿದ ಹಾಗೆಯೇ.


ಮಾಹಿನ್

ಎಷ್ಟು ಕೋಟಿ ಸುರಿದಾದರೂ ಕೌನ್ಸಿಲರ್ ಆಗಲೇಬೇಕೆಂದು ಹಠಕ್ಕೆ ಬಿದ್ದ ಬಸವರಾಜು ಗೆಲ್ಲಲೇಬೇಕೆಂದರೆ ಅದಕ್ಕೆ ಕಾಂಗ್ರೆಸ್ ಕೈಜೋಡಿಸಬೇಕು. ಕಾಂಗ್ರೆಸ್ ಏನಾದರೂ ಇಲ್ಲಿ ಹಿಂದೂ ಅಭ್ಯರ್ಥಿಯನ್ನು ನಿಲ್ಲಿಸಿತೆಂದರೆ ಬಸವರಾಜು ಗೆಲ್ಲುವುದು ಕಷ್ಟ. ಆಲಿ ತಮ್ಮನ ಪರ ಸಾರಾಸಗಟಾಗಿ ಮುಸ್ಲಿಂ ಓಟುಗಳು ಬೀಳುವುದರಿಂದ ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯನ್ನು ಹಾಕಿದರಷ್ಟೇ ಅಲ್ಪಸಂಖ್ಯಾತರ ಓಟುಗಳು ಒಡೆದು ಬಸವರಾಜು ಗೆಲ್ಲಲು ಸಾಧ್ಯ.


ಸದ್ಯ ಬನಶಂಕರಿ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಲು ಇನ್ನಿಲ್ಲದಂತೆ ಒತ್ತಡ ಹಾಕುತ್ತಿರುವ ಇ.ಎಸ್. ಮಣಿ ಹಿಂದೊಮ್ಮೆ ಇದೇ ವಾರ್ಡಿಗೆ ಕೌನ್ಸಿಲರ್ ಆಗಿದ್ದ, ಸ್ಲಂ ರಮೇಶ್ ಶಿಷ್ಯ. ಈತನಿಗೆ ಟಿಕೆಟ್ ಕೊಡಿಸಲು ರಾಮಲಿಂಗಾರೆಡ್ಡಿ ಕೂಡ ಮುತುವರ್ಜಿ ವಹಿಸಿದ್ದಾರೆ. ಆದರೆ ಬಿಜೆಪಿಯ ಬಸವರಾಜು ಗೆಲ್ಲಬೇಕೆಂದರೆ ಒಂದೋ ಅಯ್ಯೂಬ್ ನಿಲ್ಲಬೇಕು ಅಥವಾ ಅನ್ಸರ್, ಬೊಮ್ಮನ್ ಬಾಬು ಯಾರಾದರೂ ಕಾಂಗ್ರೆಸ್ಸಿನಿಂದ ಸ್ಪರ್ಧಿಸಬೇಕು. ಅದಕ್ಕೆಂದು ಕಾಂಗ್ರೆಸ್ ನಾಯಕ ಗುರಪ್ಪನಾಯ್ಡುವನ್ನೇ ಬುಟ್ಟಿಗೆ ಹಾಕಿಕೊಂಡರೆ?

ಬಿಜೆಪಿ ಮೂಲಗಳೇ ಹೇಳುವಂತೆ ಲೋಕಲ್ ಕಾಂಗ್ರೆಸ್ ನಾಯಕ ಗುರಪ್ಪನಾಯ್ಡುಗೆ ಮುಸ್ಲಿಂ ಅಭ್ಯರ್ಥಿಯನ್ನೇ ಹಾಕುವಂತೆ ಬಸವರಾಜು 25 ಲಕ್ಷದ ಡೀಲು ಕುದುರಿಸಿದ್ದಾನೆ. ಮೊದಲ ಕಂತಾಗಿ 15 ಲಕ್ಷವನ್ನು ಕೊಟ್ಟಾಗಿದೆ. ಉಳಿಕೆ 10 ಲಕ್ಷವನ್ನು 'ಬಿ' ಫಾರ್ಮ ಗ್ಯಾರಂಟಿಯಾದ ಮೇಲೆ ಕೊಡುತ್ತಾನಂತೆ. ಮಣಿಯನ್ನು ತುಳಿದು ಅಯ್ಯೂಬ್‌ಗೋ, ಅನ್ಸರ್ ಅಥವಾ ಬೊಮ್ಮನ್ ಬಾಬುಗೋ ಕಾಂಗ್ರೆಸ್ ಟಿಕೆಟ್ ಕಲ್ಪಿಸಿತೆಂದರೆ ಮುಸ್ಲಿಂ ಓಟು ಹಂಚಿಹೋಗಿ ಸಲೀಸಾಗಿ ಬಿಜೆಪಿ ಗೆದ್ದುಬಿಡುತ್ತದೆ.

ಹಾಗೊಮ್ಮೆ ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯನ್ನು ಹಾಕಿದ್ದೇ ಆದಲ್ಲಿ ಹತ ಆಲಿಯ ಆತ್ಮ ಅದೆಷ್ಟು ನರಳುತ್ತೋ. ಆಲಿಯ ತಮ್ಮ ಗೆಲ್ಲದ ಹಾಗೆ ಪಾತಕಿ ಮಾಹಿನ್ ಕೂಡ ಬಿಜೆಪಿ ಜೊತೆ ಕೈಜೋಡಿಸಿದ್ದಾನಂತೆ. ಒಂದೆಡೆ ಮುಸ್ಲಿಂ ಹಂತಕರ ಗ್ಯಾಂಗ್ ಮತ್ತೊಂದೆಡೆ ಕಾಂಗ್ರೆಸ್ ಮನೆ ಮುರುಕರ ಕೂಟ. ಇನ್ನೊಂದೆಡೆ ಬಿಜೆಪಿ ಬಕಾಸುರರ ರೊಕ್ಕ. ಈ ಮೂರೂ ಶಕ್ತಿಗಳು ಒಂದೇ ತಟ್ಟೆಯಲ್ಲಿ ಕೂತು ಉಣ್ಣಲು ಯತ್ನಿಸುತ್ತಿವೆ.

ಲೋಕಲ್ ಕಾಂಗ್ರೆಸ್ ಕ್ರಿಮಿ ಗುರಪ್ಪ ನಾಯ್ಡು ಹುಟ್ಟು ಪಕ್ಷ ಘಾತುಕ ನಿಜ. ಆದರೆ ರಾಮಲಿಂಗಾರೆಡ್ಡಿಗಾದರೂ ವಿವೇಕ ಬೇಡವ? ಬಿಜೆಪಿ ಗೆಲ್ಲಿಸಲು ಕಾಂಗ್ರೆಸ್ ಕಾರಣವಾದದ್ದು ಕೇವಲ ಚನ್ನಪಟ್ಟಣಕ್ಕಷ್ಟೇ ಅಲ್ಲ ಬಿಬಿಎಂಪಿಗೂ ರೋಗ ಅಂಟಿರುವಂತಿದೆ.

• ರಾ.ಸೋ.



ಸ್ಪೆಷಲ್ ಡೀಸಿ ರಾಮಾಂಜನೇಯನ ಭೂಡಕಾಯಿತಿಯಲ್ಲಿ ಮಂತ್ರಿಗಳು ಸಾವಿರ ಎಕರೆ ಸ್ವಾಹಾ



ಬಿಜೆಪಿ ಸರ್ಕಾರದ ಮತ್ತೊಂದು ಕರ್ಮಕಾಂಡ

ಒಂದಲ್ಲ ಎರಡಲ್ಲ ಸಾವಿರ ಎಕರೆಗಳಷ್ಟು ಸರ್ಕಾರಿ ಸೊತ್ತನ್ನು ನುಂಗಿಹಾಕಿದ ಬಿಜೆಪಿ ಸರ್ಕಾರದ ಇದೊಂದೇ ದುರಾಚಾರವನ್ನು ಸಿಬಿಐ ತನಿಖೆಗೆ ಏಕೆ ಒಪ್ಪಿಸುತ್ತಿಲ್ಲ? ಈ ಬಗ್ಗೆ ವಿರೋಧ ಪಕ್ಷಗಳು ಏಕೆ ಇನ್ನೂ ಮಾತಾಡುತ್ತಿಲ್ಲ. ಬಿಜೆಪಿ ಸರ್ಕಾರಕ್ಕೆ ನಿಜಕ್ಕೂ ಸರ್ಕಾರಿ ಜಮೀನುಗಳ ರಕ್ಷಣೆಯ ಕಾಳಜಿಯಿದ್ದರೆ ಈ ಕೂಡಲೇ ಅಷ್ಟೂ ಭೂಕಬಳಿಕೆ ಹಗರಣವನ್ನು ಸಿಬಿಐ ತನಿಖೆಗೊಪ್ಪಿಸಬೇಕು.

ಒಂದಲ್ಲ ಎರಡಲ್ಲ ಅದು 1500 ಕೋಟಿ ರೂಪಾಯಿ ಮೊತ್ತದ ಭೂಕಬಳಿಕೆ!

ತನ್ಮೂಲಕ ಸರ್ಕಾರದ ಕೈತಪ್ಪಿದ ಒಟ್ಟು ಭೂಮಿಯ ಒಂದು ಸಾವಿರದ ನಲವತ್ತೊಂದು ಎಕರೆಗಳು!

ಸದ್ಯ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದು ಜೈಲನ್ನೂ ಕಂಡು ಆಸ್ಪತ್ರೆ ಸೇರಿಕೊಂಡ ಗಾಯ ನೆಕ್ಕುತ್ತಿರುವ ಬೆಂಗಳೂರು ನಗರ ಜಿಲ್ಲೆಯ ಗತ ಸ್ಪೆಷಲ್ ಡೀಸಿ ರಾಮಾಂಜನೇಯ ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಗೈದ ಸಾಧನೆಯಿದು. ಸರ್ಕಾರಿ ಜಮೀನುಗಳ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂ ಮತ್ತು ಲೋಕಾಯುಕ್ತ ಜಂಟಿಯಾಗೇ ದೋಚಿದ ಭೂಮಿಯ ಮರುಸ್ವಾಧೀನಕ್ಕೆ ಹೆಣಗುತ್ತಿವೆ. ದೋಚಿರುವುದು ಸರ್ಕಾರಿ ಜಮೀನು. ಅದೂ ಬೆಂಗಳೂರಿನ ಸುತ್ತಮುತ್ತಲ ಸಾವಿರ ಕೋಟಿ ಬೆಲೆಬಾಳುವ ಭೂಮಿ, ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿ ಆದ ಮೇಲೆ ಬೆಂಗಳೂರು ನಗರ ಜಿಲ್ಲೆಗೆ ವಿಶೇಷ ಜಿಲ್ಲಾಧಿಕಾರಿಯನ್ನಾಗಿ ಎಚ್. ರಾಮಾಂಜನೇಯ ಎಂಬ ಆಂಧ್ರಮೂಲದ ಅಧಿಕಾರಿಯನ್ನು ತಂದರಲ್ಲ; ಕೇವಲ ಒಂದೂವರೆ ವರ್ಷದಲ್ಲಿ ಈ ಪ್ರಳಯಾಂತಕ ದೋಚಿರುವುದು ಕೇವಲ ಸಾವಿರಕ್ಕೂ ಅಧಿಕ ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು!



ಬಸಪ್ಪ

ಲೋಕಾಯುಕ್ತಕ್ಕೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಜೈಲುಪಾಲಾದ ರಾಮಾಂಜನೇಯರನ್ನು ಇಂಥ ಸೂಕ್ಷ್ಮ ಹುದ್ದೆಗೆ ತಂದದ್ದು ಬಿಜೆಪಿ ರಾಷ್ಟ್ರನಾಯಕ ವೆಂಕಯ್ಯನಾಯ್ಡು. ಇದಕ್ಕೆಂದು ಇನ್ನಿಲ್ಲದಂತೆ ಲಾಬಿ ಮಾಡಿದ್ದು ಮತ್ತೊಬ್ಬ ಭೂಕಂಟಕ ಕಟ್ಟಾನಾಯ್ಡು. ಹಾಗಂತ ಯಡ್ಡಿಯೇನೂ ಸುಮ್ಮನೇ ಹುದ್ದೆ ಕೊಡಲಿಲ್ಲ, ಮಗ ವಿಜಯೇಂದ್ರನನ್ನು ಕುಮಾರಕೃಪಾ ಗೆಸ್ಟ್‌ಹೌಸಿನಲ್ಲಿ ಕಂಡು ಅಡ್ವಾನ್ಸ್ ಇಷ್ಟು ಕೋಟಿ ಮಂತ್ಲಿ ಇಷ್ಟು ಕೋಟಿ ಎಂದು ರಾಮಾಂಜನೇಯ ಡೀಲು ಕುದುರಿಸಿದ ನಂತರವೇ ಬೆಂಗಳೂರಿನ ಸ್ಪೆಷಲ್ ಡಿಸಿ ಗಾದಿಗೆ ತಂದದ್ದು.

ಪಾಪ; ರಾಮಾಂಜನೇಯ ತಾನೇ ಏನು ಮಾಡಿಯಾನು? ಒಂದೆಡೆ ವೆಂಕಯ್ಯ ನಾಯ್ಡುವನ್ನು ಸಂಭಾಳಿಸಬೇಕು, ಮತ್ತೊಂದೆಡೆ ಕಟ್ಟಾನಾಯ್ಡುವನ್ನು ಸರಿತೂಗಬೇಕು, ಇವೆಲ್ಲಕ್ಕೂ ಮಿಗಿಲಾಗಿ ಮುಖ್ಯಮಂತ್ರಿ ಕಚೇರಿಯ ಭೂದಾಹವನ್ನು ತಣಿಸಬೇಕು, ಯಡ್ಡಿ ಮಗ ವಿಜಯೇಂದ್ರನ ಪಾಲನ್ನು ಪ್ರತಿ ತಿಂಗಳೂ ತಪ್ಪದೇ ಎತ್ತಿಡಬೇಕು. ಇಷ್ಟಲ್ಲದೇ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯಿಂದ ಹಿಡಿದು ಆರ್. ಅಶೋಕ್, ಶೋಭಾ ಕರಂದ್ಲಾಜೆ, ಮುರುಗೇಶ್ ನಿರಾಣಿ, ಸೋಮಣ್ಣ ಕೃಷ್ಣಯ್ಯ ಶೆಟ್ಟಿ ಆದಿಯಾಗಿ ರಕ್ಷಣಾ ವೇದಿಕೆಯ ದೊಣ್ಣೆ ನಾಯಕರ ತನಕ ನಾನಾ ಹಿತಾಸಕ್ತಿಗಳ ಭೂದಾಹವನ್ನು ತಣಿಸಬೇಕು. ಈ ಮಧ್ಯೆ ಸಿಎಂ ಕಚೇರಿಗೆ ವಾರಕ್ಕೊಮ್ಮೆ ಕಮ್ಮಿಯೆಂದರೂ ಒಂದು ಕೋಟಿ ಕಳಿಸಬೇಕು. ಆರೆಸ್ಸೆಸ್ ನಾಯಕರ ತರಹೇವಾರಿ ಯೋಜನೆಗಳಿಗೂ ಭೂಮಿ ಲೂಟಿಯಾಗಬೇಕು. ಪಾಪ; ಭಾರ ಹೊರಲಾರದೇ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದ ಸ್ಪೆಷಲ್ ಡೀಸಿ ರಾಮಾಂಜನೇಯ ಜೈಲು ಪಾಲಾದರೆ ಕೇಳಲು ಯಾವೊಬ್ಬ ನಾಯಕನೂ ದಿಕ್ಕಿಲ್ಲ.

2008 ಜುಲೈ 8 ರಂದು ಬೆಂಗಳೂರು ನಗರ ಸ್ಪೆಷಲ್ ಡೀಸಿಯಾಗಿ ಬಂದ ರಾಮಾಂಜನೇಯ 2010 ರ ನವೆಂಬರ್ 29 ರ ವರೆಗೂ ನಡೆಸಿದ ಭೂಲೂಟಿಯಲ್ಲಿ ಮುಖ್ಯಮಂತ್ರಿಯೇ ಪ್ರಮುಖ ಪಾಲುದಾರ.



ರಾಮೇಗೌಡ

ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿ, ಕೆರೆ, ಗೋಮಾಳ ಗುಂಡುತೋಪು, ಸ್ಮಶಾನದ ಭೂಮಿ, ರಾಜಾಕಾಲುವೆ, ತಿಪ್ಪಗೊಂಡನಹಳ್ಳಿ, ಕೆರೆಯ ಜಲಾನಯನ ಪ್ರದೇಶ, ಅರಣ್ಯಭೂಮಿ ಸೇರಿದಂತೆ ಲೂಟಿಗೋರ 1041 ಎಕರೆಗಳ ಲೆಕ್ಕ ಪತ್ತೆಹಚ್ಚಿದ್ದು ಸರ್ಕಾರಿ ಜಮೀನುಗಳ ನಿಗಮದ ಮುಖ್ಯಸ್ಥ ವಿ. ಬಾಲಸುಬ್ರಮಣಿಯನ್.

ಯಾವುದೇ ಸರ್ಕಾರಿ ಭೂಮಿ ಒತ್ತುವರಿಯಾಗಿದ್ದು ಗಮನಕ್ಕೆ ಬಂದದ್ದೆ ಸ್ಪೆಷಲ್ ಡೀಸಿ ಈ ಬಗ್ಗೆ ತನಿಖೆ ನಡೆಸಬೇಕು. ರಾಮಾಂಜನೇಯ ಅಧಿಕಾರ ವಹಿಸಿಕೊಂಡ ಹೊಸದರಲ್ಲಿ ಇಂಥ ಆರುನೂರಕ್ಕೂ ಅಧಿಕ ಪ್ರಕರಣಗಳ ವಿಚಾರಣೆ ಬಾಕಿಯಿತ್ತು. ಕಟ್ಟಾ ಮಗ ಜಗದೀಶ್ ಚಿಕ್ಕನಾಗಮಂಗಲದ ಕೆರೆ ಕಬಳಿಸಿ ದೋಚಿದ್ದ 58 ಎಕರೆ, ಪಕ್ಕದಲ್ಲೇ ಅರಣ್ಯ ಭೂಮಿಯನ್ನು ಆಕ್ರಮಿಸಿ ಮಂತ್ರಿ ಕಟ್ಟಾನಾಯ್ಡು ಶುರುವಿಟ್ಟಿದ್ದ ನೂರೈವತ್ತು ಎಕರೆಯ ಖಾಸಗಿ ಲೇಔಟ್ ಚಿಕ್ಕಜಾಲ ಹೋಬಳಿಯಲ್ಲಿ ಯಲಹಂಕ ಶಾಸಕ ವಿಶ್ವನಾಥ್ ದೋಚಿದ್ದ 53 ಎಕರೆ ಗೋಮಾಳದ ಭೂಮಿ, ನಂದೀಶ್ ರೆಡ್ಡಿ ಕೆ.ಆರ್. ಪುರದಲ್ಲಿ ಆಕ್ರಮಿಸಿದ 29 ಎಕರೆ ಸರ್ಕಾರಿ ಭೂಮಿ, ಮಂತ್ರಿ ಅಶೋಕ್ ಮತ್ತು ದಾಸರಹಳ್ಳಿ ಶಾಸಕ ಮುನಿರಾಜು ಸೇರಿಕೊಂಡು ನಾರಸಂದ್ರದಲ್ಲಿ ಕಬಳಿಸಿದ್ದ ನಾಲ್ಕೆಕರೆ, ಶೋಭಾ ಕರಂದ್ಲಾಜೆ ಬೇನಾಮಿಯಾಗಿ ದೊಡ್ಡಬಿದರಕಲ್ಲು ಬಳಿ ಕೈಹಾಕಿದ್ದ 38 ಎಕರೆ ಗೋಮಾಳ, ಮಂತ್ರಿ ಸೋಮಣ್ಣನ ಮಗ ಅರುಣ್ ಸೋಮಣ್ಣ ದೊಡ್ಡಬಳ್ಳಾಪುರದ ಅದ್ದೆ ವಿಶ್ವನಾಥಪುರದಲ್ಲಿ ಆಕ್ರಮಿಸಿಕೊಂಡಿದ್ದ 80 ಎಕರೆ, ಕೃಷ್ಣಯ್ಯ ಶೆಟ್ಟಿ ಜಾಲ ಸಮೀಪದ ನುಂಗಿ ಹಾಕಿದ್ದ 23 ಎಕರೆ, ಅರವಿಂದ ಲಿಂಬಾವಳಿ ಹೆಸರಘಟ್ಟದ ಬಳಿ ಒತ್ತುವರಿ ಮಾಡಿದ್ದ 65 ಎಕರೆ, ಯಡ್ಡಿಯ ಬೀಗಿತಿ ವಿನೋದಾ ನಟರಾಜ್ ಮೈಸೂರು ರಸ್ತೆಯಲ್ಲಿ ಖರೀದಿಸಿದ್ದ 43 ಎಕರೆ ವೆಂಕಯ್ಯ ನಾಯ್ಡು ಸಂಬಂಧಿಯೊಬ್ಬ ಬಾಗಲೂರು ಸಮೀಪ ನಕಲಿ ದಾಖಲೆ ಸೃಷ್ಟಿಸಿ ನುಂಗಿದ್ದ 58 ಎಕರೆ, ಬಳಿ ಶಿವಾಲೆ ಬಳಿ ಕರುಣಾಕರ ರೆಡ್ಡಿ ಬೇನಾಮಿಯಾಗಿ ಕಬಳಿಸಿದ್ದ 136 ಎಕರೆ; ಇತ್ಯಾದಿ ಬಿಜೆಪಿ ಸರ್ಕಾರದ ಅತಿರಥ ಮಹಾರಥರೆಲ್ಲರೂ ಸ್ಪೆಷಲ್ ಡೀಸಿ ರಾಮಾಂಜನೇಯನ ಬೆನ್ನಿಗೆ ಬಿದ್ದು ತಂತಮ್ಮ ಭೂಕಬಳಿಕೆಯನ್ನು ಕಾನೂನುಬದ್ಧಗೊಳಿಸಿಕೊಳ್ಳಬೇಕಿತ್ತು.




ಶಿವಕುಮಾರ್


ವಿಚಾರಣೆ ಬಾಕಿಯಿದ್ದ 600 ಕ್ಕೂ ಅಧಿಕ ಸರ್ಕಾರಿ

ಹಿಂದೂ ಪರಿಷತ್ ಭೂಕಬಳಿಕೆ ಮತ್ತು ಬಾಲಸುಬ್ರಹ್ಮಣ್ಯಂ ಜಾಣ ನಿದ್ದೆ

ಚಿನ್ನಪ್ಪನಹಳ್ಳಿಯ ಸರ್ಕಾರಿ ಸೊತ್ತಿನಲ್ಲಿ ಕಾಮಗಾರಿ



ಸಾರ್ವಜನಿಕ ಜಮೀನುಗಳ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂ ಏನೇ ಸಾಚಾ ಅಂದರೂ ಸರ್ಕಾರಿ ಸೊತ್ತಿನ ರಕ್ಷಣೆಯ ವಿಷಯದಲ್ಲಿ ಅವರ ನಡೆ ನಿಗೂಢವೆ. ಇದಕ್ಕೊಂದು ಪಕ್ಕಾ ಉದಾಹರಣೆ ಅಂತಿದ್ದರೆ ಅದು ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್. ಪುರ ಹೋಬಳಿಯ ಚಿನ್ನಪ್ಪನಹಳ್ಳಿಯ 21.35 ಎಕರೆ ಸರ್ಕಾರಿ ಭೂಮಿ. ಕಮ್ಮಿಯೆಂದರೂ ಅದು 125 ಕೋಟಿಯ ಸೊತ್ತು, ಹಿಂದೆ ಬೆಂಗಳೂರು ನಗರಕ್ಕೆ ವಿಶೇಷ ಜಿಲ್ಲಾಧಿಕಾರಿಯಾಗಿದ್ದ ರಾಮೇಗೌಡರು ಈ ಬಗ್ಗೆ ವಿಶೇಷ ತನಿಖೆ ನಡೆಸಿ ಇದನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಬೆಂಗಳೂರು ಪೂರ್ವ ತಹಶೀಲ್ದಾರ್‌ಗೆ ಆದೇಶವಿತ್ತಿದ್ದರು.



ಹೀರಾನಾಯಕ

ಆ ಪ್ರಕಾರ ತಹಶೀಲ್ದಾರ್, ಜಿಲ್ಲಾಧಿಕಾರಿ ಸೇರಿ ಚಿನ್ನಪ್ಪನಹಳ್ಳಿಯ ಸನಂ. 20 ರಲ್ಲಿರುವ 21.35 ಎಕರೆ ಸರ್ಕಾರಿ ಜಮೀನನ್ನು ನಿರ್ದಾಕ್ಷಿಣ್ಯವಾಗಿ ವಶಪಡಿಸಿಕೊಳ್ಳಬೇಕಿತ್ತು, ಆದರೆ ಈ ಸೊತ್ತಿಗೆ ವಕ್ಕರಿಸಿದ್ದ ವಿಜಯ್‌ಕುಮಾರ್ ರೆಡ್ಡಿ ಸದ್ಯ ವಿಶ್ವಹಿಂದೂ ಪರಿಷತ್ತಿನ ಬೆಂಗಳೂರು ನಗರಾಧ್ಯಕ್ಷ. ಈತನ ತಂದೆ ಎಚ್. ತಿಪ್ಪಾರೆಡ್ಡಿ ವಿಶ್ವಹಿಂದೂ ಪರಿಷತ್ ನಾಯಕ ಅಶೋಕ್ ಸಿಂಘಾಲನ ಶಿಷ್ಯ. ಸಿಂಘಾಲ್ ಬೆಂಗಳೂರಿಗೆ ಬಂದಾಗೆಲ್ಲ ಉಳಕೊಳ್ಳುವುದು ಈತನ ಮನೆಯಲ್ಲೆ. ಸಿಂಘಾಲ್ ಮೂಲಕ ಬಿಜೆಪಿ ದೊರೆಗಳ ಮೇಲೆ ದಬಾವು ಮಾಡಿದ ತಿಪ್ಪಾರೆಡ್ಡಿ ಸಾರ್ವಜನಿಕ ಜಮೀನುಗಳ ನಿಗಮದ ಮ್ಯಾನೇಜರ್ ಆರ್‌ಎಚ್ ಬಸಪ್ಪನನ್ನು ಬುಟ್ಟಿಗೆ ಹಾಕಿಕೊಂಡ. ಜೊತೆಗೆ ಆಗ ಬಿಬಿಎಂಪಿಯ ಮಹದೇವಪುರದ ಜಂಟಿ ಕಮಿಷನರ್ ಆಗಿದ್ದ ಹೀರಾನಾಯಕ್ ಬೆಂಗಳೂರು ಪೂರ್ವ ತಹಶೀಲ್ದಾರ್ ಶಿವಕುಮಾರ್ ಅಸಿಸ್ಟೆಂಟ್ ಕಮಿಷನರ್ ಕೃಷ್ಣನ್ ಸರ್ವೆ ಸೂಪರ್‌ವೈಸರ್ ರಫೀಕ್ ಅಹ್ಮದ್ ಮುಂತಾದವರನ್ನೆಲ್ಲ ಪಳಗಿಸಿಕೊಂಡ.

ಫಲವಾಗಿ ಹೈಕೋರ್ಟ್ ಮುಟ್ಟುಗೋಲಿಗೆ ತಡೆ ನೀಡಿ ಯಥಾಸ್ಥಿತಿಗೆ ಆದೇಶ ನೀಡಿತು. ಹೈಕೋರ್ಟ್ ತಡೆ ನೀಡಿ ವರ್ಷವೇ ಕಳೆದುಹೋಗಿದೆ. ಎಚ್.ಎ.ಎಲ್. ಏರ್‌ಪೋರ್ಟ್ ಹಿಂಭಾಗದಲ್ಲೇ ಇರುವ ಈ 21.35 ಎಕರೆ ಸೊತ್ತಿನ ಸದ್ಯದ ಮಾರುಕಟ್ಟೆ ರೇಟೇ 125 ಕೋಟಿಗೂ ಹೆಚ್ಚು ಇಂಥಾ ಸೊತ್ತು ದೋಚಲು ಎಷ್ಟು ಕೋಟಿ ಸುರಿದರೂ ವಿಶ್ವಹಿಂದೂ ಪರಿಷತ್ ಖದೀಮರಿಗೆ ತಾನೇ ಏನು ನಷ್ಟ?


ಹೈಕೋರ್ಟ್ ಕೊಟ್ಟ ತಡೆಯಾಜ್ಞೆಯನ್ನು ತೆರವುಗೊಳಿಸಬೇಕಿರುವುದು ಸಾರ್ವಜನಿಕ ಜಮೀನುಗಳ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂ. ಸರ್ಕಾರಿ ಸೊತ್ತನ್ನು ರಕ್ಷಿಸುವಂತೆ ಎಮ್ಮೆಲ್ಸಿ ನಾಡಗೌಡರೇ ವಿಧಾನಪರಿಷತ್ತಿನಲ್ಲಿ ಬೊಬ್ಬೆಯಿಟ್ಟರು. ಚಿನ್ನಪ್ಪನಹಳ್ಳಿಯ ನಾಗರಿಕರು ಮನವಿಗಳ ಮೇಲೆ ಮನವಿಕೊಟ್ಟು ಹೈರಾಣಾದರು. ಮುಖ್ಯಮಂತ್ರಿಯೇ ಈ ಬಗ್ಗೆ ಪರಿಷತ್ತಿಗೆ ಬಂದು ಜಮೀನಿನ ಸರ್ವೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆಂದು ಹೇಳಿಕೆ ಕೊಟ್ಟಾಗಲೂ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂಗೆ ಸರ್ವೆ ನಡೆಸಲು ಮೈ ಒಗ್ಗುತ್ತಿಲ್ಲ. ಮ್ಯಾನೇಜರ್ ಬಸಪ್ಪನಂತೂ ನೆಲಗಳ್ಳರ ಶನಿಶಂತತಿಯಂತೆ ತಿಪ್ಪಾರೆಡ್ಡಿ ಮತ್ತು ಮಗ ವಿಜಯ್‌ಕುಮಾರ್ ರೆಡ್ಡಿ ಜೊತೆ ಊಟಕ್ಕೆ ಕುಂತುಬಿಟ್ಟಿದ್ದಾನೆ. ಹೈಕೋರ್ಟ್ ಯಥಾಸ್ಥಿತಿ ಕಾಪಾಡುವಂತೆ ನೀಡಿದ ಆದೇಶವನ್ನು ಧಿಕ್ಕರಿಸಿದ ಹಿಂದೂ ಪರಿಷತ್ ಭೂಕಂಟಕರು ಇಡೀ ಸೊತ್ತಿಗೆ ಬುಲ್ಡೋಜರ್ ನುಗ್ಗಿಸಿದ್ದಾರೆ. ಕಾಮಗಾರಿ ಶುರುವಿಟ್ಟಿದ್ದಾರೆ. ಇದನ್ನೇ ಕೋರ್ಟ್ ಗಮನಕ್ಕೆ ತಂದರೂ ಸಾಕು, ಹೈಕೋರ್ಟ್ ನೆಲಗಳ್ಳರ ವಿರುದ್ಧ ಆದೇಶ ನೀಡುತ್ತದೆ. ಆದರೆ ಬಾಲಸುಬ್ರಹ್ಮಣ್ಯಂ ಮತ್ತು ಬಸಪ್ಪರಿಗೆ ಇದು ಬೇಕಿಲ್ಲ.

ರಾಮಾಂಜನೇಯನ ಕಾಲದ ಅಕ್ರಮಗಳ ಬಗ್ಗೆ ಸತ್ಯಹರಿಶ್ಚಂದ್ರನ ಅವತಾರ ತಾಳುವ ಸುಬ್ರಹ್ಮಣ್ಯಂ ಹಿಂದೂ ಪರಿಷತ್ ಖದೀಮರ ಭೂಡಕಾಯಿತಿ ಬಗ್ಗೆ ಏಕೆ ನಿಷ್ಕ್ರಿಯರಾಗುತ್ತಾರೆ? ಚಿನ್ನಪ್ಪನ ಹಳ್ಳಿಯ ಸೊತ್ತಿನ ರಕ್ಷಣೆಗೆ ಹೈಕೋರ್ಟ್ ತಡೆಯಾಜ್ಞೆ ತೆರವುಗೊಳಿಸಲು ಈತನಕ ಏಕೆ ಮೌನವಾಗಿದ್ದಾರೆ? ಬಿಜೆಪಿಗಳು ಕದ್ದರೆ ಅದು ಕಳುವಲ್ಲವೇ? ಬೇರೆಯವರ ನೆಲಕಬಳಿಕೆಯೊಂದೇ ಅವರಿಗೆ ಮುಖ್ಯವೆ?

ಭೂಕಬಳಿಕೆಯ ಪೈಕಿ ರಾಮಾಂಜನೇಯ ಆದೇಶ ನೀಡಿದ್ದು 428 ಪ್ರಕರಣಗಳಾದರೂ ಇದಕ್ಕೂ ಮುನ್ನ ಸ್ಪೆಷಲ್ ಡೀಸಿಯಾಗಿದ್ದ ರಾಮೇಗೌಡನ ಕಾಲದಲ್ಲಿ ಇಷ್ಟೇ ಮೊತ್ತದ ಸರ್ಕಾರಿ ಭೂಮಿಯನ್ನು ಪರಭಾರೆ ಮಾಡಲಾಗಿತ್ತು. ರಾಮೇಗೌಡ ರಾಮಾಂಜನೇಯನಿಗಿಂತಲೂ ನಿಸ್ಸೀಮ. ಸದ್ಯ ಗೃಹಮಂತ್ರಿ ಅಶೋಕ್‌ಗೆ ಆಪ್ತ ಕಾರ್ಯದರ್ಶಿಯಾಗಿರುವ ರಾಮೇಗೌಡರು ದೇವೇಗೌಡರ ಕುಟುಂಬಕ್ಕೂ ಪರಮಾಪ್ತ. ಅದಕ್ಕೂ ಮುನ್ನ ದೇವೇಗೌಡ ಕಡುವೈರಿ ಶ್ರೀಕಂಠಯ್ಯನವರಿಗೂ ಪಿಎ ಆಗಿದ್ದ ಈಗ ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ಆದಿಚುಂಚನಗಿರಿ ಮಠದ ಪ್ರಭಾವಿ ಶೇಖರ್‌ಸ್ವಾಮಿ ಉರ್ಫ್ ಪ್ರಕಾಶನಾಥ ಸ್ವಾಮಿಯ ಶಿಫಾರಸ್ಸು ತಂದು ಅಶೋಕ್ ಅಂತರಂಗದಲ್ಲಿ ಸ್ಥಾಪಿತನಾದ.

ಮೊದಲೇ ರಾಮೇಗೌಡ ಖಾಲಿ ಮಾಡಿಹೋಗಿದ್ದ ಸರ್ಕಾರಿ ಭೂನಿಧಿಯನ್ನು ಇನ್ನಿಲ್ಲದಂತೆ ದೋಚಿದ್ದು ರಾಮಾಂಜನೇಯ. ಸ್ಪೆಷಲ್ ಡೀಸಿಯೇ ಲೂಟಿಗೆ ನಿಂತನೆಂದರೆ ಆತನ ಕೈಕೆಳಗಿನ ಅಷ್ಟೂ ಕಂದಾಯ ಸಿಬ್ಬಂದಿ ಅಕ್ಷರಶಃ ಡಕಾಯಿತರಾಗುತ್ತಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಾಗಿದ್ದೂ ಇದೇ. ಟಿ. ವೆಂಕಟೇಶ್ ಎಂಬ ಅಸಿಸ್ಟೆಂಟ್ ಕಮಿಷನರ್ ಬೆಂಗಳೂರು ದಕ್ಷಿಣ ತಾಲ್ಲೂಕು ಕಂಬಿಪುರದ ಸ.ನಂ. 86 ರಲ್ಲಿದ್ದ 35 ಎಕರೆ ಸರ್ಕಾರಿ ಭೂಮಿಯನ್ನು ತನಿಖೆಯಿಂದ ಕೈಬಿಟ್ಟು ಮಂತ್ರಿ ಅಶೋಕ್ ಶಿಷ್ಯನೊಬ್ಬನ ಜೊತೆ ಕೈಜೋಡಿಸಿದ. ವೆಂಕಯ್ಯ ನಾಯ್ಡುವಿನ ಬೇನಾಮಿ ಎಂದೇ ಖ್ಯಾತಿಯಲ್ಲಿರುವ ಸಿ. ರಂಗರಾವ್ ಎಂಬಾತ ಭೀಮನಕುಪ್ಪೆ ಸ.ನಂ. 173 ರಲ್ಲಿ 35 ಎಕರೆಗೆ ನಕಲಿ ದಾಖಲೆ ಸೃಷ್ಟಿಸಿದ. ಇದು ಸಾಲದೆಂಬಂತೆ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ಕೂಡ್ಲು ಗ್ರಾಮದ ಸ.ನಂ. 148 ರಲ್ಲಿ ಮತ್ತೆ 35 ಎಕರೆ ಸರ್ಕಾರಿ ಭೂಮಿಗೆ ಕೈಯಿಟ್ಟಿದ್ದ. ಭೀಮನಕುಪ್ಪೆ, ಸರ್ಜಾಪುರದ ಒಟ್ಟು 70 ಎಕರೆ ಸರ್ಕಾರಿ ಸೊತ್ತು ಸ್ಪೆಷಲ್ ಡೀಸಿ ರಾಮಾಂಜುನೆಯನ ದ್ರೋಹದ ಫಲವಾಗಿ ವೆಂಕಯ್ಯ ನಾಯ್ಡು ಬೇನಾಮಿಯ ಪಾಲಾಯಿತು.

ಇದಕ್ಕೂ ಮುನ್ನ ಚಿಕ್ಕಜಾಲ ಹೋಬಳಿಯ ಅಷ್ಟೂ ಕಂದಾಯ ದಾಖಲೆಗಳನ್ನೇ ಪುಟ್ಟಹನುಮಯ್ಯ ಅಲಿಯಾಸ್ ಪ್ರವೀಣ ಎಂಬ ರೆವಿನ್ಯೂ ಇನ್ಸ್‌ಪೆಕ್ಟರ್ ಓರ್ವ ಸುಟ್ಟು ಹಾಕಿದ್ದ. ತೋರಿಕೆಗೆ ಯಾವುದೋ ಆಕಸ್ಮಿಕದಲ್ಲಿ ಭೂದಾಖಲೆಗಳು ಸುಟ್ಟು ಹೋದಂತೆ ಕತೆ ಕಟ್ಟಲಾಯಿತಾದರೂ ವಾಸ್ತವದಲ್ಲದು ಭೂಕಬಳಿಕೆಗೆಂದೇ ಸೃಷ್ಟಿಸಿದ ಕಟ್ಟುಕತೆಯಾಗಿತ್ತು. ಈ ರೀತಿ ಸರ್ಕಾರಿ ದಾಖಲಾತಿಗೇ ಬೆಂಕಿಯಿಟ್ಟು ಈತನಕ ದೋಚಿದ ಸರ್ಕಾರಿ ಸೊತ್ತಿನ ಒಟ್ಟು ಮೊತ್ತ ಕಮ್ಮಿಯೆಂದರೂ 5 ಸಾವಿರ ಕೋಟಿ ರೂಪಾಯಿಗಳು!


ಲಿಂಗೇಗೌಡ

ಈ ಪೈಕಿ ಅಳಿದುಳಿದ ಸರ್ಕಾರಿ ಭೂಮಿಯನ್ನೂ ರಾಮಾಂಜನೇಯ ನಿವಾಳಿಸಿಬಿಟ್ಟ. ದಕ್ಷಿಣ ತಾಲ್ಲೂಕು ಕಚೇರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಆಗಿದ್ದ ಮಾದೇವಯ್ಯ ಈ ರೀತಿ ನಕಲಿ ದಾಖಲೆ ಸೃಷ್ಟಿಸಿಕೊಟ್ಟೇ 10 ಕೋಟಿ ಒಡೆಯನಾದ. ರೆವಿನ್ಯೂ ಇನ್ಸ್‌ಪೆಕ್ಟರ್ ಇ.ಎಕ್ಸ್. ಲಕ್ಷ್ಮಣ ಎಂಬಾತ ಸರ್ಕಾರಿ ಭೂಮಿ ಕಬಳಿಸಿಯೇ ಯಾವ ಮಟ್ಟಕ್ಕೆ ಬೆಳೆದನೆಂದರೆ ಇನ್ನೆಲ್ಲಿ ಲೋಕಾಯುಕ್ತ ರೇಡಾಗಿ ತನ್ನ ಆಸ್ತಿ ಮುಟ್ಟುಗೋಲಾಗುತ್ತೊ ಎಂದು ಸಕಲೇಶಪುರದಲ್ಲಿ ಬಿಜೆಪಿಯಿಂದ ಜಿಲ್ಲಾ ಪಂಚಾಯ್ತಿಗೆ ಗೆದ್ದು ರಾಜಕಾರಣಿಯಾದ. ಲಕ್ಷ್ಮಣ ಸಕಲೇಶಪುರದಲ್ಲೊಂದು ನರ್ಸಿಂಗ್ ಕಾಲೇಜನ್ನೂ ನಡೆಸುತ್ತಾನೆ. ಉತ್ತರಹಳ್ಳಿಗೆ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿದ್ದ ಶಿವನಂಜಯ್ಯ, ದಕ್ಷಿಣ ತಾಲ್ಲೂಕು ರೆಕಾರ್ಡ್ ಕೀಪರ್ ಆಗಿದ್ದ ಅಂಜನಪ್ಪ, ಸರ್ಕಾರಿ ದಾಖಲೆ ತಿದ್ದುವುದು, ಕದಿಯುವುದು ಮಾಡೇ ಕೋಟ್ಯಾಧಿಪತಿಗಳಾದರು. ಸ್ಪೆಷಲ್ ಡೀಸಿಯಾಗಿದ್ದ ರಾಮೇಗೌಡ ಒಬ್ಬನೇ ನೂರು ಕೋಟಿಯಷ್ಟು ಆಸ್ತಿ ಖಮಾಯಿಸಿದ. ಆಗ ಜಿಲ್ಲಾಧಿಕಾರಿಯಾಗಿದ್ದ ಸಾಧಿಕ್ ಅಹ್ಮದ್ ನೇರವಾಗೇ ರಿಯಲ್ ಎಸ್ಟೇಟ್ ದಂಧೆಗೆ ನಿಂತು ಉಪಕಾರ್ ಡೆವಲಪರ್ಸ್ ಸಾಮ್ರಾಜ್ಯಕ್ಕೆ ಅಧಿಪತಿಯಾದ.

ಕೆ.ಆರ್.ಪುರ ತಾಲ್ಲೂಕು ರೆಕಾರ್ಡ್ ಕೀಪರ್ ಆಗಿದ್ದ ಖಾಜಂಚ್ ಅದೆಷ್ಟು ಭೂದಾಖಲೆಗಳನ್ನು ಲಪಟಾಯಿಸಿದನೋ; ಕೇವಲ ಐದೇ ವರ್ಷದಲ್ಲಿ ಹತ್ತು ಕೋಟಿ ರೂಪಾಯಿ ದೋಚಿ ಅದನ್ನೆಲ್ಲ ಈಗ ಹೊರಮಾವು ಬಳಿ ರಿಯಲ್ ಎಸ್ಟೇಟ್ ದಂಧೆಗೆ ಸುರಿದಿದ್ದಾನೆ. ರೆಕಾರ್ಡ್ ಕೀಪರ್ ಅಂಜನಪ್ಪ ದೋಚಿದ ದುಡ್ಡಲ್ಲಿ ಯಾವ ಪರಿ ಸೋಕಿಗಿಳಿದನೆಂದರೆ ದಿನಕ್ಕೊಂದು ಲಾಡ್ಜು, ದಿನಕ್ಕೊಂದು ಕ್ರೈವ್‌ಬ್ಯಾಂಡ್‌ನಲ್ಲೇ ಅರ್ಧ ಖಮಾಯಿ ಸುರಿದಿದ್ದ. ಇಂಥ ಚತರ್‌ನಾಕ್ ರೆವಿನ್ಯೂ ಸಿಬ್ಬಂದಿಗಳ ಕರ್ತವ್ಯ ದ್ರೋಹದ ಫಲವಾಗಿ ಬೆಂಗಳೂರು ಸುತ್ತಮುತ್ತಲ ಸಾವಿರಾರು ಎಕರೆ ಸರ್ಕಾರಿ ಭೂಮಿಗೆ ನಕಲಿ ದಾಖಲೆಗಳು ಸೃಷ್ಟಿಯಾದವು. ಇಂಥ ನಕಲಿ ದಾಖಲೆಗಳ ಬಗ್ಗೆ ತನಿಖೆ ನಡೆಸಬೇಕಿದ್ದ ತಹಶೀಲ್ದಾರ್‌ಗಳೇ ನೆಲಗಳ್ಳರ ಜೊತೆಕೈಜೋಡಿಸಿಬಿಟ್ಟರು. ವ್ಯವಸ್ಥೆಯೇ ಹೀಗಿರುವಾಗ ಸ್ಪೆಷಲ್ ಡೀಸಿ ರಾಮಾಂಜನೇಯ ಅದರ ಲಾಭ ಪಡೆಯದೇ ಇರುತ್ತಾನಾ?

ಬಾಕಿಯಿದ್ದ 600 ಪ್ರಕರಣಗಳ ಪೈಕಿ 428 ಪ್ರಕರಣಗಳನ್ನು ಯಾವುದೇ ವಿಚಾರಣೆಯಿಲ್ಲದೆ 1041 ಎಕರೆಗಳಷ್ಟನ್ನು ರಾತ್ರೋರಾತ್ರಿ ಆಖೈರುಗೊಳಿಸಿದ. ಬೆಂಗಳೂರು ಉತ್ತರ ತಾಲ್ಲೂಕಿನ 18, ಬೆಂಗಳೂರು ದಕ್ಷಿಣದ 12, ಆನೇಕಲ್ ತಾಲ್ಲೂಕಿನ 28, ಬೆಂಗಳೂರು ಉತ್ತರ ಹೆಚ್ಚುವರಿ ತಾಲ್ಲೂಕಿನ 356, ಬೆಂಗಳೂರು ಪೂರ್ವ ತಾಲ್ಲೂಕಿನ 14 ಒಟ್ಟು 428 ಪ್ರಕರಣಗಳಲ್ಲಿ ರಾಮಾಂಜನೇಯ ನೆಲಗಳ್ಳರ ಪರವಾಗಿ ಆದೇಶ ಹೊರಡಿಸಿಬಿಟ್ಟ. ಇನ್ನಾರು ತಿಂಗಳು ಅದೇ ಹುದ್ದೆಯಲ್ಲಿದ್ದರೆ ಬಹುಶಃ ಇನ್ನೂ ಸಾವಿರ ಎಕರೆಗೆ ಗತಿ ಕಾಣಿಸುತ್ತಿದ್ದನೇನೊ. 2010 ರ ನವೆಂಬರ್ 29 ರಂದು ರೆಡ್‌ಹ್ಯಾಂಡಾಗಿ ಲೋಕಾಯುಕ್ತಕ್ಕೆ ಸಿಕ್ಕು ಜೈಲುಪಾಲಾದ. ಈಗ ಆ ಹುದ್ದೆಗೆ ಜೆ.ಎಸ್. ನಾಯಕ್ ಬಂದಿದ್ದಾನೆ.

ಶೋಕಿಲಾಲ ನಾಯಕ

ಈ ಜೆ.ಎಸ್. ನಾಯಕ್ ಹುಟ್ಟಾ ಶೋಕಿಲಾಲ. ರಾಮಾಂಜನೇಯನಷ್ಟೇ ಭ್ರಷ್ಟ. ಒಂದೆಡೆ ರಾಮಾಂಜನೇಯ ಲೋಕಾಯುಕ್ತ ಬಲೆಗೆ ಬಿದ್ದಿದ್ದೇ ಆ ಜಾಗಕ್ಕೆ ನಾಯಕ್‌ನನ್ನು ತಂದ ಯಡ್ಡಿ ಸರ್ಕಾರ ಇದಕ್ಕಿಂತಲೂ ಅನಾಹುತವಾದ ಕೆಲಸವೊಂದಕ್ಕೆ ಕೈಹಾಕಿದ್ದು 2010 ಜೂನ್ ತಿಂಗಳಲ್ಲಿ. ಆ ಹೊತ್ತಿಗೆ ಕಂದಾಯ ಇಲಾಖೆ ಕಾರ್ಯದರ್ಶಿಯಾಗಿದ್ದ ನಿಷ್ಠುರಿ ಐಎಎಸ್ ಅಧಿಕಾರಿ ವಿ. ಮಂಜುಳಾ ಸಾರ್ವಜನಿಕರ ಜಮೀನುಗಳ ನಿಗಮಕ್ಕೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕಿಯಾಗಿದ್ದರು. ರಾಮಾಂಜನೇಯನನ್ನು ಮುಂದಿಟ್ಟುಕೊಂಡು ಯಡ್ಡಿ ಗ್ಯಾಂಗ್ ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಸೊತ್ತನ್ನೆಲ್ಲ ಒಂದೊಂದಾಗಿ ಕಬಳಿಸತೊಡಗಿದ್ದು ಮಂಜುಳಾ ಗಮನಕ್ಕೆ ಬಂದಿತ್ತು. ಮುಖ್ಯಮಂತ್ರಿ ಯಡ್ಡಿಯನ್ನೂ ಧಿಕ್ಕರಿಸಿ ಯಾವ್ಯಾವ ಸೊತ್ತಿಗೆ ಬಿಜೆಪಿ ಖದೀಮರು ವಕ್ಕರಿಸಿದ್ದರೋ ಅದನ್ನೆಲ್ಲ ಬಂದೋಬಸ್ತು ಮಾಡಲಾರಂಭಿಸಿದರು.

ಎಂಟಕ್ಕೂ ಹೆಚ್ಚು ಪ್ರಕರಣಗಳಲ್ಲಿ ನೇರವಾಗಿ ಮುಖ್ಯಮಂತ್ರಿಯೇ ಆಸಕ್ತಿ ವಹಿಸಿದ್ದರು. ಒಂದಲ್ಲ ಮೂರ್‍ನಾಲ್ಕು ಬಾರಿ ಮುಖ್ಯಮಂತ್ರಿಯೇ ಮಂಜುಳಾರನ್ನು ಕರೆಸಿ 'ನಿನಗ್ಯಾಕಮ್ಮ ಅದೆಲ್ಲಾ... ನಿನ್ನ ಕೆಲಸ ಎಷ್ಟೋ ಅಷ್ಟು ನೋಡ್ಕೋ, ಬೇಡದ ಕೆಲಸಕ್ಕೆ ಕೈಹಾಕಬೇಡ.....' ಎಂದು ಬೆದರಿಕೆ ಹಾಕಿಯೂ ಇದ್ದರು. ಮಂಜುಳಾ ಇದ್ಯಾವುದಕ್ಕೂ ಜಗ್ಗಲಿಲ್ಲ. ರಾಮಾಂಜನೇಯನ ಕಾಲ ಮತ್ತು ಅದಕ್ಕೂ ಹಿಂದಿದ್ದ ರಾಮೇಗೌಡನ ಕಾಲದಲ್ಲಿ ಭೂಕಬಳಿಕೆ ಕುರಿತಂತೆ 136 (3) ಪ್ರಕರಣಗಳ ವಿಶೇಷ ತನಿಖೆಗೆಂದೇ ವೆಂಕಟೇಶ್, ಮಲ್ಲಯ್ಯ, ಕಲೀಮುಲ್ಲಾ, ಮಹೇಶ್ ಬಾಬು ಮತ್ತು ನಾಯಕ್ ಸೇರಿದಂತೆ ಪ್ರತಿ ತಾಲ್ಲೂಕಿನಲ್ಲೂ ಒಬ್ಬೊಬ್ಬ ಸ್ಪೆಷಲ್ ಡೀಸಿಯನ್ನು ನೇಮಿಸಿಬಿಟ್ಟರು.


ಯಲಹಂಕ, ಕೆ.ಆರ್. ಪುರ, ಆನೇಕಲ್, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ತಾಲ್ಲೂಕುಗಳ ಅಷ್ಟೂ ಭೂಕಬಳಿಕೆ ಪತ್ತೆಹಚ್ಚಲು ಒಬ್ಬೊಬ್ಬ ಸ್ಪೆಷಲ್ ಡಿಸಿ ನೇಮಿಸಿದ್ದನ್ನು ಕಂಡೇ ಯಡ್ಡಿ ಸರ್ಕಾರ ಬಿಚ್ಚಿಬಿದ್ದಿತು. ಪ್ರಾಮಾಣಿಕ ಐಎಎಸ್ ಮಂಜುಳರನ್ನು ರಾತ್ರೋರಾತ್ರಿ ಚಿಕ್ಕಬಳ್ಳಾಪುರಕ್ಕೆ ಎತ್ತಂಗಡಿ ಮಾಡಲಾಯ್ತು. ಬಹುಶಃ ಅದೇ ಹುದ್ದೆಯಲ್ಲಿನ್ನೂ ಮಂಜುಳಾ ಮುಂದುವರಿದಿದ್ದರೆ ರಾಮಾನಂಜನೇಯನ ಅಷ್ಟೂ ದುರಾಚಾರ ಬಯಲಾಗುತ್ತಿತ್ತು. ಆದರೆ ರಾಮಾಂಜನೇಯನಿಗಿಂತಲೂ ಯಡ್ಡಿ ಸರ್ಕಾರಕ್ಕೇ ಮಂಜುಳಾ ಬೇಕಿರಲಿಲ್ಲ.

ಈಗ ರಾಮಾಂಜನೇಯನನ್ನು ಮುಂದಿಟ್ಟುಕೊಂಡು ಯಡ್ಡಿ ಗ್ಯಾಂಗ್ ದೋಚಿರುವ ಬಹುತೇಕ ಸೊತ್ತೆಲ್ಲ ಇವತ್ತಲ್ಲ ನಾಳೆ ಜಪ್ತಾಗಲೇಬೇಕು. ಸರ್ಕಾರಿ ಜಮೀನುಗಳ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂ ಈಗಾಗಲೇ ಹೈಕೋರ್ಟ್ ಅರ್ಜಿಯನ್ನು ಸಿದ್ಧಪಡಿಸಿದ್ದಾರೆ. ಯಡ್ಡಿ ಸರ್ಕಾರ ಇಲ್ಲೂ ಕಳ್ಳಾಟವೊಂದಕ್ಕೆ ಕೈಯಿಟ್ಟಿದೆ. ಒಮ್ಮೆ ಕೋರ್ಟಿಗೆ ಹೋಯಿತೆಂದರೆ ಅದು ಇತ್ಯರ್ಥವಾಗುವ ತನಕ ಸಿಬಿಐ ತನಿಖೆ ಸಾಧ್ಯವಿಲ್ಲ. ಹಾಗೇನಾದರೂ ಸಿಬಿಐ ತನಿಖೆಯಾಯಿತೆಂದರೆ ಯಡ್ಡಿ ಸಮೇತ ಅನೇಕ ಬಿಜೆಪಿ ನಾಯಕರ ಹೆಗಲಿಗೆ ಸಿಬಿಐ ಕೈಹಾಕುತ್ತದೆ.

ಒಂದಲ್ಲ ಎರಡಲ್ಲ ಸಾವಿರ ಎಕರೆಗಳಷ್ಟು ಸರ್ಕಾರಿ ಸೊತ್ತನ್ನು ನುಂಗಿಹಾಕಿದ ಬಿಜೆಪಿ ಸರ್ಕಾರದ ಇದೊಂದೇ ದುರಾಚಾರವನ್ನು ಸಿಬಿಐ ತನಿಖೆಗೆ ಏಕೆ ಒಪ್ಪಿಸುತ್ತಿಲ್ಲ? ಈ ಬಗ್ಗೆ ವಿರೋಧ ಪಕ್ಷಗಳು ಏಕೆ ಇನ್ನೂ ಮಾತಾಡುತ್ತಿಲ್ಲ. ಬಿಜೆಪಿ ಸರ್ಕಾರಕ್ಕೆ ನಿಜಕ್ಕೂ ಸರ್ಕಾರಿ ಜಮೀನುಗಳ ರಕ್ಷಣೆಯ ಕಾಳಜಿಯಿದ್ದರೆ ಈ ಕೂಡಲೇ ಅಷ್ಟೂ ಭೂಕಬಳಿಕೆ ಹಗರಣವನ್ನು ಸಿಬಿಐ ತನಿಖೆಗೊಪ್ಪಿಸಬೇಕು. ಮುಂದೊಮ್ಮೆ ಬೆಂಗಳೂರಿನ ಭವಿಷ್ಯಕ್ಕೆ ಅಷ್ಟಿಷ್ಟು ಭೂಮಿಯಾದರೂ ಉಳಿಯಬೇಕೆಂದರೆ ಈ 1041 ಎಕರೆ ಭೂಹಗರಣವನ್ನು ಪ್ರಾಮಾಣಿಕವಾಗಿ ಕೆದಕಲೇಬೇಕು.

• ರಾ. ಸೋಮನಾಥ್

ಮುಂಗಾರು ಮಳೆ ಕೃಷ್ಣಪ್ಪ ಕೊಟ್ಟಿದ್ದೆಷ್ಟು ದೋಚಿದ್ದೆಷ್ಟು?



ಸರ್ಕಾರಿ ಭೂಮಿ ದೋಚುವ ರಾಮಾಂಜನೇಯನ ಅನಾಚಾರದ ಅತೀ ದೊಡ್ಡ ಫಲಾನುಭವಿ ಯಾರು ಗೊತ್ತೆ?

ಮುಂಗಾರು ಮಳೆ ಕೃಷ್ಣಪ್ಪ!

ಬೆಂಗಳೂರು-ನೆಲಮಂಗಲ ರಸ್ತೆಯ ದಾಸನಪುರ ಹೋಬಳಿಯ ಗೌಡಳ್ಳಿ ಗ್ರಾಮದಲ್ಲಿ ಮುಂಗಾರು ಮಳೆ ಕೃಷ್ಣಪ್ಪ ಇ.ಕೆ. ಎನ್‌ಕ್ಲೇವ್ ಎಂಬ ಐಷಾರಾಮಿ ಲೇಔಟ್ ನಿರ್ಮಿಸಿದ್ದಾರೆ. ಈ ಪೈಕಿ ಹಾರೋಕ್ಯಾತನಹಳ್ಳಿ ಸ.ನಂ. 78 ರಲ್ಲಿದ್ದ ಸರ್ಕಾರಿ ಕೊರಕಲು 6.20 ಎಕರೆ ಭೂಮಿಯನ್ನು ತನ್ನ ಬೇನಾಮಿ ಲಕ್ಷ್ಮಮ್ಮ ಕೋಂ ರಾಮಯ್ಯ ಎಂಬಾಕೆಯ ಹೆಸರಿಗೆ ಕಳ್ಳ ದಾಖಲೆ ಸೃಷ್ಟಿಸಿ ಮಾಡಿಸಿಕೊಡಲು ಸ್ಪೆಷಲ್ ಡೀಸಿ ರಾಮಾಂಜನೇಯನಿಗೆ ಕೃಷ್ಣಪ್ಪ ಕೊಟ್ಟ ಭಕ್ಷೀಸು ಬರೋಬ್ಬರಿ ಒಂದೂವರೆ ಕೋಟಿ!

ಪ್ರಕಾಶ್ ಶೆಟ್ಟಿಯ ಗೋಲ್ಡ್‌ಫಿಂಚ್ ಹೋಟೆಲಿನಲ್ಲೇ ರಾಮಾಂಜನೇಯನನ್ನು ಕರೆಸಿ ಕೃಷ್ಣಪ್ಪ ರೊಕ್ಕ ಪಾವತಿಸಿದರಂತೆ!


ಇದು ಕೇವಲ 6.20 ಎಕರೆಯ ಲಂಚದ ಬಾಬತ್ತು ಹಿಮಾಲಯ ಡ್ರಗ್ಸ್ ಹಿಂಭಾಗದ ಎಕರೆಗೆ ಒಂದೂವರೆ ಕೋಟಿ ಬೆಲೆಬಾಳುವ ಈ ಸೊತ್ತಿನ ಒಟ್ಟು ಮಾರುಕಟ್ಟೆ ಮೊತ್ತ ಕಡಿಮೆ ಎಂದರೂ 10 ಕೋಟಿ. ಒಂದೂವರೆ ಕೋಟಿ ರಾಮಾಂಜನೇಯನ ಕೈಗಿತ್ತರೆ ಆಗುವ ನಷ್ಟ ಯಾವ ಲೆಕ್ಕ?

ಇದಲ್ಲದೇ ರಾಮಾಂಜನೇಯನ ಮೂಲಕ ಇದೇ ಹಾರೋಕ್ಯಾತನಹಳ್ಳಿಯಲ್ಲಿ ಕೃಷ್ಣಪ್ಪ 18.19 ಎಕರೆಯ ಸರ್ಕಾರಿ ಗೋಮಾಳವನ್ನೇ ಲಪಟಾಯಿಸಿದ. ಸ.ನಂ. 170 ರಲ್ಲಿದ್ದ ಗೋಮಾಳದ ಪೈಕಿ 16.19 ಎಕರೆಯನ್ನು ಕೃಷ್ಣಪ್ಪ ನೇರವಾಗಿ ತನ್ನ ಹೆಸರಿಗೆ ಮಾಡಿಸಿಕೊಂಡರೆ ಉಳಿಕೆ 2 ಎಕರೆಯನ್ನು ತನ್ನ ಛೇಲಾ ಅಳ್ಳೇಗೌಡನ ಹೆಸರಿಗೆ ಪಹಣಿ ಬರೆಸಿದ. ಎಷ್ಟೆಂದರೂ ಗೋಮಾಳ ತಾನೆ? ಇದಕ್ಕೆಂದು ರಾಮಾಂಜನೇಯನಿಗೆ ಮತ್ತೆ 3 ಕೋಟಿ ಕೊಟ್ಟ. 25 ಕೋಟಿಯ ಸೊತ್ತಿಗೆ 3 ಕೋಟಿ ಲಂಚ ಕೊಟ್ಟರೆ ಅದು ದೊಡ್ಡ ಲುಕ್ಸಾನೇನಲ್ಲ.

ಇದಲ್ಲದೆ ಗೌಡಳ್ಳಿಯ ಸ.ನಂ. 59 ರಲ್ಲಿದ್ದ 27.01 ಎಕರೆ ಸರ್ಕಾರಿ ಗೋಮಾಳವನ್ನು ಕಬಳಿಸಿ ಅಲ್ಲಿ ತನ್ನ ಇ.ಕೆ. ಎನ್‌ಕ್ಲೇವ್ ಲೇಔಟ್‌ನ್ನು ಎಬ್ಬಿಸಿದ ಕೃಷ್ಣಪ್ಪ ಇದಕ್ಕೆಂದು ಸೃಷ್ಟಿಸಿದ ನಕಲಿ ದಾಖಲೆಗಳದ್ದೇ ಭಯಂಕರ ವೃತ್ತಾಂತವಾಗುತ್ತದೆ. ಶಿವನಪುರ ಗ್ರಾಮದ 13.32 ಎಕರೆಯನ್ನು ಭೂಪರಿವರ್ತನೆಯಾದಂತೆ ಕಪಟ ದಾಖಲೆ ಸೃಷ್ಟಿಸಿದ್ದ. ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮತಿ ಪಡೆದಿದ್ದು ಕೂಡ ಅಕ್ರಮವಾಗಿತ್ತು. ಇದೇ ಶಿವನಪುರದಲ್ಲಿ ಕೃಷ್ಣಪ್ಪ 20 ಎಕರೆ ಗ್ರೀನ್‌ಬೆಲ್ಟ್ ಜಮೀನನ್ನು ಆಕ್ರಮಿಸಿಕೊಂಡಿದ್ದ. ಇದು ಭೂಪರಿವರ್ತನೆ ಸಹ ಆಗಿರಲಿಲ್ಲ.

ಗೌಡಳ್ಳಿಯ ಸ.ನಂ. 57,58 ಮತ್ತು 59 ರಲ್ಲಿ ಒಟ್ಟು 45.26 ಎಕರೆಯಲ್ಲಿ ಇ.ಕೆ. ಎನ್‌ಕ್ಲೇವ್‌ಗೆಂದು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಲೇಔಟ್ ಪ್ಲಾನೇ ಮಂಜೂರಾಗಿರಲಿಲ್ಲ. ಈ ಪೈಕಿ ಬಹುತೇಕ ಸರ್ವೆ ನಂಬರುಗಳ ಭೂಮಿ ವಸತಿ ಉದ್ದೇಶಕ್ಕೆಂದು ಪರಿವರ್ತನೆಯನ್ನೇ ಮಾಡಿರಲಿಲ್ಲ. ಭೂಕಂದಾಯ ಕಾಯ್ದೆ 2007 ರ ಪ್ರಕಾರ ಶಿವನಪುರ ಮತ್ತು ಗೌಡಳ್ಳಿಯ ಸರ್ಕಾರಿ ಭೂಮಿಗೆ ಅಕ್ರಮ ಪ್ರವೇಶಿಸಿ, ಅದನ್ನ ವಶಪಡಿಸಿಕೊಂಡು; ಸುಳ್ಳು ದಾಖಲೆ ಸೃಷ್ಟಿಸಿದ್ದು, ಕೃಷಿ ಭೂಮಿಯನ್ನು ಪರಿವರ್ತನೆ ಇಲ್ಲದೆ ಕೃಷಿಯೇತರ ಉದ್ದೇಶಕ್ಕೆ ಬಳಸಿದ್ದು ಸ್ಪಷ್ಟವಾಗಿತ್ತು. ನಿವೇಶನಗಳನ್ನು ವಿಂಗಡಿಸಿ ಮಾರಿದ ಕಾರಣಕ್ಕೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವಂತೆ ವಿಶೇಷ ಜಿಲ್ಲಾಧಿಕಾರಿ ನಾಯಕ್ ಆದೇಶ ನೀಡಿದ್ದರು.

ಇದಲ್ಲದೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸಿದ್ದಕ್ಕಾಗಿ ಚದುರ ಅಡಿಗೆ 11.50 ರೂಪಾಯಿಯಂತೆ 9.01 ಎಕರೆಗೆ ದಂಡ ವಿಧಿಸಿ ನಾಯಕ್ ಆದೇಶ ಹೊರಡಿಸಿದ್ದಾರೆ. ಇದಲ್ಲದೆ ಯಾವುದೋ ಸರ್ವೆ ನಂಬರಿನ ಭೂಪರಿವರ್ತನೆ ದಾಖಲೆ ಸೃಷ್ಟಿಸಿ ಅದನ್ನು ಇ.ಕೆ. ಎನ್‌ಕ್ಲೇವ್‌ಗೆ ಲಗತ್ತಿಸಿ ನಿವೇಶನ ವಿಂಗಡಿಸಿ ಮಾರಾಟಕ್ಕಾಗಿ ಲೇಔಟಿನ 16.32 ಎಕರೆಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವಂತೆ ನಾಯಕ್ ಆದೇಶಿಸಿದ್ದಾರೆ. ಈ ಪ್ರಕಾರವೇ ಆದರೆ ಕೃಷ್ಣಪ್ಪ ಜೈಲಿಗೆ ಹೋಗುವುದು ಶತಸ್ಸಿದ್ಧ. ಒಟ್ಟು ನೂರು ಎಕರೆಗೂ ಅಧಿಕ ಮೊತ್ತದ ಸರ್ಕಾರಿ ಭೂಮಿ ದೋಚಿದ ಆರೋಪ ಕೃಷ್ಣಪ್ಪನ ಮೇಲಿದೆ. ಸ್ಪೆಷಲ್ ಡೀಸಿ ನಾಯಕ್ 2011 ರ ಏಪ್ರಿಲ್ 27 ರಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ನೀಡಿದ ಆದೇಶದಲ್ಲಿ ಕೃಷ್ಣಪ್ಪ ವಿರುದ್ಧ ಮೊಕದ್ದಮೆ ದಾಖಲಿಸುವಂತೆ ಆದೇಶ ನೀಡಿದ್ದಾರೆ.


ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ
PRINCIPAL SECRETARY TO CHIEF MINISTER

ಮುಖ್ಯ ಮಂತ್ರಿಯವರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು - ೫೬೦ ೦೦೧
CHIEF MINISTER'S SECRETARIAT
VIDHANA SOUDHA, BANGALORE - 560 001

ಸಂಖ್ಯೆ: No.: PS CM / 1288 / 2011.

ದಿನಾಂಕ / DATED. 20.05.2011.

ಟಿಪ್ಪಣಿ

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಗೌಡಳ್ಳಿ ಗ್ರಾಮದ ಗೋಮಾಳ ಸರ್ವೇ ನಂ. 57, 58 ಮತ್ತು 59 ರಲ್ಲಿ ಶ್ರೀ ಇ. ಕೃಷ್ಣಪ್ಪ, ಮಾನ್ಯ ವಿಧಾನಪರಿಷತ್ ಸದಸ್ಯರು ಹಾಗೂ ಇತರರು ಅಕ್ರಮ ದಾಖಲೆ ಸೃಷ್ಟಿಸಿ ಬಡಾವಣೆ ನಿರ್ಮಿಸಿರುವ ಬಗ್ಗೆ

ಉಲ್ಲೇಖ: ವಿಶೇಷ ಜಿಲ್ಲಾಧಿಕಾರಿಗಳು (೪), ಬೆಂಗಳೂರು ಜಿಲ್ಲೆ, ಬೆಂಗಳೂರು ಇವರು ಸರ್ಕಾರದ ಕಂದಾಯ ಇಲಾಖೆಗೆ ನೀಡಿರುವ ವರದಿ ನಂ. ಎಲ್‌ಎನ್‌ಡಿ (ಎಸ್) ಸಿಆರ್/04/11-12 ದಿ. 27-04-2011

****

ಬೆಂಗಳೂರು ಉತ್ತರ ತಾಲ್ಲೂಕು, ದಾಸನ ಪುರ ಹೋಬಳಿ, ಗೌಡಹಳ್ಳಿ ಸರ್ವೇ ನಂ. 57, 58 ಮತ್ತು 59 ಸರ್ಕಾರಿ ಜಮೀನಿನಲ್ಲಿ ಮತ್ತು ಶಿವನಪುರ ಗ್ರಾಮದ ಸರ್ವೆ ನಂ: 65 ಮತ್ತು ಇತರ ಜಮೀನುಗಳಲ್ಲಿ ಶ್ರೀ ಇ. ಕೃಷ್ಣಪ್ಪ, ಮಾನ್ಯ ವಿಧಾನಪರಿಷತ್ ಸದಸ್ಯರು ಹಾಗೂ ಇತರರು ಅಕ್ರಮ ದಾಖಲೆ ಸೃಷ್ಟಿಸಿ ಇ.ಕೆ.ಎನ್‌ಕ್ಲೇವ್ ಎಂಬ ಅನಧಿಕೃತ ಬಡಾವಣೆಯನ್ನು ನಿರ್ಮಿಸಿರುವ ಬಗ್ಗೆ ಉಲ್ಲೇಖದ ಪತ್ರದಲ್ಲಿ ಬೆಂಗಳೂರು ನಗರದ ಜಿಲ್ಲಾಧಿಕಾರಿಗಳು ತಮಗೆ ಮಧ್ಯಂತರ ವರದಿಯನ್ನು ಸಲ್ಲಿಸಿರುತ್ತಾರೆ.

ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಿಸಿದವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

([illegible] ಪ್ರಸಾದ್)
ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

ಪ್ರಧಾನ ಕಾರ್ಯದರ್ಶಿಯ ಆದೇಶ

ಕೃಷ್ಣಪ್ಪ ಈಗ ಎಂಎಲ್‌ಸಿ. ಆ ಕಾರಣ ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್ ಕ್ರಮ ಜರುಗಿಸುವಂತೆ ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಹೀಗಿದ್ದೂ ಕೃಷ್ಣಪ್ಪ ಮೇಲೆ ಸರ್ಕಾರದ ಏಕೆ ಮೃದುವಾನಗಿಯೆಂದರೆ ಗೃಹಮಂತ್ರಿ ಅಶೋಕ್ ಈಗ ಕೃಷ್ಣಪ್ಪ ಬೆನ್ನಿಗೆ ನಿಂತಿದ್ದಾರೆ. ಜೆಡಿಎಸ್ ತೊರೆದು ಇಷ್ಟರಲ್ಲೇ ಬಿಜೆಪಿ ಸೇರುತ್ತೇನೆಂದು ಕೃಷ್ಣಪ್ಪ ಬಿಜೆಪಿ ನಾಯಕ ಅಶೋಕ್‌ಗೆ ಶರಣಾಗಿದ್ದಾರಂತೆ. ಕೃಷ್ಣಪ್ಪ ಜೊತೆ ಸಂದೇಶ್ ನಾಗರಾಜ್ ಕೂಡ ಬಿಜೆಪಿಗೆ ಬರುತ್ತಾರಂತೆ. ಜೈಲಿಗೆ ಹೋಗುವುದರಿಂದ ಬಚಾವಾಗಲು ಜೆಡಿಎಸ್ ತೊರೆಯುವುದಕ್ಕೂ ಸಿದ್ಧ ಬಿಜೆಪಿ ಸೇರುವುದಕ್ಕೂ ಸಿದ್ಧ.

ಮುಂಗಾರು ಮಳೆಯ ಹನಿಗಳ ಲೀಲೆಗೆ ಸೈಟು ಕೊಂಡವರ ಪೈಕಿ ಅದೆಷ್ಟು ತಲೆಗಳು ಉರುಳುತ್ತೋ ಬಲ್ಲವರ್‍ಯಾರು?

ಕನಕಪುರದ ಜೆಡಿಎಸ್-ಕಾಂಗ್ರೆಸ್ ನಡುವಿನ ಕದನ ಈಗ ಸೇಡಿನ ರಾಜಕೀಯವಾಗಿ ತಿರುವು ಪಡೆಯುತ್ತಿದೆ.

ಶಾಸಕ ಡಿ.ಕೆ. ಶಿವಕುಮಾರನ ತಮ್ಮ ಡಿ.ಕೆ.ಸೂರಿಯ ಹತ್ಯೆಗೆ ಯಾರೋ ಸಂಚು ಮಾಡಿ ಮತ್ಯಾರಿಗೋ ಸುಪಾರಿ ಕೊಟ್ಟಿದ್ದರೆನ್ನುವ ಸುದ್ದಿ ಈಗ ಇನ್ನಷ್ಟು ಬಲಿತುಕೊಂಡಿದೆ.

ಜನತಾದಳದ ಬಲಿಷ್ಠ ನಾಯಕ ಬಾಲನರಸಿಂಹೇಗೌಡ ಎಂಬುವವರನ್ನು ಜೈಲಿಗೆ ಹಾಕಿಸುವ ಮೂಲಕ ಈ ವಿವಾದ ಇನ್ನೊಂದು ಹಂತ ತಲುಪಿದೆ. ಅಲ್ಲದೆ ಕಾಂಗ್ರೆಸಿಗಳು ಕನಕಪುರ ಬಂದ್ ಮಾಡಿಸಿ ಜೆಡಿಎಸ್ ವಿರುದ್ಧ ನೇರ ಯುದ್ಧ ಘೋಷಣೆ ಮಾಡಿದ್ದಾರೆ.





ಸೂರಿ

ಡಿಕೆ ಗೂಂಡಾಗಿರಿ

• ಪಾರ್ವತೀಶ

ಬೆಂಗಳೂರಿನ ಲಕ್ಷ್ಮಣ ಎಂಬುವವರನ್ನು ಹಿಡಿದು ಕೊಲೆ ಪಿತೂರಿ ಆರೋಪ ಹೊರಿಸಿದ್ದಾರೆ. ಜೊತೆಗೆ ಕನಕಪುರ ತಾಲ್ಲೂಕಿನವನೇ ಆದ ತಗಡೇಗೌಡನ ದೊಡ್ಡಿಯ ಕಾಳೇಗೌಡ ಎಂಬುವನನ್ನು ಹುಡುಕುತ್ತಿದ್ದಾರೆ.

ಪೊಲೀಸರ ಈ ನಡವಳಿಕೆ ಅನೇಕ ಅನುಮಾನಗಳಿಗೆ ಕಾರಣವಾಗುತ್ತಿದೆ. ಮೊದಲ ಹಂತದ ತನಿಖೆಯಲ್ಲಿ ಕುಡಿದಾಗ ಏನೇನೋ ಒದರಿದವನಂತೆ ಕಂಡಿದ್ದ ಚಿಕ್ಕರಾಜ ಈಗ ಸುಪಾರಿ ಕೊಲೆ ಸಂಚಿನ ಪಾತ್ರಧಾರಿಯಾಗಿ ಪೊಲೀಸರಿಗೆ ಕಾಣಿಸಿರುವುದು ಆಶ್ಚರ್ಯಕರವಾಗಿದೆ. ಅಲ್ಲದೆ. ಈ ಮೊದಲು



ಹೇರಂದಪ್ಪನಹಳ್ಳಿಯವನಾದ ಬಾಲನರಸಿಂಹ ಒಂದು ಸಾರಿ ಕನಕಪುರ ತಾಲ್ಲೂಕು ಪಂಚಾಯತಿಗೆ ಅಧ್ಯಕ್ಷನಾಗಿದ್ದ. ಹಾಲಿ ಮೆಂಬರ್ ಕೂಡ ಹೌದು. ಬಾಲನರಸಿಂಹನಿಗೂ ಮಾಮೂಲಿ ರಾಜಕಾರಣದ ವರಸೆಗಳೆಲ್ಲಾ ಗೊತ್ತಿವೆ. ಆದರೆ ಆತ ಸೂರಿ ಹತ್ಯೆಗೆ ಸುಪಾರಿ ಕೊಡುವ ಲೆವೆಲ್‌ಗೆ ಹೋಗಲಾರನೆಂಬುದು ಜೆಡಿಎಸ್‌ನವರಿಗಿರಲಿ ಸ್ವತಃ ಕಾಂಗ್ರೆಸ್‌ನವರಿಗೂ ಗೊತ್ತಿದೆ. ಆದರೂ ಸೂರಿ ಸುಪಾರಿ ಕೇಸಿನಲ್ಲಿ ಬಾಲನರಸಿಂಹನನ್ನು ಯಾರು ಸಿಕ್ಕಿಸಿದರು, ಯಾಕೆ ಸಿಕ್ಕಿಸಿದ್ದಾರೆ ಎಂಬ ಪ್ರಶ್ನೆ ಮೇಲೇಳುತ್ತಿವೆ. ಇದರ ಜಾಡು ಹಿಡಿದು ಹೊರಟರೆ ಕನಕಪುರದ ಜೆಡಿಎಸ್-ಕಾಂಗ್ರೆಸ್‌ನವರ ಶತಮಾನಗಳ ಕದನ, ಕಲ್ಲುಗಣಿ ಕ್ವಾರಿಗಳ ದಂಧೆ, ಸೂರಿಯ ಪಾಳೇಗಾರಿಕೆಗಳೆಲ್ಲಾ ಕಾಣಿಸುತ್ತವೆ. ಜೊತೆಗೆ ಹಾಲಿ ಬಿಜೆಪಿ ಸರ್ಕಾರ ಡಿ.ಕೆ. ಸಾಮ್ರಾಜ್ಯದ ರಕ್ಷಣೆಗೆ ನಿಂತು ಜೆಡಿಎಸ್‌ನವರನ್ನು ಬಲಿಹಾಕಲು ಕುಮ್ಮಕ್ಕು ನೀಡುತ್ತಿರುವುದು ಕಾಣುತ್ತದೆ. ನೇರವಾಗಿ ಹೇಳಬೇಕೆಂದರೆ ಮುಖ್ಯಮಂತ್ರಿ ಯಡಿಯೂರಪ್ಪನಿಗೆ ಹಾಗೂ ಗೃಹಮಂತ್ರಿ ಅಶೋಕ್‌ಗೆ ಕನಕಪುರ ಕ್ಷೇತ್ರವು ಏನೇ ಆದರೂ ದೇವೇಗೌಡ ಕುಮಾರಸ್ವಾಮಿ ಕಂಟ್ರೋಲಿಗೆ ಸಿಗಬಾರದೆಂದಿದೆ.



ಕೃಷ್ಣಮೂರ್ತಿ

ಹಾಗಾಗಿ ಕನಕಪುರದ ಮಟ್ಟಿಗೆ ಸದ್ಯಕ್ಕೆ ಕಾಂಗ್ರೆಸ್-ಬಿಜೆಪಿ ಒಂದು ಕಡೆಯಾದರೆ ಜೆಡಿಎಸ್ ಇನ್ನೊಂದು ಕಡೆ ನಿಂತಿದೆ.

ಬಾಲನರಸಿಂಹನ ಬಂಧನವು ಈ ಹೊಸ ರಾಜಕೀಯ ಕಾಂಬಿನೇಷನ್ನಿನ ಫಲಿತಾಂಶದಂತೆ ಕಾಣುತ್ತಿದೆ.

ಸುಪಾರಿ ನಿಜನಾ?

ಕಳೆದ ಹದಿನೈದಿಪ್ಪತ್ತು ದಿನಗಳಿಂದ ಡಿಕೆಶಿ ತಮ್ಮ ಡಿ.ಕೆ.ಸೂರಿ ನಾಲ್ಕಾರು ಜನ ಬಾಡಿಗಾರ್ಡುಗಳನ್ನು ಜೊತೆಗೆ ಕರೆದುಕೊಂಡು ಓಡಾಡಲು ಶುರು ಮಾಡಿದ್ದ. ಆ ಬಗ್ಗೆ 'ಲಂಕೇಶ್'ನಲ್ಲೇ 'ಸೂರಿಗ್ಯಾಕೆ ಸೆಕ್ಯುರಿಟಿ?' ಎಂಬ ವರದಿಯೂ ಪ್ರಕಟವಾಗಿತ್ತು. ಆಗ ಕೇಳಿಬಂದಿದ್ದ ರೂಮರ್ ಏನೆಂದರೆ ಬೆಂಗಳೂರಿನ ರೌಡಿ ದಿವಾನ್ ಆಲಿ ಹತ್ಯೆಯಲ್ಲಿ ಸೂರಿಯ ಕೈವಾಡವೂ ಇದೆಯೆಂದು ಆಲಿ ಕಡೆಯವರಿಗೆ ಅನುಮಾನ ಬಂದು ಅವರು ಈ ಕೆಲಸಕ್ಕೆ ಕೈಹಾಕಿದ್ದಾರೆನ್ನಲಾಗಿತ್ತು. ಆದರೆ ಅದು ಪೂರ್ತಿ ನಿಜವಾಗಿರಲಿಲ್ಲ.

ಈ ಇಡೀ ವಿವಾದ ಶುರುವಾಗಿದ್ದೇಗೆಂದರೆ ಕೋಟೆಕೊಪ್ಪದ ಚಿಕ್ಕರಾಜ ಎನ್ನುವ ಜೆಡಿಎಸ್‌ನ ಗ್ರಾಮಪಂಚಾಯತಿ ಮೆಂಬರ್ ಒಬ್ಬ ಒಂದು ದಿನ ಕುಡಿದು ಯಾರೊಂದಿಗೋ "ನೋಡ್ತಾ ಇರಿ, ಇವತ್ತಲ್ಲ ನಾಳೆ ಸೂರಿನ ಮುಗಿಸ್ತೀವಿ' ಎಂದಿದ್ದನಂತೆ. ಆ ಸುದ್ದಿ ಡಿಕೆಶಿ ಕಿವಿಗೆ ಬಿತ್ತು. ಆಗ ಅಲರ್ಟ್ ಆದ ಡಿಕೆಶಿ ಪೊಲೀಸ್ ಉನ್ನತಾಧಿಕಾರಿಗಳಿಗೆ ಒಂದು ದೂರು ನೀಡಿ ತನಿಖೆ ಮಾಡುವಂತೆ ಕೇಳಿದ್ದರು.

ಈ ದೂರನ್ನು ರಹಸ್ಯವಾಗಿರಿಸಿ ತನಿಖೆ ಆರಂಭಿಸಲಾಯಿತು. ಅದರಂತೆ ಸಿಸಿಬಿ ಪೊಲೀಸರು ಒಂದು ಸಾರಿ ಚಿಕ್ಕರಾಜನನ್ನು ಎಳೆತಂದು ಮೂರು ದಿನ ವಶದಲ್ಲಿರಿಸಿಕೊಂಡು ವಿಚಾರಿಸಿ ಕೊನೆಗೆ ಅದು ಸುಪಾರಿ ಕೇಸ್ ಅಲ್ಲವೆಂದು ಬಿಟ್ಟು ಕಳಿಸಿದ್ದರು.

ಈಗ ಸಡನ್ನಾಗಿ ಕೋಡಿಹಳ್ಳಿ ಪೊಲೀಸರು ಜೆಡಿಎಸ್ ಮುಖಂಡ ಬಾಲನರಸಿಂಹೇಗೌಡ, ಕೋಟೆಕೊಪ್ಪದ ಶಂಭುಗೌಡ ಮತ್ತವನ ಮಗ ಚಿಕ್ಕರಾಜು, ಕೆಂಪೇಗೌಡ, ಸೀನ್‌ನಲ್ಲಿ ಇರದಿದ್ದ ಬಾಲನರಸಿಂಹನನ್ನು ಈ ಕೇಸ್‌ನಲ್ಲಿ ಫಿಟ್ ಮಾಡಿರುವುದಂತೂ ಡಿಕೆ ಬ್ರದರ್ಸ್ ಉದ್ದೇಶ ಬೇರೇನೋ ಇಧೆಯೆಂಬುದನ್ನು ತೋರಿಸುತ್ತಿದೆ.

ಹತ್ಯೆಗೀಡಾದ ಕಾರ್ಪೊರೇಟರ್ ದಿವಾನ್ ಆಲಿಯ ಸೋದರ ಅಕ್ಬರ್ ಆಲಿ ಎಂಬುವನು ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾನೆ. ಈ ಬಾಲನರಸಿಂಹ ಯಾರ ಮೂಲಕವೋ ಆಲಿಗೆ ಹಣ ತಲುಪಿಸಿ ಸೂರಿ ಕೊಲೆಗೆ ಸುಪಾರಿ ಕೊಟ್ಟಿದ್ದಾನೆ ಎಂಬುದು ಡಿಕೆಗಳ ಅನುಮಾನ. ಕನಕಪುರ ಪೊಲೀಸರು ಮರು ಮಾತಾಡದೆ ಡಿಕೆ ಹೇಳಿದ್ದನ್ನೇ ಹೌದೆಂದು ಬಾಲನರಸಿಂಹನನ್ನು ಕೇಸ್‌ನಲ್ಲಿ ಫಿಟ್ ಮಾಡಿದ್ದಾರೆ. ಆದರೆ ಈ ಬಾಲನರಸಿಂಹ ಕಲ್ಲುಗಣಿಯೊಂದರ ಖರೀದಿಗಾಗಿ ತಗಡೇಗೌಡನ ದೊಡ್ಡಿಯ ಕಾಳೇಗೌಡರಿಗೆ ಹಣ ಕೊಟ್ಟಿದ್ದ ಎನ್ನಲಾಗಿದೆ. ಈಗದನ್ನು ಉಪಾಯವಾಗಿ ಸೂರಿ ಹತ್ಯೆಯ ಸುಪಾರಿಗಾಗಿ ಕೊಟ್ಟು ಹಣ ಎನ್ನುವಂತೆ ಬಿಂಬಿಸಲಾಗುತ್ತಿದೆ. ಕೋಡಿಹಳ್ಳಿಯ ಸಬ್‌ಇನ್ಸ್‌ಪೆಕ್ಟರ್ ಮೋಹನ್ ರೆಡ್ಡಿ ಹಾಗೂ ಕನಕಪುರ ಸರ್ಕಲ್ ಇನ್ಸ್‌ಪೆಕ್ಟರ್ ಮಂಜುನಾಥರ ವರಸೆಗಳನ್ನು ನೋಡುತ್ತಿದ್ದರೆ ಹನ್ನೆರಡಾಣೆ ಕಾಂಗ್ರೆಸ್ ಕಾರ್ಯಕರ್ತರ ತರ ನಾಲ್ಕಾಣೆ ಮಾತ್ರ ಪೊಲೀಸರ ತರ ಕಾಣಿಸುತ್ತಿದ್ದಾರೆ.

ಇದೆಲ್ಲಾ ಏನೇ ಇರಲಿ, ಕನಕಪುರ ತಾಲ್ಲೂಕಿನಲ್ಲಿ ಇಲ್ಲಿಂದಾಚೆಗೆ ದಳ ಕಾಂಗ್ರೆಸ್‌ಗಳ ನಡುವೆ ನಿತ್ಯಕದನಗಳು ಶುರುವಾಗುವ ಸೂಚನೆಗಳು ಕಾಣುತ್ತಿವೆ.

ಡಿಕೆಶಿಯ ಆತಂಕಗಳು

ಕನಕಪುರ ಕ್ಷೇತ್ರದಲ್ಲಿ ಕಾಯಂ ಆಗಿ ಗೆದ್ದು ಬರುವ ಯೋಚನೆ ಬಿಟ್ಟರೆ ಸದ್ಯಕ್ಕೆ ಡಿ.ಕೆ.ಶಿವಕುಮಾರ್‌ಗೆ ಬೇರೇನೂ ರಾಜಕೀಯ ಅಜೆಂಡಾ ಇದ್ದಂತಿಲ್ಲ, ಏಕೆಂದರೆ ರಾಜ್ಯಮಟ್ಟದ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ, ಪರಮೇಶ್ವರ್, ಸಂಸದ ಎಚ್.ವಿಶ್ವನಾಥ್ ಈಗ ಬಲಿಷ್ಠರಾಗಿದ್ದಾರೆ. ಅದಕ್ಕೆ ತಕ್ಕಂತಹ ಸ್ಥಾನಮಾನಗಳೂ ಅವರಿಗಿವೆ. ಆದರೆ ಅದೇ ಡಿಕೆ ಈಗ ಶಾಸಕ ಮಾತ್ರ. ಕೆಪಿಸಿಸಿ ವರ್ಕಿಂಗ್ ಪ್ರೆಸಿಡೆಂಟ್ ಆಗಿದ್ದಾಗಲೂ ಡಿಕೆ ವಿಶೇಷ ಸಾಧನೆಯನ್ನೇನೂ ಮಾಡಿ ತೋರಿಸಲು ಆಗಿರಲಿಲ್ಲ, ರಾಜಕಾರಣದ ಜೊತೆಗೆ ಬೃಹತ್ ಬ್ಯುಸಿನೆಸ್ ಸಾಮ್ರಾಜ್ಯ ಕಟ್ಟಿಕೊಂಡಿರುವ ಡಿಕೆಗೆ ಆ ಉದ್ಯಮ ರಕ್ಷಿಸಿಕೊಳ್ಳಲು ರಾಜಕೀಯ ಅಧಿಕಾರ ಬೇಕೇಬೇಕಿದೆ. ಹಾಗಾಗಿ ಕಾಂಗ್ರೆಸ್ ಸರ್ಕಾರ ಬರದಿದ್ದರೂ ಪರವಾಗಿಲ್ಲ, ಕನಿಷ್ಠ ಪಕ್ಷ ತನ್ನ ಶಾಸಕಗಿರಿಯಾದರೂ ಕಾಯಂ ಆಗಿ ಉಳಿಯಬೇಕು ಎಂಬುದೇ ಅವರ ಗುರಿ. ಆ ಗುರಿ ಈಡೇರಬೇಕೆಂದರೆ ಕನಕಪುರ ವಿಧಾನಸಭಾ ಕ್ಷೇತ್ರವನ್ನು ಸಂಪೂರ್ಣ ಕಂಟ್ರೋಲಿನಲ್ಲಿಟ್ಟುಕೊಂಡರೆ ಮಾತ್ರ ಸಾಧ್ಯ.

ಡಿಕೆ ಅದರ ಉಸ್ತುವಾರಿಯನ್ನು ತನ್ನ ತಮ್ಮ ಸೂರಿಗೆ ವಹಿಸಿಕೊಟ್ಟಿದ್ದಾರೆ. ಡೆಮಾಕ್ರಸಿಯ ಒಂದೇ ಒಂದು ನಿಯಮವೂ ಗೊತ್ತಿರದ ಸೂರಿಯ ಪಾಲಿಸಿ ಏನೆಂದರೆ ಕನಕಪುರದಲ್ಲಿ ದಳದವರಾಗಲಿ ಅಥವಾ ಕಾಂಗ್ರೆಸ್‌ನವರಾಗಲಿ ತಮ್ಮ ಸರಿಸಮಾನರಾಗಿ ಬೆಳೆಯಬಾರದು ಎಂಬುದು. ಅದನ್ನು ಸಾಧಿಸಲು ಡಿಕೆ ಫ್ಯಾಮಿಲಿಯು ಸಾಮ, ದಾನ, ಭೇದ, ದಂಡ... ಹೀಗೆ ಏನನ್ನಾದರೂ ಬಳಸುತ್ತದೆ. ಈ ಹಿಂದೆ ದಳದ ಲೀಡರ್‌ಗಳಾಗಿದ್ದ ಮುಳ್ಳಹಳ್ಳಿ ಸೊಣ್ಣಪ್ಪ, ಕೋಡಿಹಳ್ಳಿ ಕೃಷ್ಣಪ್ಪ, ಕೊಕ್ಕರೆಹೊಸಳ್ಳಿ ಮಾರೇಗೌಡ, ಅರಕೆರೆ ಮುನಿಹುಚ್ಚೇಗೌಡ, ವೆಂಕಟರಾಯನದೊಡ್ಡಿ ರಾಮಣ್ಣ, ಹೊನಗನಹಳ್ಳಿ ಶ್ರೀಕಂಠು ಮುಂತಾದವರನ್ನೆಲ್ಲಾ ನಾನಾ ತಂತ್ರ, ಬೆದರಿಕೆ, ಆಮಿಷ ಒಡ್ಡಿ ಕಾಂಗ್ರೆಸ್ ಸೇರುವಂತೆ ಸೂರಿ ನೋಡಿಕೊಂಡಿದ್ದಾನೆ. ಹಾಗೆ ಶರಣಾಗಲೊಲ್ಲದ ನಾಯಕರನ್ನು ಅವರು ಯಾವುದೇ ಪಕ್ಷಕ್ಕೆ ಸೇರಿದ್ದರೂ ಬೆಂಬಿಡದೆ ಕಾಡಿ ಹೈರಾಣಾಗಿಸುವ ಕಲೆಯೂ ಸೂರಿಗೆ ಗೊತ್ತಿದೆ. ಒಂದು ಕಾಲದಲ್ಲಿ ಬಹುಜನ ಸಮಾಜ ಪಕ್ಷದಲ್ಲಿದ್ದು ಈಗ ಬಿಜೆಪಿ ಸೇರಿರುವ ಚನ್ನಸ್ವಾಮಿ ತರದ ನಾಯಕರ ಹಣೆಬರಹ ಏನಾಯಿತೆಂದು ನೋಡಿದರೆ ಸಾಕು ಡಿಕೆ ಫ್ಯಾಮಿಲಿಯ ಗೂಂಡಾಗಿರಿ ಎಂತದೆಂದು ಗೊತ್ತಾಗುತ್ತದೆ.

ತಮಗೆ ಎದುರಾಗಿ ನಿಲ್ಲುವವರು, ಬೆಳೆಯುತ್ತಿರುವವರು ಯಾರೇ ಆಗಿರಲಿ ಅಂತವರ 'ರೇಟೆಷ್ಟು' ಅಂತಲೆ ಮಾತಿಗೆ ಕೂರುವ ಧಿಮಾಕು ಸೂರಿಗಿದೆ. ಕೊನೆಗೆ ಶುದ್ಧ ಕ್ರಯ ಅಥವಾ ಭೋಗ್ಯ, ಅದೂ ಆಗದಿದ್ದರೆ ಇಳಿ ಭೋಗ್ಯದ ಲೆಕ್ಕದಲ್ಲಾದರೂ ಜನರನ್ನು ಖರೀದಿಸಿ ತಮ್ಮ ಕಾಂಗ್ರೆಸ್ ಕೋಟೆಯನ್ನು ಬಿಗಿ ಮಾಡಿಕೊಳ್ಳುವುದೇ ಸೂರಿಯ ನಿತ್ಯಕಾಯಕ.

ಈ ಮಧ್ಯೆ ಏನಾಯಿತೆಂದರೆ ಡಿಕೆ ಸಾಮ್ರಾಜ್ಯದ ವಿರುದ್ಧ



ವಿಶ್ವನಾಥ್



ನಾಗರಾಜ್

ಹರಸಾಹಸ ಮಾಡಿ ಕೆಲವು ನಾಯಕರು ತಲೆ ಎತ್ತಿದ್ದಾರೆ. ಹೊಸದುರ್ಗದ ಸಿದ್ದೇಗೌಡ, ದೊಂತೂರು ವಿಶ್ವನಾಥ್, ಕನಕಪುರ ಟೌನಿನ ಕೌನ್ಸಿಲರ್ ನಾಗರಾಜ್ ಯಾನೆ ಚಿಕ್ಕಪ್ಪ ಮುಂತಾದವರು ಡಿಕೆ ಸೋದರರಿಗೆ ಕ್ಯಾರೇ ಎನ್ನದೆ ಓಡಾಡುತ್ತಿರುತ್ತಾರೆ, ಅಂತದ್ದನ್ನು ಮಾಡಿ ತೋರಿಸುವ ಜನಬಲ ಹಾಗೂ ಹಣಬಲವು ಇವರಿಗಿದೆ.

ಹೇರಂದ್ಯಾಪನಹಳ್ಳಿಯ ಬಾಲನರಸಿಂಹೇಗೌಡನೂ ಅಂತಹವರಲ್ಲಿ ಒಬ್ಬನಾಗಿದ್ದ. ಸ್ವಂತದ ಕಲ್ಲುಗಣಿಗಳನ್ನು ನಡೆಸುತ್ತಿರುವ ಬಾಲನರಸಿಂಹ ಜೆಡಿಎಸ್‌ನ ಬಲಿಷ್ಠ ಲೀಡರ್‌ಗಳಲ್ಲಿ ಒಬ್ಬ. ಕೈಲಿ ಸಾಕಷ್ಟು ಹಣವೂ ಓಡಾಡುತ್ತವೆ. ಕಳೆದ ಬಾರಿಯ ಗ್ರಾಮಪಂಚಾಯತಿ ಎಲೆಕ್ಷನ್‌ನಲ್ಲಿ ಬಾಲನರಸಿಂಹ ಕೊಳಗೊಂಡನಹಳ್ಳಿ, ಕೋಡಿಹಳ್ಳಿ, ಹೊಸದುರ್ಗ ಮುಂತಾದೆಡೆ ಜೆಡಿಎಸ್ ಅಭ್ಯರ್ಥಿಗಳಿಗೆ ಸಾಕಷ್ಟು ಹಣ ಸಹಾಯವನ್ನು ಕೊಟ್ಟು ಕಾಂಗ್ರೆಸ್ ವಿರುದ್ಧ ಸೆಣೆಸಾಟಕ್ಕೆ ಕುಮ್ಮಕ್ಕು ಕೊಟ್ಟಿದ್ದ. ಡಿಕೆಶಿ ಹಾಗೂ ಸೂರಿಗೆ ಇದರಿಂದ ರೇಗಿಹೋಗಿತ್ತು, ಬಾಲನರಸಿಂಹ, ಸಿದ್ದೇಗೌಡನ ತರದವರು ಇನ್ನೂ ನಾಲ್ಕಾರು ಲೀಡರ್‌ಗಳು ಅಲ್ಲಲ್ಲಿ ತಲೆಯೆತ್ತಿದರೆ. ಕ್ಷೇತ್ರದ ಕಾಂಗ್ರೆಸ್ ಕೋಟೆ ಬಿರುಕು ಬಿಟ್ಟೀತೆಂಬ ಭಯವೂ ಅವರಿಗೆ ಕಾಡುತ್ತಿದೆ. ಜೊತೆಗೆ ದಳದ ನಾಯಕ ಕುಮಾರಸ್ವಾಮಿ ಬಿಡುವು ಸಿಕ್ಕಾಗಲೆಲ್ಲಾ ಕನಕಪುರಕ್ಕೆ ಬಂದು ಡಿಕೆಶಿಗೆ ಸವಾಲು ಹಾಕಿ ಹೋಗುತ್ತಿರುತ್ತಾರೆ.

ಇದೆಲ್ಲ ಡಿಕೆಗೆ ಅಪಾಯದ ಸೂಚನೆ ತರ ಕಾಣುತ್ತಿದೆ. ಹಾಗೆ ನೋಡಿದರೆ 2008ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಡಿಕೆಶಿಗೆ ಸಿಕ್ಕಿದ್ದ ಲೀಡ್ ಏಳು ಸಾವಿರಕ್ಕಿಂತ ಹೆಚ್ಚಿರಲಿಲ್ಲ, ಆ ನಂತರ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಎಲೆಕ್ಷನ್ ನಡೆದಾಗ ಕಾಂಗ್ರೆಸ್ಸೇ ಮೇಲುಗೈ ಸಾಧಿಸಿತ್ತು. ಇರುವ ಮೂವತ್ತು ಗ್ರಾಮಪಂಚಾಯತಿಗಳ ಪೈಕಿ ನಾಲ್ಕೈದು ಬಿಟ್ಟರೆ ಉಳಿದವೆಲ್ಲಾ ಕಾಂಗ್ರೆಸ್ ಪಾಲಾಗಿವೆ. ಇಪ್ಪತ್ತೇಳು ತಾಲ್ಲೂಕು ಪಂಚಾಯತಿ ಕ್ಷೇತ್ರಗಳಲ್ಲಿ ದಳದಿಂದ ಸಾತನೂರಿನ ಪ್ರಕಾಶ್, ಕಬ್ಬಾಳಿನಲ್ಲಿ ರಾಣಿ, ಕಾಡಳ್ಳಿಯಿಂದ ಪುಷ್ಪಲತಾ, ರಸ್ತೆ ಜಕ್ಕಸಂದ್ರದಿಂದ ಪುರುಷೋತ್ತಮ ಗೆದ್ದು ಬಂದಿದ್ದಾರಷ್ಟೇ.

ಅದೇರೀತಿ ಐದು ಜಿಲ್ಲಾ ಪಂಚಾಯತಿ ಕ್ಷೇತ್ರಗಳ

ಬಳ್ಳಾರಿಯ ರೆಡ್ಡಿ ಬ್ರದರ್ಸ್...!
ಕನಕಪುರದ ಡಿಕೆ ಬ್ರದರ್ಸ್...!!

ಸರಿಯಾದ ತನಿಖೆ ಅಂತ ಒಂದು ನಡೆದರೆ ಬಳ್ಳಾರಿ ರೆಡ್ಡಿಗಳನ್ನು ಮೀರಿಸುವಂತ ಅಕ್ರಮ ಗಣಿಗಾರಿಕೆ, ಸರ್ಕಾರಿ ಜಾಗಗಳ ಕಬಳಿಕೆ, ಪರವಾನಗಿಯಿಲ್ಲದ ಸಾಗಾಣಿಕೆಗಳು ಕನಕಪುರದಲ್ಲೂ ಪತ್ತೆಯಾಗುತ್ತವೆ.

ಅದು ಕಲ್ಲುಗಣಿಗೆ ಸಂಬಂಧಿಸಿರುವ ವಿಚಾರ.

ಇದರ ಪ್ರಧಾನ ಸೂತ್ರಧಾರರೇ ಡಿಕೆ ಶಿವಕುಮಾರ್ ಹಾಗೂ ಡಿಕೆ ಸೂರಿ!





ಬಳ್ಳಾರಿ ರೆಡ್ಡಿಗಳು ತಲೆಯ ಮೇಲೆ ಒಂದು ಸೂರೂ ಇರದೆ ಬೀದಿಯಲ್ಲಿ ಕೊಳೆಯುತ್ತಿದ್ದ ಕಾಲದಲ್ಲೇ ಅಂದರೆ ಈಗ್ಗೆ 20 ವರ್ಷಗಳ ಹಿಂದೆಯೇ ಡಿಕೆ ಸೋದರರು ಕನಕಪುರದಲ್ಲಿ ಅಪಾರ ಪ್ರಮಾಣದಲ್ಲಿರುವ ಗ್ರಾನೈಟ್ ಕಲ್ಲು ಗಣಿಗಾರಿಕೆಗೆ ಕೈ ಹಾಕಿದ್ದರು.

ಅವರ ಕಲ್ಲು ಕ್ವಾರೆ ಬ್ಯುಸಿನೆಸ್‌ನಲ್ಲಿ ಲೀಗಲ್ಲು ಇಲ್ಲೀಗಲ್ಲು, ಅಕ್ರಮ-ಸಕ್ರಮ ಸತ್ಯ-ಸುಳ್ಳು, ಬ್ಲಾಕ್‌ಮನಿ-ವೈಟ್‌ಮನಿ, ಅಸಲಿ-ನಕಲಿಗಳೆಲ್ಲಾ ಒಂದರೊಳಗೊಂದು ಸೇರಿಕೊಂಡಿವೆ. ಕನಕಪುರದಲ್ಲಿ ಈಗಲೂ ಡಿಕೆಗಳು ಕಸಬಾ, ಮರಳೆ ಕೋಟೆಕೊಪ್ಪ, ಕೆಬ್ಬಳ್ಳಿ ಮುಂತಾದೆಡೆ ದೊಡ್ಡ ದೊಡ್ಡ ಕಲ್ಲು ಕ್ವಾರೆಗಳನ್ನು ನಡೆಸುತ್ತಿದ್ದಾರೆ. ಕಳೆದ ಇಪ್ಪತ್ತು ವರ್ಷದಲ್ಲಿ ಇವರು ಕನಕಪುರದಿಂದ ಹೊರಗಡೆ ಸಾಗಿಸಿರುವ ಗ್ರಾನೈಟ್ ಶಿಲೆಗಳ ಬೆಲೆ ಒಂದು ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಎನ್ನಲಾಗಿದೆ. ಇಷ್ಟು ವರ್ಷಕಾಲ ಬಿಟ್ಟೂಬಿಡದೆ ಶಾಸಕರಾಗಿರುವ ಡಿಕೆಶಿ ತಾಲ್ಲೂಕಿನ ಸರ್ಕಾರಿ ಗೋಮಾಳ, ಅರಣ್ಯಭೂಮಿ ಹೀಗೆ ಗ್ರಾನೈಟ್ ಸಿಗುವ ಯಾವ ಜಾಗವನ್ನೂ ಬಿಡದೆ ಲೂಟಿ ನಡೆಸಿ ಧ್ವಂಸ ಮಾಡಿದ್ದಾನೆ.

ತಮಾಷೆ ಏನೆಂದರೆ ಅದೇ ಡಿಕೆ ಬಳ್ಳಾರಿ ಗಣಿ ರೆಡ್ಡಿಗಳ ವಿರುದ್ಧ ಪಾದಯಾತ್ರೆ ನಡೆಸಿ ತಾನೊಬ್ಬ ಮಹಾನ್ ಪ್ರಾಮಾಣಿಕನಂತೆ ಪೋಸು ಕೊಟ್ಟ. ಡಿಕೆಗಳ ಕಲ್ಲುಗಣಿ ದಂಧೆಯಲ್ಲಿ ಕೋಟ್ಯಂತರ ರೂ.ಗಳ ಉತ್ಪತ್ತಿಯಿದೆ. ಹಾಗಾಗಿ ಇವರ ಗಣಿದಂಧೆಯ ಹಿಂದೆ ಅನೇಕರಿದ್ದಾರೆ. ಪುರಸಭಾ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಸಿನಿಮಾ ನಿರ್ಮಾಪಕ ಶ್ರೀನಿವಾಸ್ ಅಲಿಯಾಸ್ ರಂಗುಬಡ್ಡಿ, ಡಿಕೆಯ ನೆಂಟರಾದ ಸೆವೆನ್ ಹಿಲ್ಸ್ ವಾಸು, ಎಂಎಲ್‌ಸಿ ರವಿ, ಇನ್ನೊಬ್ಬ ಸಿನಿಮಾ ನಿರ್ಮಾಪಕ ಕಾಂತರಾಜ್ ಇವರೆಲ್ಲ ಡಿಕೆಯ ಕಲ್ಲು ದಂಧೆಯ ಫಲಾನುಭವಿಗಳೂ ಹಾಗೂ ಕಾಂಗ್ರೆಸ್‌ನ ನಾಯಕರೂ ಆಗಿದ್ದಾರೆ. ವಿಪರ್ಯಾಸಕರ ಸಂಗತಿ ಏನೆಂದರೆ ತಾಲ್ಲೂಕಿನ ಹಿರಿಯ ರೈತ ಸಂಘದ ನಾಯಕ ಕೆ.ಬಿ.ನಾಗರಾಜ್‌ರ ಮಗ ದಿಲೀಪನೂ ಈಗ ಡಿಕೆಗಳ ಜೊತೆ ಸೇರಿ ಗ್ರಾನೈಟ್ ಕಲ್ಲು, ಮರಳು ಸಾಗಾಣಿಕೆ ದಂಧೆಯಲ್ಲಿ ಸೇರಿಕೊಂಡಿದ್ದಾನೆ. ಕನಕಪುರದಲ್ಲಿ ಡಿಕೆ ಸಂತತಿ ಬಿಟ್ಟು ಬೇರೆ ಯಾರೇ ಆಗಲಿ ಕಲ್ಲು ಕ್ವಾರಿ ಮಾಡಬೇಕೆಂದರೆ ಅಂತವರು ಸೂರಿಗೆ ಇಂತಿಷ್ಟೆಂದು ಕಪ್ಪ ಕಾಣಿಕೆ ಕೊಡಲೇಬೇಕು. ಇಲ್ಲದಿದ್ದರೆ ಏನಾದರೂ ತರಲೆ ತೆಗೆದು ಓಡಿಸುತ್ತಾರೆ. ಫಿಲ್ಟರ್ ಮಹಾದೇವನ ತರದ ಸ್ಥಳೀಯರೂ ಸ್ವತಂತ್ರವಾಗಿ ಕ್ವಾರೆ ನಡೆಸಲು ಹೋದಾಗ ಸೂರಿ ಏನೇನು ಕಿರುಕುಳ ಕೊಟ್ಟನೆಂದು ಕನಕಪುರದ ಜನ ಕತೆಗಳನ್ನೇ ಹೇಳುತ್ತಾರೆ.

ಡಿಕೆ ಬ್ರದರ್ಸ್‌ಗೆ ಕನಕಪುರ ಅಂದರೆ ಅವರ ಸ್ವಂತ ಪಾಳೆಯತಟ್ಟನಂತಾಗಿ ಹೋಗಿದೆ.

ರಾಜ್ಯ ಕಾಂಗ್ರೆಸ್ ನಾಯಕರು ದಿನಬೆಳಗಾದರೆ ಬಳ್ಳಾರಿ ರೆಡ್ಡಿಗಳು ಅಕ್ರಮ ಗಣಿಗಾರಿಕೆ ಬಗ್ಗೆ ಕೂಗಾಡುತ್ತಿದ್ದಾರೆ. ಆದರೆ ಅವರೊಮ್ಮೆ ಕನಕಪುರದ ಮೂಲೆಮೂಲೆಗಳಲ್ಲಿ ಡಿಕೆಗಳು ನಡೆಸುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆಯ ಬಗ್ಗೆ ತಿಳಿದುಕೊಂಡರೆ ಕಾಂಗ್ರೆ ನಾಯಕರ ಬಾಯಿ ಬಂದಾಗುವುದು ಖಚಿತ.

ಕೊಲೆಯಾದಳು ರಜನಿಯ ಅತ್ತಿಗೆ



ಈಗೊಂದು ಹದಿನೈದಿಪ್ಪತ್ತು ದಿನಗಳ ಹಿಂದೆ ರಾಜಗೋಪಾಲನಗರದಲ್ಲಿ ಗಿರಿಜಮ್ಮ ಎಂಬಾಕೆಯ ಕೊಲೆಯಾಗಿತ್ತು. ಗಿರಿಜಮ್ಮಳನ್ನು ಆಕೆಯ ಮಗಳು ಅನಿತಾ ಮತ್ತು ಆಕೆಯ ಪ್ರಿಯಕರ ನಂದಕುಮಾರ ಸೇರಿ ಮುಗಿಸಿಹಾಕಿದ್ದರು. ಆದರೆ ಅದು ರಹಸ್ಯವಾಗಿ ಉಳಿಯಲಿಲ್ಲ. ಈ ವಿಚಾರ ಇನ್ಸ್‌ಪೆಕ್ಟರ್ ಪೂರ್ಣಚಂದ್ರ ತೇಜಸ್ವಿಯವರಿಗೆ ಗೊತ್ತಾಗಿದ್ದೇ ಅನಿತಾ ಮತ್ತು ನಂದಕುಮಾರನನ್ನು ಅರೆಸ್ಟ್ ಮಾಡಿ ಜೈಲಿಗಟ್ಟಿದರು.



ಆದರೆ ಕೊಲೆಯಾದ ಗಿರಿಜಮ್ಮಳ ಹಿಂದೆ ಇನ್ನೊಂದು ಕುತೂಹಲಕಾರಿ ವಿಚಾರವಿದೆ. ಅದೇನೆಂದರೆ ಈಕೆ ಭಾರತದ ಸೂಪರ್‌ಸ್ಟಾರ್ ರಜನಿಕಾಂತ್‌ಗೆ ಒಂದು ರೀತಿಯಲ್ಲಿ ಅತ್ತಿಗೆ ಆಗಬೇಕು.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಣ್ಣ ಹಳ್ಳಿಯಿಂದ ಬೆಂಗಳೂರು ಸೇರಿದ ಗಿರಿಜಮ್ಮ ಸಿನಿಮಾ ನಟಿಯಾಗಬೇಕು ಎಂಬ ಹುಚ್ಚು ಹತ್ತಿಸಿಕೊಂಡಿದ್ದಳು. ಆದರೆ ಗಿರಿಜಮ್ಮ ಒಂದಷ್ಟು ಆರ್ಕೆಸ್ಟ್ರಾಗಳಲ್ಲಿ ಡ್ಯಾನ್ಸ್ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಳು. ಆನಂತರ ಗಿರಿಜಮ್ಮ ಮದ್ರಾಸಿಗೆ ಬಸ್‌ಹತ್ತಿದ್ದಳು. ಮದ್ರಾಸಿನಲ್ಲಿ ಸಿಕ್ಕ ಸಿಕ್ಕ ಸ್ಟುಡಿಯೋಗಳ ಮುಂದೆ ಉರುಳು ಸೇವೆ ಮಾಡಿದರೂ ಒಂದೇಒಂದು ಛಾನ್ಸೂ ಗಿರಿಜಮ್ಮನಿಗೆ ಸಿಕ್ಕಿರಲಿಲ್ಲ. ಕಡೆಗೆ ರಜನಿಕಾಂತ್ ಮನೆ ಬಾಗಿಲಲ್ಲಿ ನಿಂತು ಛಾನ್ಸ್ ಕೇಳಲು ಶುರುಮಾಡಿದಳು. ಗಿರಿಜಮ್ಮ ಕನ್ನಡ ಮಾತಾಡುತ್ತಿದ್ದ ವಿಷಯ ರಜನಿಗೆ ಗೊತ್ತಾಗಿ ಆಕೆಗೆ ಅವಕಾಶ ನೀಡೇಬಿಟ್ಟರು. ಆದರೆ ಸಿನಿಮಾದಲ್ಲಲ್ಲ, ಅವರ ಮನೆಯಲ್ಲಿ ಕಸ ಮುಸುರೆ ತೊಳೆಯುವ ಕೆಲಸ.

ಗಿರಿಜಮ್ಮನಿಗೇ ಮೂರು ಹೊತ್ತು ಊಟ, ಮಾಡಲು ಕೆಲಸವೇನೋ ಸಿಕ್ಕಿತ್ತು. ಸೂಪರ್ ಸ್ಟಾರ್ ಮನೆಯ ಕೆಲಸವಾದರೂ ಸುಪ್ಪತ್ತಿಗೆಯಾಗೇ ಇತ್ತು. ಆಗ ಬೆಂಗಳೂರಿನಿಂದ ರಜನಿಯ ದೊಡ್ಡಪ್ಪನ ಮಗ ಕಮಲನಾಥ್ ಎಂಬಾತ ತಿಂಗಳಿಗೊಮ್ಮೆ, ಹದಿನೈದು ದಿನಕ್ಕೆ ರಜನಿ ಮನೆಗೆ ಹೋಗಿಬರುತ್ತಿದ್ದ. ಬೆಂಗಳೂರಿನಲ್ಲಿ ಆತ ಕೂಡಾ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕಂಡಕ್ಟರ್ ಆಗಿದ್ದರಿಂದ ರಜನಿಗೆ ಆತನ ಮೇಲೊಂದಿಷ್ಟು ಒಲವಿತ್ತು. ಸಹಜವಾಗಿಯೇ ರಜನಿಗೆ ವಾರಿಗೆಯಲ್ಲಿ ಅಣ್ಣನಾದ ಕಮಲನಾಥನಿಗೆ ಗಿರಿಜೆಯ ಪರಿಚಯವಾಯ್ತು. ಪರಿಚಯ ಪ್ರಣಯಕ್ಕೆ ತಿರುಗಿತು. ಆದರೆ ಕಮಲನಾಥನಿಗೆ ಅದಾಗಲೇ ಬೆಂಗಳೂರಿನಲ್ಲಿ ಹೆಂಡತಿ ಮಕ್ಕಳು ಇದ್ದರು. ಕಮಲನಾಥ್ ತಮ್ಮ ಮನೆ ಕೆಲಸದಾಕೆಯ ಸೆರಗು ಹಿಡಿದ ವಿಚಾರ ತುಂಬಾ ದಿನ ಗುಟ್ಟಾಗೇನೂ ಉಳಿಯದೆ ರಜನಿ ಕಿವಿಗೆ ಬಿದ್ದಿದ್ದೇ ಕಮಲನಾಥನಿಗೆ ಯಕ್ಕಾಮಕ್ಕಾ ಉಗಿದರು. ಆದರೂ ಗಿರಿಜೆಯ ಅಮಲಲ್ಲಿದ್ದ ಕಮಲು ಆಕೆಯನ್ನು ರಜನಿ ಮನೆಯಿಂದ ಕರೆದೊಯ್ದು ಮದುವೆಯಾಗಿ ಚೆನ್ನೈನಲ್ಲೇ ಸಣ್ಣದೊಂದು ಮನೆ ಮಾಡಿಟ್ಟು ಕಳ್ಳಸಂಸಾರ ಶುರುಮಾಡಿಕೊಂಡ. ಈ ನಡುವೆ ಗಿರಿಜಮ್ಮ ಒಂದು ಹೆಣ್ಣುಮಗುವಿಗೆ ತಾಯಿಯಾದಳು. ಆವೇಲಾವೇಲೆ ಕಮಲನಾಥ ಮತ್ತು ಗಿರಿಜಮ್ಮನ ಸಂಬಂಧ ಹಳಸಲು ಶುರುವಾಯಿತು.

ಮದ್ರಾಸಿನಿಂದ ಬೆಂಗಳೂರಿಗೆ ಬಂದು ನೆಲೆಸಿದ ಗಿರಿಜ ಆಗಾಗ್ಗೆ ಸಿಂಗಾಪುರಕ್ಕೊಂದು ಹೋಗಲು ಶುರು ಮಾಡಿದಳು. ಅಲ್ಲಿ ಸಿಗುವ ಬೆಳೆಬಾಳುವ ವಸ್ತುಗಳನ್ನು ತಂದು ಬೆಂಗಳೂರಿನಲ್ಲಿ ಮಾರುವ ಕಸುಬು ಆರಂಭಿಸಿದಳು. ಅದೇ ಹೊತ್ತಿಗೆ ಲಕ್ಷ್ಮಿನಾರಾಯಣಪುರದಲ್ಲಿ ವೀರರಾಜು ಎಂಬಾತನೊಂದಿಗೆ ಗಿರಿಜೆಗೆ ಸ್ನೇಹ ಕುದುರಿತು. ಈ ವೀರರಾಜು ಬೇರೆ ಯಾರೂ ಅಲ್ಲ, ಡಾ. ರಾಜ್‌ಕುಮಾರ್ ಸೇರಿದಂತೆ ಖ್ಯಾತ ನಟರಿಗೆ ಬಟ್ಟೆ ಹೊಲಿದುಕೊಡುತ್ತಿದ್ದ ಫೇಮಸ್ ಟೈಲರ್. ಯಾವಾಗ ಟೈಲರ್ ವೀರರಾಜು ಜೊತೆ ಗಿರಿಜೆ ಗೆಳೆತನ ಆರಂಭಿಸಿದ್ಲೋ ಎಂದು ಗೊತ್ತಾಯಿತೋ




ರಜನಿಯ ಅಣ್ಣ ಕಮಲನಾಥ್ ಸಂಪೂರ್ಣವಾಗಿ ಆಕೆಯನ್ನು ತೊರೆದು ಕನಕಪುರ ಬಳಿ ಇರುವ ತನ್ನ ಊರಾದ ಗೊಲ್ಲರದೊಡ್ಡಿ ಸೇರಿಬಿಟ್ಟ. ರಜನಿಕಾಂತ್ ಸಹಾ ಇನ್ಯಾವತ್ತಿಗೂ ಈತನನ್ನು ಮನೆಯೊಳಕ್ಕೆ ಬಿಟ್ಟುಕೊಳ್ಳಲಿಲ್ಲ. ಕಮಲನಾಥ್ ಹೀಗೆ ತಿರುಬೋಕಿ ಕೆಲಸ ಮಾಡಿದ್ದಕ್ಕೋ ಏನೋ ರಜನಿ ಇವತ್ತಿಗೂ ತನ್ನ ಅಣ್ಣ ಸತ್ಯನಾರಾಯಣ ಅವರನ್ನು ಬಿಟ್ಟು ಕುಟುಂಬದ ಬೇರೆ ಯಾರನ್ನೂ ಹೆಚ್ಚು





ವೀರರಾಜು



ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ತಮ್ಮ ಸೂಪರ್‌ಸ್ಟಾರ್ ಆಗಿದ್ದರೂ ಬಿಬಿಎಂಪಿ ಗ್ಯಾಂಗ್‌ಮನ್ ಕೆಲಸ ಮುಂದುವರೆಸಿದವರು ಸತ್ಯನಾರಾಯಣ ಇವತ್ತಿಗೂ ರಜನಿ ಅವರ ಅಕ್ಕನ ಮಗ ನಾರಾಯಣ್‌ರಾವ್ ಹನುಮಂತನಗರದಲ್ಲಿ ಸಣ್ಣದೊಂದು ಸ್ಕೂಟರ್ ವರ್ಕ್‌ಶಾಪ್ ನಡೆಸಿಕೊಂಡು ಪೈಸ್ಟೈ ಮಸಿ ಮಾಡಿಕೊಂಡು ನಿಯತ್ತಿನಿಂದ ಬದುಕುತ್ತಿದ್ದಾರೆ. ರಜನಿಯ ಮತ್ತೊಬ್ಬ ಕಿರಿಯಣ್ಣ ಸತ್ತರೂ ಅವರ ಫ್ಯಾಮಿಲಿ ಕಡೆ ರಜನಿ ಅಷ್ಟೇನೂ ಗಮನಕೊಟ್ಟಿಲ್ಲ.

ಇತ್ತ ಗಿರಿಜಮ್ಮ ಸಿಂಗಾಪೂರ್ ವ್ಯಾಪಾರದೊಂದಿಗೆ ಬೇರೆ ಬೇರೆ ಕಸುಬನ್ನೂ ಶುರುಹಚ್ಚಿಕೊಂಡು ಭರ್ಜರಿ ಸಂಪಾದನೆಗಿಳಿದಳು. ಬಸವೇಶ್ವರನಗರದಲ್ಲಿ ಸ್ವಂತಕ್ಕೊಂದು ಮನೆಯನ್ನೂ ನಿರ್ಮಿಸಿಕೊಂಡ ಗಿರಿಜಾ ತನ್ನ ಮಗಳು ಅನಿತಾಳನ್ನೂ ತನ್ನದೇ ದಾರಿಗೆ ಎಳೆದುಕೊಂಡಿದ್ದಳು.

ಕಮಲನಾಥನ ಮಗಳು ಅನಿತಾಳಿಗೆ ಸಿನಿಮಾದಲ್ಲಿ ಅವಕಾಶ ಕೊಡಿಸುತ್ತೇನೆ ಎಂದು ಟೈಲರ್ ವೀರರಾಜು ಗಿರಿಜೆಯ ತಲೆ ಸವರಿದ. ಎಲ್ಲೋ ಒಂದೆರಡು ಸಿನಿಮಾಗಳಲ್ಲಿ ಜೂನಿಯರ್ ಆರ್ಟಿಸ್ಟ್‌ಥರದ ಛಾನ್ಸು ಕೊಡಿಸಿದನಾದರೂ ಅದರಿಂದ ಗಿರಿಜಮ್ಮನಿಗೆ ತೃಪ್ತಿಯಾಗಲೇ ಇಲ್ಲ. ಈ ಕಾರಣಕ್ಕೇ ವೀರರಾಜುವಿನೊಂದಿಗೂ ಜಗಳ ಮಾಡಿಕೊಂಡ ಗಿರಿಜಮ್ಮ ಆತನಿಗೂ ತಲಾಕ್ ನೀಡಿಬಿಟ್ಟಳು.

ತಾನಂತೂ ಸಿನಿಮಾ ನಟಿಯಾಗಲು ಸಾಧ್ಯವಾಗಲಿಲ್ಲ, ನನ್ನ ಮಗಳಾದರೂ ಹೀರೋಯಿನ್ನಾಗಲಿ ಎಂದು ಸ್ವತಃ ಸಿನಿಮಾ ನಿರ್ಮಾಣಕ್ಕೂ ಇಳಿದ ಗಿರಿಜಮ್ಮ ಕೆಲ ವರ್ಷಗಳ ಹಿಂದೆ ಶಿವು ಘೋರ್ಪಡೆ ಎಂಬ ನಿರ್ದೇಶಕನನ್ನು ಹಾಕಿಕೊಂಡು ತನ್ನ ಮಗಳನ್ನು ಹೀರೋಯಿನ್ನಾಗಿಸೇಬಿಟ್ಟಳು. ಸಿನಿಮಾವೇನೋ ಮುಕ್ತಾಯವಾಯ್ತು. ಆದರದು ಬ್ಲೂ ಫಿಲಂ ರೇಂಜಿಗೆ ಗಬ್ಬೆದ್ದಿತ್ತು.

ಸಿನಿಮಾ ಮಾಡಲು ಹೋಗಿ ದುಡ್ಡು ಕಳೆದುಕೊಂಡ ಗಿರಿಜಮ್ಮ ಮತ್ತೆ ತನ್ನ ಹಳೇ ಕಸುಬಿಗೇ ಮರಳಿದಳು. ಮಗಳೂ ಜೊತೆಗೇ ಇದ್ದಳು. ಈ ನಡುವೆ ನಂದಕುಮಾರ್ ಎಂಬಾತನೊಂದಿಗೆ ಮಗಳು ಅನಿತಾಳ ಪ್ರೀತಿ, ಪ್ರೇಮ, ಪ್ರಣಯ ಆರಂಭವಾಗಿತ್ತು. ಈ ವಿಚಾರ ಗಿರಿಜಮ್ಮನಿಗೆ ಗೊತ್ತಾಗಿದ್ದೇ ಸಿಕ್ಕಾಪಟ್ಟೆ ರಂಪ ಮಾಡಿ ನಂದಕುಮಾರನಿಗೆ ಧಮಕಿ ಹಾಕಿಸಿದ್ದಳು.

ಆದರೆ ಗಿರಿಜಮ್ಮಳ ಯಾವ ಬೆದರಿಕೆಗೂ ಜಗ್ಗದ ನಂದಕುಮಾರ ಕೊನೆಗೆ ಆಕೆಯ ಮಗಳು ಅನಿತಾಳನ್ನೇ ಬಳಸಿಕೊಂಡು ಗಿರಿಜಮ್ಮಳನ್ನು ಮುಗಿಸಿಬಿಟ್ಟ.

ಹೆತ್ತ ಮಗಳೇ ತಾಯಿಯನ್ನು ಕೊಂದು ಜೈಲು ಸೇರಿದ್ದಾಳೆ. ಗಿರಿಜ ಹತ್ತಾರು ವರ್ಷ ದೇಹ ದಂಡಿಸಿ ಗಳಿಸಿದ ಆಸ್ತಿ ಇವತ್ತು ಕರಗಿಹೋಗಿದೆ. ರಜನಿಯೇನೋ ಸೂಪರ್‌ಸ್ಟಾರ್ ಆಗಿ ಯಶಸ್ವಿ ಬದುಕನ್ನು ಬದುಕುತ್ತಿದ್ದಾರೆ. ಆದರೆ ರಜನಿಯ ನೆರಳಲ್ಲೇ ಇದ್ದ ಗಿರಿಜಾ ಸಿನಿಮಾ ವ್ಯಾಮೋಹಕ್ಕೇ ಬಿದ್ದು ನಾನಾ ಪರಿಪಾಟಲು ಅನುಭವಿಸಿ ಕೊನೆಗೆ ತನ್ನ ಮಗಳು ಮತ್ತು ಆಕೆಯ ಪ್ರಿಯಕರನ ಕೈಲೇ ಪ್ರಾಣಕಳೆದುಕೊಳ್ಳುವಂತಾಗಿದೆ.


ಸಿನಿಮಾ ಲೋಕದೊಳಗಿನ ಎಲ್ಲರ ಜೀವನವೂ ವರ್ಣರಂಜಿತವಾಗಿರುವುದಿಲ್ಲ ಅಲ್ಲವೆ....

• ಅರುಣ್

...ಕೆ ದಳದಿಂದ ಸಾತನೂರು ಕ್ಷೇತ್ರದ ಗೌರಮ್ಮ ಒಬ್ಬರೇ ಗೆದ್ದಿರುವುದು.
...ಲೆಕ್ಕದಲ್ಲಿ ಅಸೆಂಬ್ಲಿ ಎಲೆಕ್ಷನ್ ಆದ ನಂತರವೂ ಡಿಕೆ ಕೋಟೆ
...ರ್ಬಲಗೊಳ್ಳದೆ ಇನ್ನಷ್ಟು ಬಲಿಷ್ಠಗೊಂಡಿದೆ. ಹೀಗಿದ್ದಾಗಲೂ ಡಿಕೆ
...ೋದರರಿಗೆ ಅದ್ಯಾತರದ್ದೋ ಭಯ. ತಮ್ಮ ಕೋಟೆ ಕೆಡವಲು
...ರು ನುಗ್ಗಿ ಬರುತ್ತಾರೋ ಎನ್ನುವ ಭೀತಿ ಅವರಿಗೆ. ಹಾಗಾಗಿ ತಲೆ
...ತ್ತುವ ಹೊಸ ವಿರೋಧಿ ನಾಯಕರನ್ನು ರಾಜಕೀಯವಾಗಿ ಮುಗಿಸಲು
...ರು ಪ್ಲಾನ್ ನಡೆಯುತ್ತಲೇ ಇರುತ್ತದೆ. ಹಾಲಿ ದಳದ ಬಾಲನರಸಿಂಹನ
...ಧನವೂ ಆ ರೀತಿಯ ಪಿತೂರಿಯ ಭಾಗವೇ ಇರುವಂತಿದೆ.
ಕನಕಪುರದ ಮಾಜಿ ಶಾಸಕ ಸಿಂಧ್ಯಾ ಈಗ ದಳದಲ್ಲಿರುವುದು
...ೆಶಿಯ ಭೀತಿ ಹೆಚ್ಚಿಸುತ್ತಿದೆ. ಹಾಗೆ ನೋಡಿದರೆ ಸಿಂಧ್ಯಾ
...ಾಡಬೇಕಾದಷ್ಟು ಓಡಾಡುತ್ತಾ ಕೆಲಸ ಮಾಡುತ್ತಿಲ್ಲ. ಪದೇಪದೆ
...ಕಪುರಕ್ಕೆ ಬಂದು ಹೋಗುವಷ್ಟು ವ್ಯವಧಾನ ಕುಮಾರಸ್ವಾಮಿಗೂ
...ದ್ದಂತಿಲ್ಲ. ಇದರಿಂದಾಗಿ ಈಗ ಕನಕಪುರದಲ್ಲಿ ಡಿಕೆ ಬ್ರದರ್ಸ್‌ನ ಅರ್ಭಟಕ್ಕೆ
...ವಾಣ ಹಾಕುವವರೇ ಇಲ್ಲದಂತಾಗಿದೆ.
ಬಾಲನರಸಿಂಹನ ಅರೆಸ್ಟ್ ಆದನಂತರ ಹೇರಂದ್ಯಾಪನಹಳ್ಳಿಯ
...ನ ಕಲ್ಲು ಕ್ವಾರಿಗೆ ಹಾಗೂ ಕನಕಪುರ ಟೌನಿನಲ್ಲಿರುವ ಶಾಪಿಂಗ್
...ಪ್ಲೆಕ್ಸ್‌ಗೆ ಕಾಂಗ್ರೆಸ್ ಗೂಂಡಾಗಳು ನುಗ್ಗಿ ಕಲ್ಲು ಹೊಡೆದು ಜಖಂ
...ಾಡಿದ್ದಾರೆ. ತಾಲ್ಲೂಕಿನ ಬೇರೆ ಬೇರೆ ಕಡೆ ದಳದ ಕಾರ್ಯಕರ್ತರ
...ೇಲೆ ಡಿಕೆಗಳು ಹಲ್ಲೆ ದೌರ್ಜನ್ಯವನ್ನು ಮಾಡಿಸುತ್ತಿದ್ದಾರೆ. ವಿನಾಕಾರಣ
...ಿದ್‌ಗೆ ಕರೆನೀಡಿ ಜನರಿಗೆ ಕಿರುಕುಳವನ್ನು ಕೊಟ್ಟಿದ್ದಾರೆ.
ಇಷ್ಟು ವರ್ಷದ ರಾಜಕೀಯ ಜೀವನದಲ್ಲಿ ಡಿಕೆಶಿ ಮಾಗಿದ್ದಾರೆ.
...ಯಮ ಕಲಿತಿದ್ದಾರೆ ಎಂಬುದೆಲ್ಲಾ ಸುಳ್ಳು ಎನ್ನುವುದು ಈಗ
...ತ್ತಾಗುತ್ತಿದೆ.
ಗೂಂಡಾಗಳಂತೆ ವರ್ತಿಸುತ್ತಿರುವ ಡಿಕೆ ಸೋದರರಿಂದ ಕಾಂಗ್ರೆಸ್‌ನ
...ನ ಮರ್ಯಾದೆಗಳೆಲ್ಲ ಹರಾಜಾಗುವ ದಿನ ದೂರ ಇದ್ದಂತಿಲ್ಲ.

ಕನಕಪುರದ ಪೊಲೀಸರು ಹನ್ನೆರಡಾಣೆ ಕಾಂಗ್ರೆಸ್ ನಾಲ್ಕಾಣೆ ಮಾತ್ರ ಪೊಲೀಸ್


ಕನಕಪುರದ ಸರ್ಕಾರಿ ಯಂತ್ರಾಂಗವನ್ನು ಹೋಲ್‌ಸೇಲಾಗಿ ತಮ್ಮ ಅಧಿಕಾರ ಹಾಗೂ ಉದ್ಯಮ ಸಾಮ್ರಾಜ್ಯದ ಸೇವೆಗೆ ಬಳಸಿಕೊಳ್ಳುತ್ತಿರುವ ಡಿಕೆ ಬ್ರದರ್ಸ್ ಅಲ್ಲಿನ ಪೊಲೀಸರನ್ನೂ ಬಿಟ್ಟಿಲ್ಲ.



ದಾಳಿಗೀಡಾದ ಕಾಂಪ್ಲೆಕ್ಸ್....

ಕನಕಪುರ ಪೊಲೀಸರಿಗೆ ಕಾಯ್ದೆ ಕಾನೂನಿನ ಪ್ರಕಾರ ಡ್ಯೂಟಿ ಮಾಡುವುದಕ್ಕಿಂತ ಡಿಕೆ ಸೋದರರ ಪಾದಸೇವೆಯೇ ಮುಖ್ಯ ಡ್ಯೂಟಿಯಾಗಿಬಿಟ್ಟಿದೆ. ಸರ್ಕಲ್ ಇನ್ಸ್‌ಪೆಕ್ಟರ್ ಮಂಜುನಾಥ್ ಹಾಗೂ ಕೋಡಿಹಳ್ಳಿ ಸಬ್‌ಇನ್ಸ್‌ಪೆಕ್ಟರ್ ಮೋಹನ್ ರೆಡ್ಡಿಗಳ ವರ್ತನೆಗಳೇ ಇದಕ್ಕೆ ಸಾಕ್ಷಿಯಾಗಿದೆ.

ಜೂನ್ 10ರಂದು ಬಾಲನರಸಿಂಹನ ಅರೆಸ್ಟ್ ಆದ ನಂತರ ಡಿಕೆ ಕಡೆಯ ಒಂದು ಡಜನ್ ಪುಂಡರು ಟಾಟಾ ಸುಮೋಗಳಲ್ಲಿ ಜೂನ್ 12ರ ರಾತ್ರಿ ಹೇರಂದ್ಯಾಪನಹಳ್ಳಿಯ ಬಾಲನರಸಿಂಹನ ಕಲ್ಲುಕ್ವಾರೆಗೆ ದಾಳಿ ಮಾಡಿದರು. ಅಲ್ಲಿದ್ದ ಕೆಲಸಗಾರರಿಗೆ ಲಾಂಗು-ಮಚ್ಚು ತೋರಿಸಿ ಬೆದರಿಸಿ ದಾಂಧಲೆ ಎಬ್ಬಿಸಿಬಿಟ್ಟರು. ಸಾಗಾಣಿಕೆಗೆ ರೆಡಿಯಾಗಿದ್ದ ಗ್ರಾನೈಟ್ ಬ್ಲಾಕ್‌ಗಳನ್ನು ಬಾಲನರಸಿಂಹನ ಜೆಸಿಬಿ ಬಳಸಿಯೇ ತಳ್ಳಿ ಪುಡಿಗಟ್ಟಿದ್ದಾರೆ. ಅದೇ ದಿನ ರಾತ್ರಿ ಕನಕಪುರ ಟೌನಿನ ಕೆಎಸ್‌ಎಸ್ ಸರ್ಕಲ್‌ನಲ್ಲಿರುವ ಬಾಲನರಸಿಂಹನ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಕಾಂಗೈ ಪುಂಡರು ಕಲ್ಲು ತೂರಿ ಗಾಜುಗಳನ್ನು ಒಡೆದುಹಾಕಿದರು. ಪೊಲೀಸ್ ಸ್ಟೇಷನ್‌ನಿಂದ ಕೇವಲ ಒಂದು ಫರ್ಲಾಂಗ್ ದೂರದಲ್ಲಿ ಈ ದಾಂದಲೆ ನಡೆದರೂ ಒಬ್ಬ ಪೊಲೀಸರೂ ಅತ್ತ ಕಾಲಿಡಲಿಲ್ಲ. ಅದೇ ಕಾಂಪ್ಲೆಕ್ಸ್‌ನಲ್ಲಿ ಇಂಡಿಯನ್ ಬ್ಯಾಂಕ್ ಶಾಖೆಯೂ ಇದ್ದು ಬ್ಯಾಂಕಿನ ಸಿಸಿಟಿವಿಯಲ್ಲಿ ದಾಳಿಕೋರರ ಓಡಾಟಗಳೆಲ್ಲ ದಾಖಲಾಗಿವೆ. ಆದರೂ ಇನ್ಸ್‌ಪೆಕ್ಟರ್ ಮಂಜುನಾಥ್ ಇದುವರೆಗೂ ಯಾರನ್ನೂ ಬಂಧಿಸಿಲ್ಲ.




ಬಾಲನರಸಿಂಹ

ಇವರು ಕಾಂಗ್ರೆಸ್ ಪೊಲೀಸರು ಎನ್ನಲು ಇನ್ನೇನು ಬೇಕು?


ಇದಿಷ್ಟೇ ಅಲ್ಲದೆ ತಾಲ್ಲೂಕಿನ ಎಲ್ಲೇ ಆಗಲಿ ಕಾಂಗೈಗಳು ದಳದವರ ಮೇಲೆ ಏನೇ ದಾಳಿ ದೌರ್ಜನ್ಯ ನಡೆಸಿದರೂ ಪೊಲೀಸರು ಕಾಂಗ್ರೆಸ್ ಪರವೇ ನಿಲ್ಲುತ್ತಾರೆ. ಈಗೊಂದು ತಿಂಗಳ ಹಿಂದೆ ಆಲಗಡಕಲು ಗ್ರಾಮದ ಕಾಂಗ್ರೆಸ್‌ನ ಕೆಂಚೇರೇಗೌಡ ದಳದವನಿಗೆ ಮಚ್ಚಿನಲ್ಲಿ ಹೊಡೆದ. ಆದರೆ ಕೋಡಿಹಳ್ಳಿ ಠಾಣಾ ಸಬ್ ಇನ್ಸ್‌ಪೆಕ್ಟರ್ ದಳದವರ ಕಂಪ್ಲೇಂಟ್ ಅನ್ನೇ ತೆಗೆದುಕೊಳ್ಳಲಿಲ್ಲ. ಬ್ಯಾಲದಮರದ ದೊಡ್ಡಿಯಲ್ಲಿ ದಳ-ಕಾಂಗೈಗಳ ಜಗಳವಾದಾಗಲೂ ಕಾಂಗ್ರೆಸ್‌ನವರ ದೂರು ಪಡೆದ ಮೋಹನ್ ರೆಡ್ಡಿ ದಳದವರ ದೂರನ್ನು ನಿರ್ಲಕ್ಷಿಸಿಬಿಟ್ಟ.

ಇದನ್ನೆಲ್ಲ ನೋಡುತ್ತಿದ್ದರೆ ಕನಕಪುರ ಪೊಲೀಸರಿಗೆ ಸಂಬಳ ಕೊಡುತ್ತಿರುವುದು ಡಿಕೆನೋ ಅಥವಾ ಸರ್ಕಾರವೋ ಅನ್ನುವ ಅನುಮಾನ ಬರುತ್ತದೆ.

ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಈ ಬಗ್ಗೆ ಈಗಲೇ ಗಮನಹರಿಸದೇ ಹೋದರೆ ಕನಕಪುರ ಪೊಲೀಸರ ವಿರುದ್ಧ ಜನ ಬಹಿರಂಗ ಪ್ರತಿಭಟನೆಗೆ ಇಳಿಯುವ ದಿನ ದೂರವಿರುವಂತಿಲ್ಲ ಎನಿಸುತ್ತದೆ.



ಹುಣಸೂರು ಪರಿಚಿತರಿಗೇ ಬಲಿಯಾದರೆ?





ಕೆರುಳು ಕಿವುಚುವಂಥ ಸಂಕಟ ಮತ್ತು ಅದಕ್ಕೆ ಕಾರಣರಾದ ಪಾಪಿಗಳ್ಯಾರೆಂಬ ಆಕ್ರೋಶಭರಿತ ಕುತೂಹಲ ಹುಣಸೂರು-ಮೈಸೂರು ಸೀಮೆಯಲ್ಲಿ ಮನೆಮಾಡಿದೆ. ಇದಕ್ಕೆಲ್ಲ ಕಾರಣವಾಗಿರುವುದು ಸಭ್ಯ ವಿದ್ಯಾರ್ಥಿಗಳಿಬ್ಬರ ಅಪಹರಣ ಮತ್ತು ಭೀಕರ ಹತ್ಯೆ. ಹಂತಕರ ನಡೆ ಅದೆಷ್ಟು ಜಾಗರೂಕವಾಗಿದೆಯೆಂದರೆ ತನಿಖೆಗಿಳಿದ ಪೊಲೀಸರೇ ಚಿಕ್ಕದೊಂದು ಸುಳಿವು ಸಿಗದೆ ತಬ್ಬಿಬ್ಬುಗೊಂಡಿದ್ದಾರೆ. ಈ ನಡುವೆಯೇ ಎಗ್ಗಿಲ್ಲದೆ ಹರಿದಾಡುತ್ತಿರುವ ಊಹಾಪೋಹಗಳು, ಗುಮಾನಿಗಳು ಈ ಪ್ರಕರಣವನ್ನು ಮತ್ತಷ್ಟು ಕಗ್ಗಂಟಾಗಿಸಿವೆ.

ಹುಣಸೂರಿನ ಸಿಮೆಂಟ್ ವ್ಯಾಪಾರಿ ಮೋಹನ್ ಕುಮಾರ್ ಪುತ್ರ ಸುಧೀಂದ್ರ ಮತ್ತು ಟ್ರೇಡರ್ಸ್ ಮಾಲೀಕ ಶ್ರೀನಾಥ್ ಮಗ ವಿಘ್ನೇಶ್. ತಪ್ಪೇ ಮಾಡದೆ ದಾರುಣ ಅಂತ್ಯಕಂಡವರು. ಸುಧೀಂದ್ರ ಮತ್ತು ವಿಘ್ನೇಶ್ ಮೊದಲಿನಿಂದಲೂ ಗೆಳೆಯರು. ಮೈಸೂರಿನ ಜಯಲಕ್ಷ್ಮಿಪುರದ ಮಹಾಜನ್ ಕಾಲೇಜಿನಲ್ಲಿ ಬಿಬಿಎಂ ವ್ಯಾಸಂಗ ಮಾಡುತ್ತಿದ್ದರು. ದಿನವೂ ಜೊತೆಗೆ ಹುಣ ಸೂರಿನಿಂದ ಬಸ್ಸಿನಲ್ಲಿ ಹೋಗಿಬರುವುದು ರೂಢಿ. ವಿಘ್ನೇಶ್ ಮಾತ್ರ ಕೆಲವೊಮ್ಮೆ ಕಾಲೇಜು ಪಕ್ಕದಲ್ಲೇ ಇರುವ ಚಿಕ್ಕಮ್ಮನ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದ. ಆದರೆ ಮೊನ್ನೆ ಬುಧವಾರ ಮೊದಲ ಬಾರಿ ಈ ಗೆಳೆಯರ ದಿನಚರಿ ಬದಲಾಗಿ ಹೋಗಿತ್ತು.




ಮುತ್ತುಸ್ವಾಮಿ

ಬುಧವಾರ ಸುಧೀಂದ್ರ ಹಾಗೂ ವಿಘ್ನೇಶ್ ಇಬ್ಬರಿಗೂ ಪರೀಕ್ಷೆಯಿತ್ತು. ಅಂದು ಬೆಳಗ್ಗಿನಿಂದಲೇ ಮೈಸೂರಿಗೆ ಆನೆಗಳ ಹಿಂಡು ದಾಂಗುಡಿಯಿಟ್ಟು ದಾಂಧಲೆ ನಡೆಸುತ್ತಿದ್ದುದರಿಂದ ಪೋಷಕರು ಮೊಬೈಲ್ ಮೂಲಕ ತಕ್ಷಣ ಹೊರಟು ಬರುವಂತೆ ಸೂಚಿಸಿದ್ದರು. ಇತ್ತ ಅರಮನೆ ನಗರಿ ಆನೆಗಳ ದಾಳಿಯಿಂದ ಕಂಗಾಲಾಗಿದ್ದರೆ, ಅತ್ತ ಹುಣಸೂರಿನ ಆ ಎರಡು ಕುಟುಂಬಗಳು ತಂತಮ್ಮ ಮಕ್ಕಳ ಬರುವಿಕೆಗಾಗಿ ಕಾದು ಕೂತಿದ್ದರು. ಮಧ್ಯಾಹ್ನ ಕಳೆದು ಸಂಜೆ ಹತ್ತಿರವಾದರೂ ವಿಘ್ನೇಶ್ -ಸುಧೀಂದ್ರರ ಪತ್ತೆಯಿರಲಿಲ್ಲ. ಕತ್ತಲು ಕವಿಯುವ ಹೊತ್ತಿಗೆ ಇಬ್ಬರ ಮೊಬೈಲ್‌ಗಳು ಸ್ವಿಚ್‌ಆಫ್ ಆಗಿದ್ದರಿಂದ ಕಂಗಾಲಾದ ಸುಧೀಂದ್ರನ ತಂದೆ ಪರಿಸ್ಥಿತಿ ಕೈಮೀರುತ್ತಿರುವುದನ್ನು ಮನಗಂಡು ಎಸ್ಪಿ ಕಚೇರಿಗೆ ತೆರಳಿ ದೂರು ನೀಡಿದರು. ತದನಂತರ ಎಸ್ಪಿ ಹಮೀದ್ ಕರ್ಬೀಕರ ನಿರ್ದೇಶನದ ಮೇರೆಗೆ ಹುಣಸೂರು ಠಾಣೆಯಲ್ಲೂ ದೂರು ದಾಖಲಿಸಿದರು.

ಹುಣಸೂರಿನ ಪೊಲೀಸರು ಬಹುಶಃ ಇದನ್ನೊಂದು ಮಾಮೂಲಿ ಕೇಸೆಂದು ಪರಿಗಣಿಸಿ ಅಷ್ಟೇನೂ ತಲೆಕೆಡಿಸಿಕೊಂಡಿರಲಿಲ್ಲ. ಮಕ್ಕಳು ಇದ್ದಕ್ಕಿದ್ದಂತೆ ಕಣ್ಮರೆಯಾದುದರಿಂದ ಕಂಗೆಟ್ಟು ಕೂತಿದ್ದ ಎರಡೂ ಕುಟುಂಬದವರಿಗೆ ಮಾರನೇ ದಿನ ಬೆಳಗಿನ ಹೊತ್ತಲ್ಲಿ ದೊಡ್ಡ ಶಾಕ್ ಒಂದು ಕಾದಿತ್ತು. ಮೋಹನ್ ಕುಮಾರ್‌ರ ಮೊಬೈಲಿಗೆ ಮಗ ಸುಧೀಂದ್ರನಿಂದಲೇ ಕರೆ ಮಾಡಿಸಿದ ಅಪಹರಣಕಾರರು ಮಗ ಬೇಕಾದರೆ ಎರಡು ಕೋಟಿ ಕಪ್ಪಕೊಡಬೇಕೆಂಬ ಸಂದೇಶ ರವಾನಿಸಿದರು. ಅಂದಹಾಗೆ ಈ ಕರೆ ಬಂದಿದ್ದು ಸುಧೀಂದ್ರ ಮೊಬೈಲ್‌ನಿಂದಲೇ ಇನ್ನೂ ಮಹತ್ವದ ವಿಚಾರವೆಂದರೆ, ಅಪಹರಣಕಾರರು ತಮ್ಮ ಬೇಡಿಕೆ, ಬೆದರಿಕೆಗಳನ್ನೆಲ್ಲ ಸುದೀಂದ್ರನ ಮೂಲಕವೇ ಮೋಹನ್‌ಗೆ ರವಾನಿಸಿದ್ದರು.


ಆದಾದಬಳಿಕ ಎರಡನೆಯ ಕರೆ ಬಂದಿದ್ದು ಬೆಂಗಳೂರಿನ ಕೆಂಗೇರಿಯಿಂದ. ಈ ಬಾರಿ ಪಕ್ಕಾ ಕಸುಬುದಾರಿಕೆ ಪ್ರದರ್ಶಿಸಿದ ಅಪಹರಣಕಾರರು ಕಾಯಿನ್‌ಬೂತ್‌ನಿಂದಲೇ ಮಾತುಕತೆ ನಡೆಸಿದ್ದರು. ಈ ಸಂದರ್ಭದಲ್ಲಿ ತಂದೆಯೊಂದಿಗೆ ಮಾತನಾಡಿದ ಸುಧೀಂದ್ರ ತಾನೊಂದು ಪತ್ರ ಬರೆದಿರುವುದಾಗಿಯೂ, ಅದನ್ನು ಮಡಿಕೇರಿ ಡಿಪೋ ಬಸ್ ಚಾಲಕನಿಂದ ಪಡೆಯಬೇಕೆಂದೂ ಕೇಳಿಕೊಂಡಿದ್ದ. ಇದಕ್ಕೆ ಸರಿಯಾಗಿ ಚಾಲಕನ ಮೂಲಕ ಪತ್ರವೂ ಸಿಕ್ಕಿತು. ಸುಧೀಂದ್ರ ತನ್ನದೇ ಕೈಬರಹದಲ್ಲಿ ಅಪಹರಣಕಾರರಿಂದ ತನಗಾಗುತ್ತಿರುವ ಹಿಂಸೆಯನ್ನು ವಿವರಿಸಿದ್ದ. ಹೇಗಾದರೂ ಮಾಡಿ ಈ ಚಿತ್ರಹಿಂಸೆಯಿಂದ ಪಾರುಮಾಡಿ ಅಂತ ಅಂಗಲಾಚಿದ್ದ.



ಮಂಜುನಾಥ್

ಇದನ್ನೊಂದು ಮಹತ್ವದ ಕುರುಹಾಗಿ ಪರಿಗಣಿಸಿ ಅಖಾಡಕ್ಕಿಳಿದ ಹುಣಸೂರು ಪೊಲೀಸರು ಪತ್ರ ತಂದುಕೊಟ್ಟ ಚಾಲಕನನ್ನು ಪತ್ತೆ ಹಚ್ಚಿ ವಿಚಾರಿಸಿದಾಗ ಅಪರಿಚಿತ ವ್ಯಕ್ತಿಯೊಬ್ಬ ಪತ್ರ ಕೊಟ್ಟುಹೋಗಿರುವ ವಿಚಾರ ತಿಳಿಯಿತು. ಪ್ರಳಯಾಂತಕ ಅಪಹರಣಕಾರರು ಈ ವಿಚಾರದಲ್ಲಿ ಚಿಕ್ಕ ಸಾಕ್ಷಿಗಳನ್ನೂ ಬಿಟ್ಟುಕೊಟ್ಟಿರಲಿಲ್ಲ. ಒಂದು ರೀತಿಯಲ್ಲಿ ಪೋಷಕರಿಗೆ ಧೈರ್ಯ ಹೇಳಬೇಕಿದ್ದ ಪೊಲೀಸರೇ ಹತಾಶೆಯಿಂದ ಕೈಚೆಲ್ಲಿ ಕೂರುವಂತಾಯಿತು. ಸುಧೀಂದ್ರ ಹಾಗೂ ವಿಘ್ನೇಶ್‌ನ ಕುಟುಂಬದವರ ಸ್ಥಿತಿಯಂತೂ ಹೇಳತೀರದು.

ಮೂರನೆಯ ಮತ್ತು ಕೊನೆಯ ಕರೆ ಬಂದಿದ್ದು ತಮಿಳುನಾಡಿನ ಕೃಷ್ಣಗಿರಿಯಿಂದ. ಈ ಸಂದರ್ಭದಲ್ಲೂ ಅಪಹರಣಕಾರರು ಕಾಯಿನ್‌ಬೂತ್‌ನಿಂದಲೇ ಕರೆ ಮಾಡಿ ಮೋಹನ್ ಕುಮಾರ್‌ರನ್ನು ದಬಾಯಿಸಿದರು. ಯಾಕೆಂದರೆ ಆ ಹೊತ್ತಿಗಾಗಲೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ವಿಚಾರ, ಅದು ಕೆಲ ಮಾಧ್ಯಮಗಳಲ್ಲಿ ಸುದ್ದಿಯಾದ ವಿಚಾರಗಳೆಲ್ಲ ಅವರಿಗೆ ತಿಳಿದುಹೋಗಿತ್ತು. ಇದೇ ಸಿಟ್ಟನಿಂದಾಗಿ ಒತ್ತೆ ಹಣದ ಮೊತ್ತವನ್ನು ಐದು ಕೋಟಿಗೆ ಏರಿಸಿ ಮಕ್ಕಳು ಬೇಕಾದರೆ ಬೇಗನೆ ಕೊಡಬೇಕೆಂದು ಧಮಕಿ ಹಾಕಿದರು. ಮೋಹನ್ ಕುಮಾರ್ ಆ ಮೊತ್ತವನ್ನು ಹೇಗಾದರೂ ಹೊಂದಿಸುತ್ತಿದ್ದರೇನೋ. ಆದರೆ ಯಾವ ಜಾಗ, ಯಾರ ಮೂಲಕ ಕೊಡಬೇಕೆಂಬುದನ್ನು ಅಪಹರಣಕಾರರು ಹೇಳಿರಲೇ ಇಲ್ಲ.



ಶಶಿಧರ್

ಅಪಹರಣ ನಡೆದು ಮೂರ್ನಾಲ್ಕು ದಿನ ಕಳೆದರೂ ಸುಧೀಂದ್ರ ಮತ್ತು ವಿಘ್ನೇಶ್ ಪತ್ತೆಯಾಗದ ಪರಿಣಾಮ ಈ ವಿಚಾರ ವ್ಯಾಪಕ ಚರ್ಚೆಗೆ ಗ್ರಾಸವಾಗಿ, ಮಾಧ್ಯಮಗಳೂ ಈ ಬಗ್ಗೆ ಬೆಳಕು ಚೆಲ್ಲಿದವು. ಅದ್ಯಾಕೋ ಪೊಲೀಸರು ಮಾತ್ರ ಆಗಲೂ ಮನಃಪೂರ್ವಕವಾಗಿ ತನಿಖೆಗಿಳಿದಂತೆ ಕಾಣಿಸಲಿಲ್ಲ. ಕೊನೆಗೂ ಭಾನುವಾರ ಮುಂಜಾನೆ ಯಾರೂ ಊಹಿಸಿರದ ಘಟನೆ ನಡೆದು ಹೋಯಿತ್ತು. ಅಕ್ಷರಶಃ ರಾಕ್ಷಸರಂತೆ ವರ್ತಿಸಿದ್ದ ಹಂತಕರು ಅಮಾಯಕ ವಿದ್ಯಾರ್ಥಿಗಳನ್ನು ಬರ್ಬರವಾಗಿ ಕೊಂದು ಚಿಕ್ಕಬಳ್ಳಾಪುರದ ಅಗಲಕುರ್ಕಿ ಗ್ರಾಮದ ಬಳಿ ಎಸೆದು ಹೋಗಿದ್ದರು.





ಈ ರೀತಿ ಅಮಾಯಕ ಹುಡುಗರಿಬ್ಬರು ಅನ್ಯಾಯವಾಗಿ ಕೊಲೆಯಾದ ಪ್ರಕರಣವೀಗ ಹಲವಾರು ಸಂಶಯ, ನಿಗೂಢತೆಗಳೊಂದಿಗೆ ಬಗೆಹರಿಯದ ಒಗಟಿನಂತೆ ಕಾಡತೊಡಗಿದೆ. ಇಡೀ ಘಟನೆಯನ್ನು ಪರಾಮರ್ಶಿಸಿದರೆ ಹಂತಕರ ಚಾಣಾಕ್ಷತನ ಹಾಗೂ ಪೊಲೀಸ್ ಮಂದಿಯ ವೈಫಲ್ಯಗಳು ಕಣ್ಣಿಗೆ ರಾಚುತ್ತಿವೆ. ಖುದ್ದು ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಗಳೇ ಏನೂ ಹೇಳುವ ಸ್ಥಿತಿಯಲ್ಲಿಲ್ಲವಾದರೂ ಇದು ಪಕ್ಕಾ ವೃತ್ತಿಪರ ಅಪಹರಣಕಾರರು, ಸ್ಥಳೀಯರ ಸಂಪರ್ಕದೊಂದಿಗೆ ಮಾಡಿರುವ ಅನಾಹುತವೆಂಬುದು ಖಚಿತ.

ಗಮನೀಯ ಅಂಶವೆಂದರೆ ಅಪಹರಣಕಾರರ ಟಾರ್ಗೆಟ್ ಆಗಿದ್ದುದು ಕೇವಲ ಸುಧೀಂದ್ರ. ವಿಘ್ನೇಶ್ ಆತನ ಜೊತೆಗಿದ್ದ ಏಕಮಾತ್ರ ತಪ್ಪಿಗಾಗಿಯೇ ಜೀವ ಕಳೆಕೊಂಡಿದ್ದಾನೆ. ಸುಧೀಂದ್ರನನ್ನೇ ಅಪಹರಿಸುವ ಪ್ಲಾನ್ ಹಾಕಲೂ ಬಲವಾದ ಕಾರಣವಿದೆ. ಈತನ ತಂದೆ ಮೋಹನ್‌ಕುಮಾರ್ ಹುಣಸೂರಿನಲ್ಲಿ ಪ್ರಸಿದ್ಧ ವ್ಯಾಪಾರಿ. ಎಸಿಸಿ ಸಿಮೆಂಟ್ ಹಾಗೂ ಕಬ್ಬಿಣ ವ್ಯಾಪಾರ ನಡೆಸುವ ಇವರು ಕೊಡಗಿನವರೆಗೂ ಗ್ರಾಹಕ ಸಂಪರ್ಕ ಹೊಂದಿದ್ದಾರೆ. ಕೋಟಿಗೆ ಬಾಳುವ ಪ್ರಾಪರ್ಟಿಗಳೂ ಇವರ ಒಡೆತನದಲ್ಲಿವೆ. ಆದರೂ ಯಾರೊಂದಿಗೂ ಇವರು ದೊಡ್ಡ ಮಟ್ಟನ ಹಗೆತನ ಕಟ್ಟಿಕೊಂಡವರಲ್ಲ. ಇಂಥವರ ಮಗನನ್ನು ಅಪಹರಿಸಿ ಕಾಸು ಹೊಡೆಯೋ ಆಲೋಚನೆ ಅಪಹರಣಕಾರರಿಗೆ ಬಂತೆಂದರೆ ಅದು ಸ್ಥಳೀಯರ ನೆರವಿಲ್ಲದೆ ಆಗೋ ಕೆಲಸವಲ್ಲ.

ಅಪಹರಣಕಾರರ ಇಡೀ ತಂಡವೇ ಸ್ಥಳೀಯದ್ದಾಗಿದ್ದರೂ ಆಶ್ಚರ್ಯವಿಲ್ಲ.

ಅಷ್ಟಕ್ಕೂ, ಈ ಹಿಂದೆ ಇಂಥ ಕೆಲಸದಲ್ಲಿ ಪಳಗದಿರುವವರು ಇಷ್ಟೊಂದು ವ್ಯವಸ್ಥಿತವಾಗಿ ಅಪಹರಣ ನಡೆಸುವುದು ಸಾಧ್ಯವಿಲ್ಲದ ಮಾತು. ಸ್ವತಃ ಪೊಲೀಸ್ ಅಧಿಕಾರಿಗಳೇ ಈ ಮಾತನ್ನು ಅನುಮೋದಿಸುತ್ತಾರೆ. ಮೋಹನ್‌ಕುಮಾರ್ ಹುಣಸೂರಿನಲ್ಲಿ ಏನು ಮಾಡುತ್ತಿದ್ದಾರೆಂಬುದು ಬ್ರಹ್ಮಗಿರಿಯಲ್ಲಿದ್ದ ಅಪಹರಣಕಾರರಿಗೆ ತಿಳಿಯುತ್ತದೆಂದರೆ ಇದರಲ್ಲಿ ಸ್ಥಳೀಯ ಕೈಗಳು ಕೆಲಸ ಮಾಡಿರುವುದು ಸ್ಪಷ್ಟ.

ಅಪಹರಣಕಾರರಿಗೆ ಹಣದ ಹಪಾಹಪಿಯ ಹೊರತಾಗಿ ಸುಧೀಂದ್ರ ಹಾಗೂ ವಿಘ್ನೇಶ್ ಫ್ಯಾಮಿಲಿಯ ಮೇಲೆ ಬೇರ್‍ಯಾವುದೇ ದ್ವೇಷವಿರುವ ಕುರುಹುಗಳಿಲ್ಲ. ಮೊದಲಿನಿಂದಲೂ ಪೊಲೀಸರಿಗೆ ಈ ವಿಷಯ ಗೊತ್ತಾಗಲೇ ಕೂಡದೆಂದು ಮೋಹನ್‌ಕುಮಾರ್‌ಗೆ ಎಚ್ಚರಿಸುತ್ತಿದ್ದ ಅಪಹರಣಕಾರರು ವಿಷಯ ಬಹುಬೇಗ ಪ್ರಚಾರವಾದುದನ್ನು ಕಂಡು ಹೆದರಿದ್ದಾರೆ. ಪೊಲೀಸರೂ ಕೂಡಾ ಬೆನ್ನು ಬಿದ್ದಿರುವುದು ಅವರನ್ನು ಇನ್ನಷ್ಟು ಕಂಗಾಲಾಗಿಸಿದೆ. ಇಂಥ ಸ್ಥಿತಿಯಲ್ಲಿ ಹಣ ಸಿಗುವುದು ಖಂಡಿತಾ ಸಾಧ್ಯವಿಲ್ಲ ಎಂಬ ವಿಚಾರವೂ ಅವರಿಗೆ ಮನದಟ್ಟಾಗಿದೆ.

ಹಾಗಂತ ವಿದ್ಯಾರ್ಥಿಗಳನ್ನು ಬಿಟ್ಟು ಕಳಿಸಿದರೆ ತಗುಲಿಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಇದರಿಂದಾಗಿಯೇ ಪಾಪದ ಹುಡುಗರನ್ನು ಎದೆಗಿರಿದು ಅಮಾನುಷವಾಗಿ ಹತ್ಯೆಗೈದು ಪರಾರಿಯಾಗಿದ್ದಾರೆ.

ಇದೀಗ ಮೈಸೂರು ಸುತ್ತಮುತ್ತ ಈ ಘಟನೆಗೆ ಪೊಲೀಸರ ವೈಫಲ್ಯವೇ ಪ್ರಮುಖ ಕಾರಣವೆಂಬ ಆರೋಪಗಳು ವ್ಯಾಪಕವಾಗಿವೆ. ಘಟನೆ ನಡೆದು ದಿನಗಳು ಸರಿಯುತ್ತಿದ್ದರೂ ಇನ್ನು ಕೂಡ ಅಪಹರಣಕಾರರ ಸುಳಿವಿಲ್ಲದಿರುವುದು ಅದನ್ನ ಪುಷ್ಟೀಕರಿಸುವಂತಿದೆ.

ಗೆಳೆಯರು-ಪೊಲೀಸರ ಮೇಲೆ ಗುಮಾನಿ!

ಸುಧೀಂದ್ರ ಮತ್ತು ವಿಘ್ನೇಶ್ ಅಪಹರಣದ ದೂರು ದಾಖಲಾದಾಗಿನಿಂದಲೂ ಪೊಲೀಸರದ್ದು ವಿಫಲ ಕಾರ್ಯಾಚರಣೆ. ಈ ಬಗ್ಗೆ ನಾನಾರೀತಿಯ ಟೀಕೆಗಳು, ರೂಮರುಗಳು ಹರಡಿಕೊಳ್ಳುತ್ತಿವೆ.

ಇಂಥ ಪೊಲೀಸ್ ವೈಫಲ್ಯದ ವಿರುದ್ಧ ಜನರ ಆಕ್ರೋಶದಿಂದಾಗಿ ಎಚ್ಚೆತ್ತುಕೊಂಡಂತಿರುವ ಸರ್ಕಾರ ಈ ಘಟನೆಯ ತನಿಖೆಗೆ ತಂಡವೊಂದನ್ನು ರಚಿಸಿದೆ. ಈ ತಂಡದ ಮುಖ್ಯಸ್ಥರಾಗಿ ನೇಮಕವಾಗಿರುವವರು ಖಡಕ್ ಅಧಿಕಾರಿ ರೂಪಕ್‌ಕುಮಾರ್ ದತ್ತ.

ಬುಧವಾರದಂದು ತಮ್ಮ ತಂಡದೊಂದಿಗೆ ಹುಣಸೂರಿಗೆ ಬಂದಿಳಿದಿರುವ ದತ್ತ ಬಿರುಸಿನಿಂದ ತನಿಖೆ ಶುರುಹಚ್ಚಿಕೊಂಡಿದ್ದಾರೆ. ಮೋಹನ್‌ಕುಮಾರ್‌ರ ಅಂಗಡಿಯಲ್ಲಿ ದುಡಿಯುವ 25 ಮಂದಿಯನ್ನು ತನಿಖೆಗೆ ಗುರಿಪಡಿಸಿ ಡ್ರೈವರ್‌ನ ವಿಚಾರಣೆಯನ್ನೂ ನಡೆಸಿದ್ದಾರೆ. ಇಲ್ಲಿ ಯಾವುದೇ ಸುಳಿವು ದೊರಕದಿದ್ದುದರಿಂದ ರೂಪಕ್‌ಕುಮಾರ್ ದತ್ತ ನೇತೃತ್ವದ ತಂಡ ಸೀದಾ ಹೋದದ್ದು ಕೊಲೆಯಾದ ಹುಡುಗರು ವ್ಯಾಸಂಗ ನಡೆಸುತ್ತಿದ್ದ ಮೈಸೂರಿನ ಮಹಾಜನ್ ಕಾಲೇಜಿಗೆ.


ಈ ಕಾಲೇಜಿನ ಪ್ರಾಂಶುಪಾಲ ಕೆ.ವಿ.ಪ್ರಭಾಕರ್‌ರನ್ನ ವಿಸ್ತೃತ ತನಿಖೆಗೊಳಪಡಿಸಿದ್ದ ದತ್ತಾ ತಂಡಕ್ಕೆ ಮಹತ್ವದ ಸುಳಿವೊಂದು ಸಿಕ್ಕಿದೆಯೆಂಬ ಮಾತುಗಳು ಕೇಳಿಬರುತ್ತಿದೆ. ಅದರ ಪ್ರಕಾರ ಅಪಹರಣ ನಡೆದ ದಿನದಿಂದಲೇ ಆ ಕಾಲೇಜಿನ ನಾಲ್ಕು ಮಂದಿ ವಿದ್ಯಾರ್ಥಿಗಳು ನಾಪತ್ತೆಯಾಗಿದ್ದಾರೆ. ವಿಘ್ನೇಶ್ ಹಾಗೂ ಸುಧೀಂದ್ರ ಕೂಡಾ ಅಂದು ಕಾಲೇಜಿಗೆ ಹೋಗಿರಲಿಲ್ಲ.

ಗಮನಿಸಲೇಬೇಕಾದ ಅಂಶವೆಂದರೆ, ಸ್ಥಳೀಯ ಪೊಲೀಸರು ಅಪ್ಪಿತಪ್ಪಿಯೂ ಕಾಲೇಜಿನ ಕಡೆ ಮುಖ ಹಾಕಿರಲಿಲ್ಲ. ಇದು ನಿಜಕ್ಕೂ ಸಂಶಯಿಸಲೇಬೇಕಾದ ವಿಚಾರ. ಇನ್ನು ನಾಪತ್ತೆಯಾದ ನಾಲ್ಕು ಜನ ವಿದ್ಯಾರ್ಥಿಗಳು ಇದುವರೆಗೂ ವಾಪಸಾಗಿಲ್ಲ!

ಹಾಗಾದರೆ ಸುಧೀಂದ್ರ ಹಾಗೂ ವಿಘ್ನೇಶನನ್ನ ಜೊತೆಗಿದ್ದವರೇ ಕೊಂದರೇ? ಎಂಬುದು ಸದ್ಯದ ಪ್ರಶ್ನೆ.

ಮಂಡ್ಯ ಬೆಟ್ಟಿಂಗ್ ದಂಧೆ: ಮೂರು ಕೋಟಿ ಪಂಗನಾಮ!

ಬೆಂಗಳೂರು, ಬಾಂಬೆ, ದೆಹಲಿ ಮುಂತಾದೆಡೆ ನಡೆಯುವ ಕ್ರಿಕೆಟ್ ಮ್ಯಾಚುಗಳಲ್ಲಿ ಸೋಲುಗೆಲುವಿನ ಎಫೆಕ್ಟ್‌ಗೆ ಮಂಡ್ಯದಲ್ಲಿ ಅಲ್ಲೋಲಕಲ್ಲೋಲ ಉಂಟಾಗಿದೆ. 20-20 ಕಪ್‌ಗಳು, ಲೀಗ್ ಪಂದ್ಯಾವಳಿಗಳು ಎಲ್ಲಾ ಕಡೆಯಂತೆ ಇಲ್ಲಿಯೂ ಜೂಜುಕೋರರಿಗೆ ವೇದಿಕೆಗಳಾಗಿವೆ. ಈ ಭಾಗದ ...ಲ ಮಾರ್ವಾಡಿಗಳು, ಚಿನ್ನದ ವ್ಯಾಪಾರಿಗಳು ...ಣದ ದುರಾಸೆಗೆ-ಜೂಜಿನ ತೆವಲಿಗೆ ಬಿದ್ದುದರ ಪರಿಣಾಮ ನೂರಾರು ಗ್ರಾಹಕರು ತಮ್ಮ ಹಣ ಮತ್ತು ಆಭರಣಗಳನ್ನು ಕಳೆದುಕೊಂಡು ಬೀದಿಗೆ ಬಿದ್ದು ಲಬೋ ಲಬೋ ಎಂದು ಗೋಳಾಡ ತೊಡಗಿದ್ದಾರೆ.




ಮೊನ್ನೆ ಸೇಠು ಸುರೇಶ್ ಎಂಬ ಚಿನ್ನದ ವ್ಯಾಪಾರಿ ಇಂತಹ ಜೂಜಿನ ತೆವಲಿಗೆ ಬಿದ್ದು ಎರಡು ಕೋಟಿಗೆ ನಾಮ ತೀಡಿ ನಾಪತ್ತೆಯಾದರೆ, ಮಂಗಲದ ಅಪ್ಪಾಜಿ ಎಂಬಾತ ಲಕ್ಷಾಂತರ ...ಗಳಿಗೆ ಪಂಗನಾಮಹಾಕಿ ತಲೆಮರೆಸಿಕೊಂಡಿದ್ದಾರೆ. ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸುತ್ತಿದ್ದರೂ ಪೊಲೀಸ್ ಇಲಾಖೆ ಮಹಾ ಮೌನಕ್ಕೆ ಶರಣಾಗಿದೆ.

ಮಂಡ್ಯದ ಪೇಟೆಬೀದಿ ನಗರದ ವಾಣಿಜ್ಯ ವಹಿವಾಟಿನ ...ತೀ ಮುಖ್ಯವಾದ ಏರಿಯಾ. ಇಲ್ಲಿ ದೊಡ್ಡದೊಡ್ಡ ಚಿನ್ನ-ಬೆಳ್ಳಿ ಅಂಗಡಿಗಳು, ಬಟ್ಟೆ ಅಂಗಡಿಗಳು, ದಿನಸಿ ಅಂಗಡಿಗಳು ...ರಿದಂತೆ ಮಂಡ್ಯದ ಸಮಸ್ತ ವ್ಯವಹಾರಗಳನ್ನು ಮಾಡುವ ಮತ್ತು ನಿಯಂತ್ರಿಸುವ ಶಕ್ತಿಗಳಿರುವ ಅಡ್ಡೆ. ಈ ಪೇಟೆಬೀದಿ ಮತ್ತೊಂದು ಕಾರಣಕ್ಕೂ ಕುಖ್ಯಾತಿ ಪಡೆದಿದೆ. ಅದು ಮಂಡ್ಯ ...ಗತ ಪಾತಕಿಗಳ ಕಾರಸ್ಥಾನವಾಗಿದೆ. ನಟೋರಿಯಸ್ ಪಾತಕಿಗಳಾದ ಮಹದೇವಾ ಅಲಿಯಾಸ್ ಕಿಟ್ಟಿ, ಶಂಕ್ರ, ...ವರಾಮ, ಇತ್ತೀಚಿನ ಪಾತಕಿಗಳಾದ ಚೇತನಾ, ಮಧು ಮತ್ತು ಕರಿರಾಜೇಶ್‌ಗಳ ಮನೆಗಳಿರುವುದು ಇಲ್ಲಿಯೇ.

ಸೇಠು ಸೂರಿ ಅಲಿಯಾಸ್ ಸುರೇಶ ಎಂಬಾತ ಮಂಡ್ಯ ನಗರದ ಆನೆಕೆರೆಯ ಲಕ್ಷ್ಮಿ ಜನಾರ್ದನ ದೇವಸ್ಥಾನದ ...ಸ್ತೆಯಲ್ಲಿರುವ ಮಾತಾಶ್ರೀ ಜ್ಯುವೆಲ್ಲರಿಯ ಮಾಲೀಕ. ...ಳೆದ ಆರು ವರ್ಷಗಳಿಂದ ಈತ ಈ ಕಸುಬು ನಡೆಸುತ್ತಿದ್ದ. ಈತ ಮಂಡ್ಯದ ಮೂಲದವನೆ. ಮೊದಮೊದಲಿಗೆ ಎಲ್ಲಾ ವ್ಯಾಪಾರಿಗಳಂತೆ ಈತನೂ ಸಹ ತನ್ನ ಅಂಗಡಿಗೆ ಬರುವ ಗ್ರಾಹಕರನ್ನ ವಿಶ್ವಾಸಕ್ಕೆ ತೆಗೆದುಕೊಂಡು ವ್ಯಾಪಾರ ನಡೆಸಿದ್ದ. ಮದುವೆ ಮುಂಜಿಗಳಿಗೆಲ್ಲ ಆರ್ಡರ್ ಕೊಡುವವರಿಗೆ ನಂಬಿಕೆಯಿಂದಲೇ ಚಿನ್ನಾಭರಣಗಳನ್ನ ನೀಡತೊಗಿದ್ದ. ಆದರೆ ವಹಿವಾಟು ಹೆಚ್ಚಾಗುತ್ತಲೇ ಈತನಿಗೆ ವಿವಿಧ ಖಯಾಲಿಗಳು ಅಂಟಿಕೊಂಡಿವೆ. ದಿಢೀರನೆ ಶ್ರೀಮಂತನಾಗುವ ಧಾವಂತದಿಂದ ಕ್ರಿಕೆಟ್ ಬೆಟ್ಟಿಂಗ್ ಜಾಲಕ್ಕೆ ಬಿದ್ದ.

ಅಶೋಕ ನಗರದ ಮೇಂಧಿ ಅಲಿಯಾಸ್ ಮಹೇಂದ್ರ, ಪಿ.ಇ.ಎಸ್. ಕಾಲೇಜಿನ ಉಪನ್ಯಾಸಕರೊಬ್ಬರ ಮಗ ಸುಬ್ಬಿ ಅಲಿಯಾಸ್ ಸುಭಾಶ್, ಕಲ್ಲಹಳ್ಳಿ ಮೆಡ್ಡಚಂದ್ರ ಅಲಿಯಾಸ್ ಚಂದ್ರಶೇಖರ್, ಶಂಕರ್‌ಮಠದ ಅರುಣೇಶ್ ಮುಂತಾದವರೇ ಇಂತಹ ಬೆಟ್ಟಿಂಗ್ ದಂಧೆಯನ್ನ ನಡೆಸುತ್ತಿರುವವರು.

ಈ ಹೈಟೆಕ್ ಜೂಜುಕೋರರ ಅಡ್ಡೆಗೆ ಬಿದ್ದ ಸೇಠು ಸೂರಿ ಈಗ ಬರೋಬ್ಬರಿ ಎರಡು ಕೋಟಿಗಳನ್ನು ಕಳೆದುಕೊಂಡಿದ್ದಾರೆ. ಅವನಲ್ಲದೆ ಮಂಗಲದ ಅಪ್ಪಾಜಿ ಎಂಬ ಜೂಜುಕೋರ ಕೂಡ ತನ್ನ ಗ್ರಾಹಕರ ಲಕ್ಷಾಂತರ ರೂಗಳನ್ನು ಜೂಜಾಡಿ ಅದನ್ನೆಲ್ಲ ಕಳೆದುಕೊಂಡಿದ್ದಾನೆ. ಇವರಿಬ್ಬರು ಎರಡು ವಾರಗಳ ಹಿಂದೆ ತಮ್ಮ ಜ್ಯುವೆಲ್ಲರಿ ಅಂಗಡಿಗಳಿಗೆ ಬೀಗ ಜಡಿದು ನಾಪತ್ತೆಯಾಗಿದ್ದಾರೆ.


ಕೌಶಲೇಂದ್ರಕುಮಾರ್

ಇವರಿಬ್ಬರಿಂದ ವಂಚನೆಗೊಳಗಾದ ಬಹುಪಾಲು ಗ್ರಾಹಕರು ತಮ್ಮ ಆಭರಣಗಳನ್ನು ರಿಪೇರಿ ಮಾಡಲು ಮತ್ತು ಮದುವೆ ವಗೈರೆಗಳಿಗೆ ಆರ್ಡರ್ ಕೊಟ್ಟಿರುವವರು. ಸಾಲಕ್ಕಾಗಿ ಗಿರವಿ ಇಟ್ಟಿರುವವರ ಒಡವೆಗಳೂ ಬೆಟ್ಟಿಂಗ್ ದಂಧೆಯ ಪಾಲಾಗಿದೆ. ಇದು ಸಾಲದೆಂಬಂತೆ ಪೇಟೆಬೀದಿಯ ಕಪ್ಪು ಹಣದ ಕುಳಗಳಿಂದ ಪಡೆದ ಲಕ್ಷಗಟ್ಟಲೇ ಸಾಲವನ್ನೂ ಸೇಠು ಸೂರಿ ಕಳೆದ ಹಲವು ತಿಂಗಳುಗಳಿಂದ ಸರಣಿಯಾಗೆ ನಡೆದ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಕಳೆದುಕೊಂಡಿದ್ದಾರೆ.

ಹೀಗೆ ಹಣ ಕಳೆದುಕೊಂಡು ಬರಿಗೈಲಿ ಸೇಠು ಸೂರಿ ನಿಂತಿದ್ದಾನೆ. ಆದರೆ ಗ್ರಾಹಕರು ಎಂದಿನಂತೆ ತಮ್ಮ ವಸ್ತುಗಳನ್ನ ಕೇಳತೊಡಗಿದ್ದಾರೆ. ಇದನ್ನ ಕೊಡಲಾಗದ ಸೂರಿ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದಾನೆ. ಈತ ಚೀಟಿಂಗ್ ಆಸಾಮಿಯಲ್ಲದಿದ್ದರೂ ಈ ಭಾರಿ ಮೊತ್ತವನ್ನೇ ಚೀಟಿಂಗ್ ಮಾಡಿದ್ದಾನೆ. ಸೂರಿಯ ಈ ಮೋಸವನ್ನು ಮೊದಲೇ ಅರಿತ ಬಡ್ಡಿದಂಧೆಯ ಹಮಾಮ್ ಮಹೇಶ್ ಜ್ಯುವೆಲ್ಲರಿ ಅಂಗಡಿಗೆ ಭೋಗ್ಯದ ರೂಪದಲ್ಲಿ ನೀಡಿದ್ದ ಎರಡು ಲಕ್ಷ ಹಣವನ್ನು ಪಡೆದುಕೊಂಡಿದ್ದಾರೆ.

ಆದರೆ ಸೇಠು ಸೂರಿಯನ್ನ ನಂಬಿ ಮದುವೆ ಒಡವೆಗೆ ಆರ್ಡರ್ ನೀಡಿದ್ದ ನೂರಾರು ಕುಟುಂಬಗಳಲ್ಲಿ ಹತ್ತಾರು ಕುಟುಂಬಗಳು ಮದುವೆಗಳನ್ನ ಮುಂದೂಡಿವೆ. ನೂರಾರು ಮಹಿಳೆಯರು ಲಬೋಲಬೊ ಅನ್ನತೊಡಗಿದ್ದಾರೆ. ಮಂಗಲದ ಅಪ್ಪಾಜಿಯನ್ನ ನಂಬಿರುವ ಗ್ರಾಹಕರ ಪಾಡು ಸಹ ಇದೇ ಆಗಿದೆ. ಇದೇ ರೀತಿ ಇನ್ನೂ 3-4 ಮಾರ್ವಾಡಿಗಳು ಬೆಟ್ಟಿಂಗ್ ಮಾಫಿಯಾ ಬಲೆಗೆ ಬಿದ್ದು ಊರು ಖಾಲಿಮಾಡಿದ್ದಾರೆ ಎನ್ನುವ ಪುಕಾರುಗಳು ಹರಿದಾಡತೊಡಗಿವೆ.

ಕಳೆದ ವರ್ಷ ರಾಜಸ್ಥಾನ ಮೂಲದ ಮಾರ್ವಾಡಿ ಸಂಪತ್ ಕುಮಾರ್ ಮತ್ತು ಆತನ ಮಕ್ಕಳು ಮಂಡ್ಯದಲ್ಲಿ ಜ್ಯುವೆಲ್ಲರಿ ತೆರೆದು ಗ್ರಾಹಕರಿಗೆ ಎರಡು ಕೋಟಿಗಳ ಪಂಗನಾಮ ಹಾಕಿದ್ದಾಗ ರಕ್ಷಣಾ ವೇದಿಕೆಯ ಮಾ.ಸೋ. ಚಿದಂಬರ, ಮತ್ತು ಅಶೋಕ ಎಂಬ ಎತ್ತುವಳಿ ಗಿರಾಕಿಗಳು ಮಾರ್ವಾಡಿಗಳ ಜೊತೆಗೂಡಿ ಜನರಿಗೇ ಮೋಸ ಮಾಡಲು ಮುಂದಾಗಿದ್ದರು. ಆ ಸಂದರ್ಭದಲ್ಲಿ ಹಣ ಮತ್ತು ಆಭರಣಗಳನ್ನ ಕಳೆದುಕೊಂಡಿದ್ದ ಗ್ರಾಹಕರೊಡಗೂಡಿ ಕರ್ನಾಟಕ ಜನಶಕ್ತಿಯ ಕಾರ್ಯಕರ್ತರು ಖುದ್ದು ಪೊಲೀಸ್ ಇಲಾಖೆಗೆ ಈ ಬಗ್ಗೆ ಎಚ್ಚರಿಸಿತ್ತು. ಆದರೆ ಇಂತಹದ್ದೇ ದೋಖಾ ಪ್ರಕರಣಗಳು ಮತ್ತೊಮ್ಮೆ ನಡೆಯುತ್ತಿವೆ ಎಂದರೆ ಪೊಲೀಸ್ ಇಲಾಖೆಯ ಕಾರ್ಯ ಇನ್ನೆಂತಹದ್ದಿರಬೇಕೆಂದು ಅರ್ಥಮಾಡಿಕೊಳ್ಳಬೇಕಿದೆ.



ಪೊಲೀಸ್ ಅಧಿಕಾರಿಗಳು ನೆಪಮಾತ್ರಕ್ಕೆ ರಸ್ತೆಬದಿಯಲ್ಲಿ ಗುಂಪುಗೂಡಿ ಕ್ರಿಕೆಟ್ ನೋಡುವ ಅಮಾಯಕರನ್ನ ಬಂಧಿಸಿ ಪೌರುಷವನ್ನ ಪ್ರದರ್ಶಿಸುತ್ತಾರೆ. ಆದರೆ ಬೆಟ್ಟಿಂಗ್ ಮಾಫಿಯಾ ವಿರುದ್ಧ ಕ್ರಮಗೊಳ್ಳದೆ ಸುಮ್ಮನಿರುತ್ತಾರೆ. ಪರಿಣಾಮವಾಗಿ ನೂರಾರು ಜನರು, ಸಾವಿರಾರು ಗ್ರಾಹಕರು ತಮ್ಮ ಹಣ ಮತ್ತು ಆಭರಣಗಳನ್ನ ಕಳೆದುಕೊಳ್ಳುವಂತಾಗಿದೆ.

ಇನ್ನಾದರೂ ಪೊಲೀಸ್ ವರಿಷ್ಠಾಧಿಕಾರಿ ಕೌಶಲೇಂದ್ರ ಕುಮಾರ್ ಖುದ್ದು ಈ ದಂಧೆಗೆ ಕಡಿವಾಣ ಹಾಕಬೇಕಿದೆ, ಹಣ ಮತ್ತು ಆಭರಣಗಳನ್ನ ಕದ್ದೊಯ್ದಿರುವ ಸೇಠು ಸೂರಿ ಮತ್ತು ಅಪ್ಪಾಜಿಗಳನ್ನ ಹುಡುಕಿ ಗ್ರಾಹಕರಿಗೆ ನ್ಯಾಯ ಕೊಡಿಸಬೇಕಿದೆ...

• ಲಕ್ಷ್ಮಣ್ ಚೀರನಹಳ್ಳಿ

ಶಿವಮೊಗ್ಗ: ಅಡಿಕೆ ಮಂಡೀಲಿ ಒಂದು ಕೋಟಿಗೆ ನಾಮ

ಇದನ್ನು ಯಾರು ಯಾರಿಗೆ ಹಾಕಿದರೆನ್ನುವುದನ್ನು ...ಚಿತವಾಗಿ ಹೇಳಲಾಗುತ್ತಿಲ್ಲ. ಆದರೆ ಬ್ಯಾಂಕಿಂಗ್ ಉದ್ಯಮದಲ್ಲಿ ಮಹಾನ್ ವಂಚಕರೆಂದೇ ಕುಖ್ಯಾತಿ ಪಡೆದಿರುವ ಐಸಿಐಸಿಐ ಬ್ಯಾಂಕ್‌ನ ಶಿವಮೊಗ್ಗ ಶಾಖೆಗೆ ಅನಾಮತ್ತು ಒಂದು ಕೋಟಿ ರೂಪಾಯಿಗಳ ದೋಖಾ ಆಗಿದೆ. ಹೀಗೆ ವಂಚಕ ಬ್ಯಾಂಕ್‌ಗೇ ಚೀಟಿಂಗ್ ಮಾಡಿರುವ ಪ್ರಕರಣದಲ್ಲಿ ಮೂವರು ಪ್ರಧಾನ ಪಾತ್ರಧಾರಿಗಳಿದ್ದಾರೆ.

ಶಿವಮೊಗ್ಗದ ಅಡಿಕೆ ವ್ಯಾಪಾರಿ ಶಿವ ಟ್ರೇಡರ್ಸ್‌ನ ಮಂಜುನಾಥ್, ಶಿವಮೊಗ್ಗದ ಐಸಿಐಸಿಐ ಬ್ಯಾಂಕ್ ಹಾಗೂ ನ್ಯಾಷನಲ್ ಕೋಲಾಟರೆಲ್ ಮ್ಯಾನೇಜ್‌ಮೆಂಟ್ ಸರ್ವೀಸ್(ಎನ್‌ಸಿಎಂಎಸ್)ನ ಶಂಕರ್ ಸಿಂಗ್ ಇವರೇ ಆ ಮೂವರು ಪಾತ್ರಧಾರಿಗಳು.

ಶಿವಮೊಗ್ಗದ ಆರ್‌ಎಂಸಿ ಯಾರ್ಡ್‌ನಲ್ಲಿ ಅಡಿಕೆ ವ್ಯಾಪಾರ ನಡೆಸುತ್ತಿರುವ ಶಿವ ಟ್ರೇಡರ್ಸ್‌ನ ಮಂಜುನಾಥ್ ಈಗ್ಗೆ 2 ವರ್ಷದ ಹಿಂದೆ ಎರಡೂವರೆ ಸಾವಿರ ಅಡಿಕೆ ಚೀಲಗಳನ್ನು ಒತ್ತೆಯಿಟ್ಟು ಐಸಿಐಸಿಐ ಬ್ಯಾಂಕ್‌ನಿಂದ 97 ಲಕ್ಷ ರೂಪಾಯಿ ಸಾಲ ಪಡೆದಿದ್ದ. ಸಾಲ ಕೊಟ್ಟ ಬ್ಯಾಂಕಿನವರು ಈಗ ಹೋಗಿ ನೋಡಿದರೆ ಅರ್ಧದಷ್ಟು ಚೀಲಗಳಲ್ಲಿ ಕಲ್ಲು-ಮಣ್ಣು ಸಿಕ್ಕಬೇಕೆ? ಹೀಗೆ ಅರ್ಧ ಭಾಗ ಅಡಿಕೆಯೂ ಇನ್ನರ್ಧ ಕಲ್ಲನ್ನು ತುಂಬಿದ್ದ ಅಡಿಕೆ ಸ್ಟಾಕ್‌ಗೆ ಪೂರ್ತಿಯಾಗಿ ಅಡಿಕೆಯೇ ಇದೆ ಎನ್ನುವಂತೆ ತೊಂಬತ್ತೇಳು ಲಕ್ಷ ರೂಪಾಯಿನಷ್ಟು ಸಾಲ ಕೊಟ್ಟಿದ್ದ ಐಸಿಐಸಿಐ ಬ್ಯಾಂಕಿನವರು ಈಗ ತೇಲುಗಣ್ಣು ಮೇಲುಗಣ್ಣಾಗಿದ್ದಾರೆ.

ಸ್ಥಳೀಯ ಆರ್‌ಎಂಸಿ ಯಾರ್ಡಿನ ಗೋಡೌನಿನಲ್ಲಿದ್ದ ಎರಡೂವರೆ ಸಾವಿರ ಅಡಿಕೆ ಚೀಲಗಳ ಪೈಕಿ ಒಂದೂವರೆ ಸಾವಿರ ಚೀಲದಲ್ಲಿ ಕಲ್ಲು ಮಣ್ಣು ತುಂಬಿ ವಂಚಿಸಿರುವುದು ಮಂಡಿ ವ್ಯಾಪಾರಿ ಮಂಜುನಾಥನಾ, ಅಥವಾ ಬ್ಯಾಂಕಿನವರಾ ಇಲ್ಲಾ ಗೋಡೌನ್ ಸೆಕ್ಯುರಿಟಿ ಜವಾಬ್ದಾರಿ ಹೊತ್ತಿದ್ದ NCMS ಸಂಸ್ಥೆಯವರಾ ಎಂಬ ಡೌಟಿಗೆ ಖಚಿತ ಉತ್ತರವಂತೂ ಸಿಗುತ್ತಿಲ್ಲ. ಇದ್ದ ಮೂವರಲ್ಲಿ ಕದ್ದವರ್ಯಾರು ಎಂದು ನೋಡಿದರೆ ಈ ಮೂವರ ಪೈಕಿ ಯಾರೋ ಎರಡು ಪಾರ್ಟಿಗಳು ಶಾಮೀಲಾಗಿಯೇ ಈ ಚೀಟಿಂಗ್ ನಡೆಸಿರುವುದು ...ನ್ನಿಸುತ್ತಿದೆ. ಒಂದೋ ಮಂಜುನಾಥ್ ಅಡಿಕೆ ಸ್ಟಾಕ್ ...ನ್ನು ಬ್ಯಾಂಕಿಗೆ ಒತ್ತೆ ಇಡುವಾಗಲೇ ಅರ್ಧದಷ್ಟು ಚೀಲಗಳಿಗೆ ಕಲ್ಲುಮಣ್ಣು ತುಂಬಿ ಬ್ಯಾಂಕಿನವರ ಕಣ್ಣಿಗೆ ಮಣ್ಣೆರಚಿರಬೇಕು. ಅಥವಾ ಬ್ಯಾಂಕ್‌ನವರ್‍ಯಾರೋ ಸ್ಟಾಕ್ ತಮ್ಮ ವಶಕ್ಕೆ ಬಂದನಂತರ ಅರ್ಧ ಅಡಿಕೆಯನ್ನು ಕಳ್ಳತನದಲ್ಲಿ ಮಾರಿಕೊಂಡು ಅದೇ ಜಾಗದಲ್ಲಿ ಕಲ್ಲುಮಣ್ಣು ತುಂಬಿಸಿದ ಚೀಲಗಳನ್ನು ತಂದಿಟ್ಟಿರಬೇಕು. ಇವೆರಡೂ ಸಾಧ್ಯತೆ ಬಿಟ್ಟರೆ ಬೇರೇನು ನಡೆದಿರಲು ಸಾಧ್ಯ?

ಮಂಜುನಾಥನ ಮೋಜು ಮಸ್ತಿ

ತರೀಕೆರೆ ಹತ್ತಿರದ ಹುಣಸಘಟ್ಟದವರಾದ ಮಂಜುನಾಥ್ ಈಗ್ಗೆ ಎಂಭತ್ತು ವರ್ಷಗಳಿಂದ ಶಿವಮೊಗ್ಗೆಯ ಆರ್‌ಎಂಸಿ ಯಾರ್ಡಿನಲ್ಲಿ ಶಿವ ಟ್ರೇಡರ್ಸ್ ಹೆಸರಿನಲ್ಲಿ ಅಡಿಕೆ ವ್ಯಾಪಾರ ಮಾಡುತ್ತಿದ್ದಾನೆ. ಈತನ ಸೋದರ ಪ್ರೇಮ್ ಕೂಡ ಬೇರೆ ಮಂಡಿ ಇಟ್ಟುಕೊಂಡಿದ್ದಾನೆ. ಇನ್ನೊಬ್ಬ ಸೋದರ ಯತಿರಾಜ್ ಕೂಡ ಇದೇ ಕೆಲಸ ಮಾಡುತ್ತಿದ್ದು ಮಂಜುನಾಥ್ ಹಾಗೂ ಪ್ರೇಮ್ ಇಬ್ಬರೊಂದಿಗೂ ಓಡಾಡಿಕೊಂಡು ಅಡಿಕೆ ವ್ಯಾಪಾರ ನಡೆಸುತ್ತಿದ್ದಾನೆ. ಇವರ ಕುಟುಂಬಕ್ಕೆ ಬಿಆರ್‌ಪಿ ಜಂಕ್ಷನ್ ಹತ್ತಿರ ಹನ್ನೆರಡೆಕರೆಯಷ್ಟು ಅಡಿಕೆ ತೋಟವೂ ಇದೆ. ಹಾಗೆ ಹೇಳಬೇಕೆಂದರೆ ಅಡಿಕೆ ವ್ಯಾಪಾರದ ಫೀಲ್ಡಿನಲ್ಲಿ ಮಂಜುನಾಥ್‌ಗೆ ಅಂತಾ ಒಳ್ಳೆಯ ಹೆಸರಿಲ್ಲ. ಈ ದಂಧೆಯಲ್ಲಿ ಲಾಸೂ ಮಾಡಿಕೊಂಡಿದ್ದಾನೆ. ಕಳಪೆ ಅಡಿಕೆಗೆ ಬಣ್ಣ ಹಾಕಿ ಮಾರುತ್ತಾನೆಂಬ ಆರೋಪಗಳೂ ಇವನ ಮೇಲಿವೆ. ಮಹಾರಾಷ್ಟ್ರದ ನಾಗಪುರಕ್ಕೆ ಅಡಿಕೆ ಲೋಡ್ ಕಳಿಸುವಾಗೆಲ್ಲಾ ಒಪ್ಪಿಕೊಂಡ ಕ್ವಾಲಿಟಿಗಿಂತ ಕಳಪೆ ಅಡಿಕೆ ಸಾಗಿಸಿ ಮಂಜುನಾಥ್ ಅನೇಕ ಸಾರಿ ಅಲ್ಲಿನ ವ್ಯಾಪಾರಿಗಳಿಂದ ಬೈಸಿಕೊಂಡಿರುವುದು ಉಂಟು. ನಾಗಪುರದವರಂತೂ ಖಡಕ್ ಅಂದರೆ ತಾವು ಬಯಸಿದ ಕ್ವಾಲಿಟಿಯ ಅಡಿಕೆ ಲಾರಿಯಲ್ಲಿ ಬರದೆ ಕಳಪೆ ಅಡಿಕೆ ಬಂದಿಳಿದರೆ ಕೊಡಬೇಕಾದ ಹಣದಲ್ಲಿ ಕಡಿಮೆ ಕೊಟ್ಟು ವ್ಯಾಪಾರ ಸೆಟಲ್ ಮಾಡಿಕೊಳ್ಳುತ್ತಾರೆ. ಅಡಿಕೆ ದಂಧೆಯಲ್ಲಿ ಇದಕ್ಕೆ ರೇಟ್ ಕಟ್ಟಿಂಗ್ ಅನ್ನುತ್ತಾರೆ. ಮಂಜುನಾಥನ ವ್ಯವಹಾರದಲ್ಲಿ ಇದು ಕಾಮನ್ ಆಗಿತ್ತು, ಇದರಿಂದ ವ್ಯವಹಾರದಲ್ಲಿ ವಿಪರೀತ ಲಾಸ್ ಮಾಡಿಕೊಂಡ ಮಂಜುನಾಥ್ ಭಾರೀ ಸಾಲ ಮಾಡಿಕೊಂಡಿದ್ದ. ಆ ಸಾಲ ತೀರಿಸಲು ಹೊಸ ಸಾಲ ಮಾಡುವುದು, ಎಲ್ಲಾ ಸಾಲಗಳ ಬಡ್ಡಿ ಕಟ್ಟಲು ಮತ್ತೆ ಸಾಲ ಮಾಡಬೇಕಾದ ಕಷ್ಟವೂ ಮಂಜುನಾಥನಿಗಿತ್ತು. ಹೀಗೆ ಮೈತುಂಬಾ ಸಾಲವಿದ್ದರೂ ಮಂಜುನಾಥನಿಗೆ ತರಹೇವಾರಿ ಕಾರ್‌ಗಳ ಶೋಕಿ, ಗೆಳೆಯರೊಂದಿಗೆ ಮೋಜು-ಮಸ್ತಿಯ ಚಟಗಳೇನು ಕಡಿಮೆ ಇರಲಿಲ್ಲ. ಹೀಗಿದ್ದಾಗಲೇ 2009 ರಲ್ಲೊಮ್ಮೆ ಮಂಜುನಾಥ್ ತನ್ನಲ್ಲಿದ್ದ ಎರಡೂವರೆ ಸಾವಿರ ಅಡಿಕೆ ಚೀಲಗಳನ್ನು ಒತ್ತೆಯಿಟ್ಟು 97 ಲಕ್ಷ ಸಾಲ ಎತ್ತಿದ.


ಮಂಜುನಾಥ್

ಐಸಿಐಸಿಐನ ಅಪ್ಪು ಕುಟ್ಟಿ ಮತ್ತು ಮಲ್ಲಿಕಾರ್ಜುನ ಬ್ಯಾಂಕ್‌ಗಳಲ್ಲಿ ಗೋಲ್ಡ್ ಲೋನ್ ಕೊಡುವ ಹಾಗೆಯೇ ರಾಷ್ಟ್ರೀಕೃತ ಬ್ಯಾಂಕುಗಳು ಸಕ್ಕರೆ ಚೀಲಗಳನ್ನು ಒತ್ತೆ ಇಟ್ಟುಕೊಂಡು ಶುಗರ್ ಫ್ಯಾಕ್ಟರಿಗಳಿಗೆ ಸಾಲ ಕೊಡುತ್ತಾರೆ. ಅದೇರೀತಿ ಅಡಿಕೆ ಸ್ಟಾಕ್ ಅನ್ನೇ ಒತ್ತೆ ಇಟ್ಟರೆ ಅಡಿಕೆ ಮಂಡಿ ವ್ಯಾಪಾರಿಗಳಿಗೂ ಸಾಲ ಕೊಡುವ ಪರಿಪಾಠವಿದೆ. ಇದೇ ತರ ಶಿವ ಟ್ರೇಡರ್ಸ್‌ನ ಮಂಜುನಾಥನಿಗೂ ICICIನ ಶಿವಮೊಗ್ಗ ಬ್ರಾಂಚ್‌ನವರು ಹಂತಹಂತವಾಗಿ 97 ಲಕ್ಷ ರೂಪಾಯಿಯ ಸಾಲ ಕೊಟ್ಟರು. ಬ್ಯಾಂಕಿನ ಆಫೀಸರ್‌ಗಳಾದ ಅಪ್ಪು ಕುಟ್ಟಿ ಹಾಗೂ ಮಲ್ಲಿಕಾರ್ಜುನ್ ಖುದ್ದಾಗಿ ಮುಂದೆ ನಿಂತು ಸ್ಟಾಕ್ ವೆರಿಫಿಕೇಷನ್ ಮಾಡಿದ್ದೇವೆಂದು ದಾಖಲೆಯಲ್ಲಿ ಬರೆದುಕೊಂಡರು. ಹೀಗೆ ಒತ್ತೆಯಾಗಿ ಬಂದ ಅಡಿಕೆ ಚೀಲಗಳನ್ನು ಆರ್‌ಎಂಸಿ ಯಾರ್ಡಿನ ಕಾಂಪೌಂಡಿನಲ್ಲೇ ಇರುವ ಗೋಡೌನ್ನಿಲ್ಲಿ ತುಂಬಲಾಯಿತು. ಖುದ್ದು ಬ್ಯಾಂಕಿನವರೇ ನಿಂತು ಗೋಡೌನಿಗೆ ಬೀಗ ಹಾಕಿ ಸೀಲ್ ಮಾಡಿ ತಮ್ಮವರೇ ಸೆಕ್ಯುರಿಟಿಯವರನ್ನು ಹಾಕಿ ಹೋದರು.

ಇದು ಶುರುವಾಗಿದ್ದು 2009 ರ ಮಾರ್ಚ್‌ನಲ್ಲಿ, ಆದಾದ ನಂತರ 2009 ರ ಜೂನ್‌ವರೆಗೂ ಮಂಜುನಾಥ್ ಐವತ್ತು ನೂರು ಅಡಿಕೆ ಚೀಲಗಳನ್ನು ಹೊಸದಾಗಿ ತಂದು ಗೋಡೌನಿಗೆ ತುಂಬುತ್ತಲೇ ಹೋಗಿದ್ದಾನೆ. ಆ ಲೆಕ್ಕದಲ್ಲಿ ಹೇಳಬೇಕೆಂದರೆ ನಾಲ್ಕು ತಿಂಗಳ ಅವಧಿಯಲ್ಲಿ ಒಟ್ಟು 28 ಬಾರಿ ಗೋಡೌನಿನ ಸೀಲ್ ಒಡೆದು ಬೀಗ ತೆಗೆದು ಹೊಸ ಸ್ಟಾಕ್ ತಂದಿಡಲಾಗಿದೆ. ಈ ಗೋಡೌನಿನ ಬೀಗದ ಕೀ ಬ್ಯಾಂಕಿನವರ ಹತ್ತಿರವೇ ಇರುತ್ತಿತ್ತೆಂಬುದೇನೂ ನಿಜ. ಆದರೆ ಕೀ ಮಾತ್ರ ಅನೇಕರ ಕೈಯಲ್ಲಿ ಓಡಾಡಿದೆ. ಆಗಲೇ ಯಾರೋ ಒಬ್ಬರು ಉಪಾಯವಾಗಿ ಡೂಪ್ಲಿಕೇಟ್ ಕೀ ಮಾಡಿಸಿಕೊಂಡಿರುವುದು ಗ್ಯಾರಂಟಿ.

ಈ ಮಧ್ಯೆ ಐಸಿಐಸಿಐನವರು ಈ ಗೋಡೌನಿನ ಉಸ್ತುವಾರಿಯನ್ನು ಮುಂಬೈ ಮೂಲದ NCMS ಸಂಸ್ಥೆಗೆ ವಹಿಸಿಕೊಟ್ಟರು. ಐಸಿಐಸಿಐನವರ ವೇರ್‌ಹೌಸ್‌ಗಳ ಕಾವಲು ಕಾಯುವ ಕಾಂಟ್ರಾಕ್ಟ್ ಈ NCMS ನವರದ್ದೆ. ಅದೇರೀತಿ ಶಿವಮೊಗ್ಗೆಯಲ್ಲಿ NCMS ಪರವಾಗಿ ಶಂಕರ್ ಸಿಂಗ್ ಎಂಬವ ಬಂದ. ಅಂದರೆ ಗೋಡೌನಿನ ಬೀಗದ ಕೀ ಈಗ ಮೂರನೆಯವರ ಕೈಗೆ ಹೋದಂತಾಯಿತು. ಈ ಮೂವರ ನಡುವಿನ ಕೈ ಬದಲಾವಣೆಯಲ್ಲಿ ಯಾವನು ಡೂಪ್ಲಿಕೇಟ್ ಕೀ ಮಾಡಿಸಿಕೊಂಡನೋ ಒಟ್ಟಿನಲ್ಲಿ ಗೋಡೌನಿನಲ್ಲಿ ಅಡಿಕೆ ಇರಬೇಕಿದ್ದ ಜಾಗದಲ್ಲಿ ಕಲ್ಲು ಮಣ್ಣು ಬಂತು.

2010ರ ಮೇನಲ್ಲಿ ಒಮ್ಮೆ ಸ್ಟಾಕ್ ಚೆಕ್ ಮಾಡಿದಾಗ ಗೋಲ್‌ಮಾಲ್ ಹೊರಬಂತು. ಬ್ಯಾಂಕಿನವರು ಸಾಲ ವಸೂಲಾತಿಯಾಗಿ ಅಡಿಕೆ ಮಾರಲು ಹೊರಟಿದ್ದರು. ಆದರೆ ಅಲ್ಲಿ ಕಲ್ಲು ಮಣ್ಣಿನ ಚೀಲಗಳಿದ್ದವು. ಆಗಲೇ 2010ರ ಜೂನ್ 7ರಂದು NCMSನ ಶಂಕರ್ ಸಿಂಗ್, ಮಂಜುನಾಥನ ವಿರುದ್ಧ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟ.

ಇತ್ತ ಮಂಜುನಾಥ 'ಗೋಡೌನು ನನ್ನ ಉಸ್ತುವಾರೀಲಿ ಇರಲಿಲ್ಲ'ವೆಂದು ಹೇಳಿ ಕೋರ್ಟ್‌ನಿಂದಲೇ ನಿರೀಕ್ಷಣಾ ಜಾಮೀನು ಪಡೆದ. ಈ ನಡುವೆ ಬ್ಯಾಂಕಿನವರು ಮಂಜುನಾಥ ಕೊಟ್ಟಿದ್ದ ಚೆಕ್ ಒಂದನ್ನು ಬೇಕಂತಲೇ ಬೌನ್ಸ್ ಮಾಡಿದರಾದರೂ ಚೆಕ್ ಬೌನ್ಸ್ ಕೇಸ್ ಹಾಕದೆ ರಾಜಿಗಾಗಿ ಓಡಾಡಿದರು. ಇವೆಲ್ಲಾ ರಾದ್ಧಾಂತಗಳು ಮುಗಿದು ಈಗ ಇನ್ನೊಂದು ಸುತ್ತಿನ ಜಗಳ ಶುರುವಾಗಿದೆ. ಐಸಿಐಸಿಐನವರು ವಿನೋಬ ನಗರ ಪೊಲೀಸರಿಗೆ ಮಂಜುನಾಥನೇ ಅಡಿಕೆ ಕಳ್ಳನೆಂದು ಕಂಪ್ಲೇಂಟು ಮಾಡಿದ್ದಾನೆ. ಸದ್ಯಕ್ಕೆ ತಲೆಮರೆಸಿಕೊಂಡಿರುವ ಮಂಜುನಾಥ್ ಎಂದಿನಂತೆ ಅದೇ ರಾಗ ಅದೇ ಹಾಡು ಹೇಳುತ್ತಿದ್ದಾನೆ.

"ಗೋಡೌನಿನ ಕೀ ನನ್ ಹತ್ತಿರ ಇರಲಿಲ್ಲ, ಸೆಕ್ಯುರಿಟಿ ಉಸ್ತುವಾರಿ, ಕೀ ಎಲ್ಲಾ ಬ್ಯಾಂಕ್‌ನವರದ್ದೇ ಜವಾಬ್ದಾರಿ ಆಗಿತ್ತಲ್ಲ, ಶಂಕರ್ ಸಿಂಗ್ ಹಾಗೂ ಬ್ಯಾಂಕಿನವರೇ ಶಾಮೀಲಾಗಿ ಅಡಿಕೆ ಕದ್ದಿದ್ದಾರೆಂದು ಹೇಳುತ್ತಿದ್ದಾನೆ. ಈಗ ತಲೆಬೇನೆಯಾಗಿರುವುದು ಶಿವಮೊಗ್ಗ ಪೊಲೀಸರಿಗೇನೆ. ಅದಕ್ಕೆ ಅವರು ಮಂಜುನಾಥ ಹಾಗೂ ಶಂಕರ್ ಸಿಂಗ್ ಇಬ್ಬರ ಮೇಲೂ ಕೇಸು ಮಾಡಿದ್ದಾರೆ.



ಬಾಗಲಕೋಟೆ ಬಡ ರೈತರ ಎದೆಗೆ ನಿರಾಣಿ ಗುರಾಣಿ!

ಇದು ರಾಜ್ಯ ಕೈಗಾರಿಕಾ ಸಚಿವನಾಗಿದ್ದುಕೊಂಡು ಕ್ರಾಂತಿಕಾರಿಯಂತೆ ಫೋಸು ಕೊಡುತ್ತಿರುವ ಮುರುಗೇಶ್ ನಿರಾಣಿಯ ಕರಾಳ ಮುಖ. ತನ್ನ ಸಕ್ಕರೆ ಸಾಮ್ರಾಜ್ಯ ವಿಸ್ತರಿಸುವ ತೆವಲಿಗೆ ಬಿದ್ದಿರುವ ನಿರಾಣಿ ಬದುಕಿನ ನಡುವೆ ಕಂಗಾಲಾಗಿರುವ ರೈತರೆದೆಗೇ ಗುರಾಣಿ ಎಸೆಯುತ್ತಿರುವ ಅಮಾನವೀಯ ಭೂತಗನ್ನಡಿ ಇದು. ಮಂತ್ರಿಗಿರಿಯ ಪವರ್ರು ಬಳಸಿ ಫಲವತ್ತು ಜಮೀನುಗಳನ್ನು ಬಲಾತ್ಕಾರದಿಂದ ಕಬಳಿಸಿಕೊಳ್ಳುತ್ತಿರುವ ಈತನ ವಿರುದ್ಧ ನೊಂದ ರೈತರೇ ತಿರುಗೇಟು ನೀಡಿದ್ದಾರೆ.

ಮಂತ್ರಿಗಿರಿಯ ಅಮಲಿನಲ್ಲಿ ತಾರಾಡುತ್ತಿರುವ ನಿರಾಣಿ ಸಾಹೇಬನಿಗೀಗ ಬಡಬಗ್ಗರ ಸಂಕಷ್ಟ ಕಿಂಚಿತ್ತೂ ಅರ್ಥವಾಗುತ್ತಿಲ್ಲ. ಹಾಗಂತ ರೈತಾಪಿ ವರ್ಗವಾಗಲಿ, ಆ ಸಮುದಾಯದ ಕಷ್ಟಗಳಾಗಲಿ ಈತನಿಗೆ ಅಪರಿಚಿತವಲ್ಲ. ಯಾಕೆಂದರೀತ ಬೀಳಗಿ ತಾಲೂಕಿನ ಹುಂಚನಾಳ ಗ್ರಾಮದ ಸಾಮಾನ್ಯ ರೈತರೊಬ್ಬರ ಮಗ. ಈ ಕುಟುಂಬ ಯಾವ ರೀತಿಯಿಂದಲೂ ಸ್ಥಿತಿವಂತವಾಗಿರಲಿಲ್ಲ. ಇದರ ನಡುವೆಯೇ ಆಟೋಮೊಬೈಲ್‌ನಲ್ಲಿ ಇಂಜನಿಯರಿಂಗ್ ಪದವಿ ಪೂರೈಸಿದ ನಿರಾಣಿ ಮುಧೋಳದ ಮೂಲೆಯೊಂದರಲ್ಲಿ ನಿರಾಣಿ ಇಂಜಿನಿಯರಿಂಗ್ಸ್ ವರ್ಕ್ಸ್ ಹೆಸರಲ್ಲಿ ಟ್ರಾಕ್ಟರ್ ಟ್ರೇಲರ್ ಮಾಡುವ ಗ್ಯಾರೇಜೊಂದನ್ನು ಶುರು ಮಾಡಿದ. ಇದರಿಂದ ಹುಟ್ಟುತ್ತಿದ್ದ ಪಗಾರ ಹೊಟ್ಟೆಬಟ್ಟೆಗಷ್ಟೇ ಸಾಲುವಂತಿತ್ತು.

ಇದಾದ ಬಳಿಕ ನಿರಾಣಿ ಕೈ ಹಾಕಿದ್ದು ಶುಗರ್ ಮಿಲ್ ದಂಧೆಗೆ. ಮಹಾರಾಷ್ಟ್ರದ ಇಚಲಕರಂಜಿಯ ಶ್ರೀಕಾಂತ ಬಾಹೇತಿ ಎಂಬ ಉದ್ಯಮಿಯ ಪಾಲುದಾರಿಕೆಯಲ್ಲಿ 500 ಟನ್ ಸಾಮರ್ಥ್ಯದ ಶುಗರ್ ಮಿಲ್ ಆರಂಭಿಸುವ ಯೋಜನೆ ಸಿದ್ಧಗೊಂಡು, ಮುಧೋಳ ನಗರದ ಬಾಜಿನಲ್ಲೇ ಮಿಲ್ ತಲೆಯೆತ್ತಿತು. ವಾಸ್ತವವೆಂದರೆ ಆ ಕಾರ್ಖಾನೆ ತಲೆ ಎತ್ತಿದ್ದೇ ಅಕ್ರಮಗಳ ಎದೆಮೇಲೆ. ಇಂಥ ಕಾರ್ಖಾನೆ ಲಾಭದ ಹಾದಿ ಹಿಡಿದದ್ದೇ ನಿರಾಣಿ ಶ್ರೀಕಾಂತ ಬಾಹೇತಿಯನ್ನ ಹೊರಗಟ್ಟಿದ. ಇದು ಜನವಸತಿ ಪ್ರದೇಶಕ್ಕೆ ತೀರಾ ಹತ್ತಿರವಿತ್ತು. ಕಾರ್ಖಾನೆಗಳು ಬಂಜರು ಹಾಗೂ ಕೃಷಿಗೆ ಯೋಗ್ಯವಾಗಿಲ್ಲದ ಪ್ರದೇಶದಲ್ಲಿ ಮಾತ್ರ ನಿರ್ಮಾಣವಾಗಬೇಕೆಂಬ ನಿಯಮವಿದೆ. ಆದರೆ ನಿರಾಣಿಯ ಕಾರ್ಖಾನೆ ಚಿನ್ನದಂಥ ಕೃಷಿ ಭೂಮಿಯನ್ನು ನುಂಗಿ ನಿರ್ಮಾಣವಾಗಿತ್ತು. ಹೀಗೆ ಇಲ್ಲಿಂದ ಆರಂಭವಾದ ನಿರಾಣಿಯ ವಂಚನೆ ಇದೀಗ ಬಡರೈತರ ಸಹನೆ ಕಟ್ಟೆಯೊಡೆಯುವಂತೆ ಬೆಳೆದು ನಿಂತಿದೆ.

ಈ ಕಾರ್ಖಾನೆ ನಿಂತಿರುವುದೇ ಫಲವತ್ತಾದ ಕೃಷಿ ಭೂಮಿಯಲ್ಲಾದ್ದರಿಂದ ಆಸುಪಾಸಲ್ಲೂ ಹಸನಾದ ಹೊಲಗಳಿವೆ. ನಿರಾಣಿ ಅದನ್ನೆಲ್ಲ ಯಾವ ಪರಿ ನುಂಗಿದ್ದಾನೆಂದರೆ, ಕೆಲವೇ ಕೆಲ ಎಕರೆಗಳಲ್ಲಿ ನಿರ್ಮಾಣವಾದ ಕಾರ್ಖಾನೆಯೀಗ ನೂರಾರು ಎಕರೆಗಳಲ್ಲಿ ಮೈಚಾಚಿಕೊಂಡಿದೆ. ಕೇವಲ ಐನೂರು ಟನ್ ಕಬ್ಬು ಅರೆಯುವ ಸಾಮರ್ಥ್ಯವೀಗ ಅಖಂಡ ಹದಿನೈದು ಸಾವಿರದ ಗಡಿದಾಟಿದೆ. ಇಷ್ಟಾದರೂ ನಿರಾಣಿಯ ಭೂದಾಹ ಇಂಗದ ಪರಿಣಾಮವೆಂಬಂತೆ ಮತ್ತೆ ರೈತರ ಭೂಮಿಯತ್ತ ಕಾಕದೃಷ್ಟಿ ಹರಿಸಿದ್ದಾನೆ.

ನಿರಾಣಿಯ ಸಕ್ಕರೆ ಕಾರ್ಖಾನೆಯ ಸುತ್ತ ಕಬ್ಬು ಅರಿಶಿಣದಂಥ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಹೊಲಗಳಿಗೆ ಎ ಗ್ರೇಡ್‌ನ ನೀರಾವರಿ ಸೌಲಭ್ಯವೂ ಇರುವುದರಿಂದ ರೈತರಲ್ಲಿ ಒಂದಷ್ಟು ನೆಮ್ಮದಿ ಮನೆ ಮಾಡಿದೆ. ಇಂಥಾ ಹಸಿರುವಲಯದಲ್ಲಿ ಯಾವುದೇ ರೀತಿಯ ಕೈಗಾರಿಕೆ-ಕಾರ್ಖಾನೆಗಳಿರಬಾರದೆಂಬ ಹೈಕೋರ್ಟ್ ಆದೇಶವನ್ನೇ ಉಲ್ಲಂಘಿಸಿರುವ ನಿರಾಣಿ ರೈತರಿಂದ ಬಲವಂತವಾಗಿ ಜಮೀನು ಕಿತ್ತುಕೊಳ್ಳುವಂಥ ಗೂಂಡಾಗಿರಿಗಿಳಿದಿದ್ದಾನೆ. ರೈತರನ್ನು ಮುಂಡಾಯಿಸಿ ಸಾಮ್ರಾಜ್ಯ ವಿಸ್ತರಿಸುತ್ತಿರುವ ಈತ ಇತ್ತೀಚೆಗೆ ಮತ್ತೊಂದು ಸುತ್ತಿನ ಕಾರ್ಯಾಚರಣೆಗಿಳಿದು ಕೆಐಎಡಿಬಿಯನ್ನೇ ತನ್ನ ಖಾಸಗಿ ಕಂಪೆನಿಯಂತೆ ಬಳಸಿಕೊಂಡಿದ್ದಾನೆ.

ಇಂತಹುದೊಂದು ಅಡ್ನಾಡಿ ಕೆಲಸಕ್ಕೆ ನಿರಾಣಿ 2009 ರಲ್ಲೇ ಸ್ಕೆಚ್ಚು ಹಾಕಿದ್ದ. ಮುಧೋಳ ಹಾಗೂ ಮುಲಾಪುರ ಗ್ರಾಮಗಳಲ್ಲಿ ತನ್ನ ಕಾರ್ಖಾನೆಗೆ ಅಂಟಿಕೊಂಡಿರುವ 400 ಎಕರೆ ಜಮೀನು ಸ್ವಾಧೀನಪಡಿಸಿಕೊಡುವಂತೆ ಕೆಐಎಡಿಬಿಗೆ ಅರ್ಜಿ ಘೇರಾಯಿಸಿದ್ದ. ನೀತಿ-ನಿಯತ್ತುಗಳನ್ನೆಲ್ಲ ನಿರಾಣಿಯ ಪದತಲಕ್ಕೆ ಬಸಿದುಕೊಂಡಿದ್ದ ಕೆಐಎಡಿಬಿ ಅಧಿಕಾರಿಗಳು ತ್ವರಿತ ಗತಿಯಲ್ಲಿ ಕಾರ್ಯತತ್ಪರರಾಗಿ 10.12.2009 ರಂದು ಮುಧೋಳ ಹಾಗೂ ಮೂಲಾಪುರ ಗ್ರಾಮದ 170.27 ಎಕರೆ ಜಮೀನುಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದರು. ಜಮೀನು ಸ್ವಾಧೀನಕ್ಕೆ ತಕರಾರಿದ್ದರೆ ತಿಳಿಸಬೇಕೆಂದು ಕಾಟಾಚಾರಕ್ಕೆ ಹೇಳಿದರು. ಈ ಫಲವತ್ತು ಜಮೀನನ್ನೇ ನೆಚ್ಚಿ ಬದುಕುತ್ತಿದ್ದ ರೈತರಿಗಿದು ಬಹುದೊಡ್ಡ ಶಾಕ್‌ನಂತೆ ಎದುರಾಗಿತ್ತು.

ಈ ರೀತಿ ಕಂಗೆಟ್ಟ ಅಷ್ಟೂ ರೈತರು ದಿನಾಂಕ 4.1.2010 ರಂದು ಕೆಐಎಡಿಬಿಯ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಮನವಿ ಸಲ್ಲಿಸಿ ಯಾವುದೇ ಕಾರಣಕ್ಕೂ ಫಲವತ್ತಾದ ಭೂಮಿ ಬಿಟ್ಟು ಕೊಡುವುದಿಲ್ಲವೆಂದು ತಕರಾರು ಅರ್ಜಿ ಸಲ್ಲಿಸಿದ್ದಾರೆ. ಇದಾಗಿ ತಿಂಗಳು ಸರಿದ ಬಳಿಕ ಖುದ್ದು ನಿರಾಣಿಯನ್ನೇ ಭೇಟಿಯಾಗಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಇದಲ್ಲದೆ ಯೋಜನೆ ಮಾಡುವ ಸಂದರ್ಭದಲ್ಲೂ ಇಲ್ಲಿನ ತಹಶೀಲ್ದಾರ್‌ಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಇದರಿಂದಾಗಿ ತಹಶೀಲ್ದಾರ್ ಕೆಐಎಡಿಬಿ ವರಿಷ್ಠರಿಗೆ ಪತ್ರ ಬರೆದು ಈ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ಮನವಿ ಸಲ್ಲಿಸಿದ್ದರು.

12.3.2010 ರಲ್ಲಿ ಕಂದಾಯ ನಿರೀಕ್ಷಕರು ಸಲ್ಲಿಸಿದ ವರದಿಯಂತೆ ಈ ಜಮೀನುಗಳು ಘಟಪ್ರಭಾ ಎಡದಂಡೆ ಕಾಲುವೆಯ ನೀರಾವರಿ ವ್ಯವಸ್ಥೆ ಪಡೆದು ಫಲವತ್ತಾಗಿರುವಂಥವು. ಈ ಜಮೀನುಗಳಲ್ಲಿ ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಿರುವುದರಿಂದ ಇದನ್ನ ಭೂಸ್ವಾಧೀನಕ್ಕೆ ಒಳಪಡಿಸಲು ಸಾಧ್ಯವಿಲ್ಲ. ಈ ವಿಚಾರ ನಲುಗಿಹೋಗಿದ್ದ ರೈತರಿಗೆ ಕೊಂಚ ನೆಮ್ಮದಿ ಕರುಣಿಸಿತ್ತು.

ಆದರೆ ಈ ಬೆಳವಣಿಗೆ ಫಲವತ್ತಾದ ಜಮೀನಲ್ಲಿ ತನ್ನ ಕಾರ್ಖಾನೆ ವಿಸ್ತರಿಸುವ ಉತ್ಸಾಹದಲ್ಲಿದ್ದ ನಿರಾಣಿಗೆ ತೀವ್ರ ನಿರಾಸೆ, ಜಿದ್ದು ಹುಟ್ಟಿಸಿತ್ತು. ಪಕ್ಕಾ ದುಷ್ಟತನ, ನಾಜೂಕು ನಡೆಗಳನ್ನು ಮೈಗೂಡಿಸಿಕೊಂಡಿರುವ ನಿರಾಣಿ ತನ್ನೊಳಗಿನ ವಾಂಛೆಯನ್ನು ತೋರಗೊಡದೆ, ಇನ್ಮುಂದೆ ಯಾವ ಕಾರಣಕ್ಕೂ ಕೃಷಿಯೋಗ್ಯ ಜಮೀನನ್ನು ಅವರಿಚ್ಛೆಗೆ ವಿರುದ್ಧವಾಗಿ ವಶಪಡಿಸಿಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಖುದ್ದು ತಾನೇ ಕೈಗಾರಿಕಾ ಸಚಿವನಾಗಿದ್ದೂ ರೈತರಿಗೆ ತಲೆಬಾಗಬೇಕಾಯ್ತಲ್ಲ ಎಂಬ ವಿಚಾರ ಖದೀಮ ನಿರಾಣಿಯನ್ನು ಕಾಡುತ್ತಲೇ ಇತ್ತು. ವಾಸ್ತವವೆಂದರೆ, ನಿರಾಣಿ ಇನ್ಮುಂದೆ ರೈತರ ಜಮೀನು ವಶಪಡಿಸಿಕೊಳ್ಳುವುದಿಲ್ಲ ಅಂದ ಕ್ಷಣದಲ್ಲೇ ರೈತರೆದೆಗೆ ಗುರಾಣಿಯ ಗುರಿಯಿರಿಸಿದ್ದ!

ತನ್ನ ಖಾತೆಯ ವ್ಯಾಪ್ತಿಯಲ್ಲಿ ಕೆಐಎಡಿಬಿ ಅಧಿಕಾರಿಗಳಿಗೆ ವಿಪರೀತ ಒತ್ತಡ ಹೇರಲಾರಂಭಿಸಿದ ನಿರಾಣಿ ರೈತರ 170 ಎಕರೆ ಜಮೀನನ್ನು ಯಾವುದೇ ತಕರಾರುಗಳಿಗೆ ಕೇರ್ ಮಾಡದೆ ವಶಪಡಿಸಿಕೊಳ್ಳಲು ಆದೇಶಿಸಿದ್ದ. ಈ ಕುರಿತಾಗಿ ಧಾರವಾಡ ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ 17.5.10 ರಂದು ಮುಧೋಳ ತಹಶೀಲ್ದಾರ್‌ಗೊಂದು ಪತ್ರ ಬರೆದು 'ಈ ಬಗ್ಗೆ ಮೇಲಧಿಕಾರಿಗಳಿಂದ ಒತ್ತಡ ಬರುತ್ತಿದ್ದು, ಖುದ್ದು ಕೆಐಎಡಿಬಿ ವಿಶೇಷ ಅಧಿಕಾರಿಯೇ ದೂರವಾಣಿ ಮೂಲಕ ಮಾತಾಡಿ ಯಾವುದೇ ಪರಿಸ್ಥಿತಿಯಲ್ಲೂ ಎರಡು ದಿನದೊಳಗಾಗಿ ಸರ್ವೆ ಕಾರ್ಯ ಮುಗಿಸಿ ಜಮೀನಿನ ನಕ್ಷೆ ಕಳಿಸಬೇಕು' ಅಂದಿದ್ದಾರೆಂದೂ ಈ ಕೆಲಸ ಬೇಗ ಮುಗಿಸಲೇಬೇಕೆಂದೂ ಆದೇಶಿಸಿದ್ದ.


ಈ ರೀತಿಯದ್ದೊಂದು ನಿರಾಣಿ ಪ್ರಣೀತ ಆದೇಶ ಹಿಡಿದುಕೊಂಡ ಮುಧೋಳ ತಹಶೀಲ್ದಾರ್ ಏಕಾಏಕಿ ಜಮೀನು ಸರ್ವೆಗೆ ಮುಂದಾಗಿದದ್ದೇ, ರೈತರು ತಿರುಗಿ ಬಿದ್ದರು. ಗೂಂಡಾ ಪ್ರವೃತ್ತಿಯ ನಿರಾಣಿ ತನ್ನ ಕಾರ್ಖಾನೆ ಸಿಬ್ಬಂದಿಯನ್ನೇ ಬಿಟ್ಟು ರೈತರನ್ನು ಬೆದರಿಸುವ ಹೀನಮಟ್ಟಕ್ಕೂ ಇಳಿದ.

ಇದೀಗ ತನ್ನ ಕೈಗಾರಿಕಾ ಸಚಿವಗಿರಿಯನ್ನು ಪೂರ್ತಿ ಬಳಸಿಕೊಂಡಾದರೂ ರೈತರ ಭೂಮಿ ನುಂಗಲು ನಿರಾಣಿ ಸಜ್ಜಾಗಿದ್ದಾನೆ. ಹೀಗೇ ಬಿಟ್ಟರೆ 200 ಎಕರೆಯಷ್ಟು ಫಲವತ್ತಾದ ಜಮೀನು ಕೈತಪ್ಪುವ ಆತಂಕಕ್ಕೆ ಬಿದ್ದ ರೈತರು ಕಳೆದ ನಲವತ್ತು ದಿನದಿಂದೀಚೆಗೆ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಲಾರಂಭಿಸಿದ್ದಾರೆ. ಇಲ್ಲೂ ಕೂಡಾ ನಿರಾಣಿ ತನ್ನ ಚೇಲಾಗಳನ್ನು ಅಟ್ಟಿ ಶಾಂತಿಯುತ ಪ್ರತಿಭಟನೆ ಕೆಡಿಸಲು ಇನ್ನಷ್ಟು ಶ್ರಮ ವಹಿಸುತ್ತಿದ್ದಾನೆ.

ಬಡಬಗ್ಗರ ಎದೆಗೆ ಗುರಾಣಿ ಬೀಸುತ್ತಲೇ ಬೆಳೆದು ಬಂದವನು ನಿರಾಣಿ. ಈತನ ವಿರುದ್ಧ ಶಾಂತಿಯುತ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ನ್ಯಾಯ ದೊರಕಲೇಬೇಕಿದೆ. ನಿರಾಣಿಯನ್ನೇ ಮುಂದಿಟ್ಟುಕೊಂಡು ಬಂಡವಾಳ ಸೆಳೆಯುವ ನೆಪದಲ್ಲಿ ನುಂಗುವ ಕನಸು ಕಾಣುತ್ತಿರುವ ಯಡ್ಡಿ ಅದಕ್ಕೆ ಅವಕಾಶ ಕೊಡಬಹುದೆ? ಕೆಐಎಡಿಬಿಯ ಭ್ರಷ್ಟ ಅಧಿಕಾರಿಗಳು ತಮ್ಮ ನಿಯತ್ತನ್ನು ನ್ಯಾಯದ ಕಡೆಗೆ ವಾಲಿಸಿಕೊಳ್ಳುತ್ತಾರೆಯೇ?

ಮೇಲ್ಕಂಡ ಪ್ರಶ್ನೆಗಳಿಗೆ ಸಿಗಬಹುದಾದ ಉತ್ತರದಲ್ಲಿ ಬಡರೈತರ ಬದುಕು ನಿಂತಿದೆ.

• ಮಹಾಲಿಂಗಪ್ಪ ಆಲಬಾಳ



ನಿರಾಣಿಗೆ ಬಿಜೆಪಿಗರೇ ರೆಬೆಲ್

ಮುರುಗೇಶ್ ನಿರಾಣಿಯ ಭೂದಾಹ ಯಾವ ರೀತಿ ಮಿತಿ ಮೀರಿದೆಯೆಂದರೆ, ಖುದ್ದು ಜಿಲ್ಲಾ ಬಿಜೆಪಿ ಪಾಳೆಯವೇ ತಿರುಗಿಬಿದ್ದಿದೆ. ಈ ಪಾಳೆಯ ನಿರಾಣಿ ಹಾವಳಿಯನ್ನು ಹ್ಯಾಗಾದರೂ ಮಾಡಿ ಮಟ್ಟಹಾಕಲು ಪಣತೊಟ್ಟಿದೆ.

ಈ ಹಿನ್ನೆಲೆಯಲ್ಲಿ ನೊಂದ ರೈತರ ನ್ಯಾಯಸಮ್ಮತ ಹೋರಾಟ ನಿರಾಣಿ ವಿರೋಧಿ ಬಿಜೆಪಿ ಬಣದ ವೇದಿಕೆಯಾಗಿ ರೂಪಾಂತರಗೊಂಡಿದೆ. ಸದ್ಯ ಅಖಂಡ ಐವತ್ತು ದಿನಗಳಿಂದ ನಡೆಯುತ್ತಿರುವ ಧರಣಿಯ ನೇತೃತ್ವ ವಹಿಸಿರುವಾತ ರನ್ನ ಸಕ್ಕರೆ ಕಾರ್ಖಾನೆ ಅಧ್ಯಕ್ಷ ರಾಮಣ್ಣ ತಳೇವಾಡ. ಈತ ಈ ಭಾಗದ ಪ್ರಭಾವಿ ಬಿಜೆಪಿ ಮುಖಂಡ!

ತೀರಾ ಬಿಜೆಪಿ ಪಕ್ಷದವರೇ ತಮ್ಮವನೇ ಆದ ನಿರಾಣಿಯನ್ನು ವಿರೋಧಿಸಲು ಕಾರಣವೇನು ಅಂತ ಹುಡುಕಹೊರಟರೆ ಜಿಲ್ಲಾ ರಾಜಕೀಯದ ಒಳಬೇಗುದಿಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತವೆ. ರಾಮಣ್ಣ ತಳೇವಾಡ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳನ ಬಲಗೈ ಬಂಟ. ದಲಿತನಾದರೂ ದಲಿತರ ಸಂಕಷ್ಟಕ್ಕೆ ಮಿಡಿಯದ ಈತ ಮುಧೋಳ ಮತಕ್ಷೇತ್ರದವನು. ಬೆಂಗಳೂರನ್ನೇ ಅಡ್ಡೆಯಾಗಿಸಿಕೊಂಡಿರುವ ಈ ಆಸಾಮಿ ಮುಧೋಳವನ್ನು ಎಂದೋ ಮರೆತು ಬಿಟ್ಟಿದ್ದಾನೆ. ಮತದಾರ ಮುಂದಿನ ಚುನಾವಣೆಯಲ್ಲಿ ಈತನಿಗೊಂದು ಪಾಠ ಕಲಿಸಲು ಸಜ್ಜಾಗಿದ್ದಾರೆ. ಇದೆಲ್ಲ ತಿಳಿದಿದ್ದರೂ ಕೂಡ ಹಣ ಚೆಲ್ಲಿ ಗೆದ್ದರಾಯ್ತೆಂಬ ಹುಂಬತನ ಕಾರಜೋಳನದ್ದು.

ಆದರೆ ಇತ್ತೀಚಿನ ಬೆಳವಣಿಗೆಗಳಲ್ಲಿ ಮುಧೋಳ ಕ್ಷೇತ್ರ ಶಾಶ್ವತವಾಗಿ ನಿರಾಣಿ ಕೈವಶವಾಗುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ನಿರಾಣಿ ತನ್ನ ಮತಕ್ಷೇತ್ರ ಬೀಳಗಿಯನ್ನು ಬಿಟ್ಟು ಇಲ್ಲೇ ಅಡ್ಡ ಹಾಕತೊಡಗಿ ತನ್ನ ಅಕ್ರಮ ಸಕ್ಕರೆ ಸಾಮ್ರಾಜ್ಯವನ್ನು ವಿಸ್ತರಿಸಲಾರಂಭಿಸಿದ್ದಾನೆ. ಇದಕ್ಕೊಂದು ಗತಿ ಕಾಣಿಸಬೇಕೆಂಬ ಉದ್ದೇಶದಿಂದಲೇ ಕಾರಜೋಳ ತನ್ನ ಶಿಷ್ಯ ತಳೇವಾಡನನ್ನು ಎದುರು ಬಿಟ್ಟು ರಣಕಹಳೆ ಊದಿಸುತ್ತಿರುವುದು ವಾಸ್ತವ.

ಗಮನೀಯ ವಿಚಾರವೆಂದರೆ ಇಂಥ ರಾಜಕೀಯ ಒಳಸಂಚುಗಳ ನಡುವೆಯೂ ಈ ಹೋರಾಟ ಸ್ವಾಗತಾರ್ಹವಾದುದು.

ಸಕ್ಕರೆ ದಂಧೇಲಿ ಬಿಜೆಪಿ-ಕಾಂಗ್ರೆಸ್ ನೆಂಟಸ್ತನ!

ಬಳ್ಳಾರಿ ಸೀಮೆಯಲ್ಲಿ ಅವ್ಯಾಹತವಾಗಿರುವ ಅಕ್ರಮ ಗಣಿ ದಂಧೆಯಿದೆಯಲ್ಲಾ? ಇದಕ್ಕೆ ಸೆಡ್ಡು ಹೊಡೆಯಬಲ್ಲ ಏಕೈಕ ಮಾಫಿಯಾವೆಂದರೆ ಅಕ್ರಮ ಸಕ್ಕರೆ ಲಾಬಿ!

ಸಕ್ಕರೆ ಲಾಬಿ ನಡೆಸುವಂಥ ಲಾಭದಾಯಕ ದಂಧೆಯಾಗಿದ್ದರೆ ರೈತರೇಕೆ ಹೀಗಿರುತ್ತಿದ್ದರು ಅಂತೊಂದು ಪ್ರಶ್ನೆ ಹುಟ್ಟುವುದು ಸಹಜ. ಆದರೆ ಇದು ರೈತರನ್ನೂ ಸೇರಿಸಿ ಇಡೀ ಕಾನೂನುಕಟ್ಟಳೆಗಳನ್ನೇ ಯಾಮಾರಿಸಿ ನಡೆಯುತ್ತಿರುವ ಮಹಾ ಮಾಫಿಯಾ. ಸದ್ಯ ಬಾಗಲಕೋಟೆ ಜಿಲ್ಲೆಯಲ್ಲಿದು ತಾರಕಕ್ಕೇರಿದೆ. ಇಂಟರೆಸ್ಟಿಂಗ್ ವಿಚಾರವೆಂದರೆ ರಾಜ್ಯ ರಾಜಕಾರಣದ ಬದ್ಧ ಶತ್ರುಗಳಾದ ಕಾಂಗ್ರೆಸ್-ಬಿಜೆಪಿ ಪಕ್ಷಗಳು ಸಕ್ಕರೆಯ ವಿಚಾರದಲ್ಲಿ ವಿಪರೀತ ಅಕ್ಕರೆಯಿಂದ ನೆಂಟಸ್ತನ ಬೆಳೆಸಿಕೊಂಡಿವೆ!

ಇದಕ್ಕೆ ಪಕ್ಕಾ ಉದಾಹರಣೆಯಂತಿರುವುದು ಬೀಳಗಿ ಶುಗರ್ಸ್ ಕಾರ್ಖಾನೆ. ಇವರಲ್ಲಿ ನಿರಾಣಿ ಹಾಗೂ ಕಾಂಗ್ರೆಸ್ ಸಂಸದ ಎಸ್.ಆರ್. ಪಾಟೀಲ್ ಪಾಲುದಾರರು. ಇನ್ನು ಬಾದಾಮಿಯಲ್ಲಿರುವ ಬಾದಾಮಿ ಶುಗರ್ಸ್ ಕಾಂಗ್ರೆಸ್‌ನ ಮಾಜಿ ಸಚಿವ ಚಿಮ್ಮನಕಟ್ಟಿ ಹಾಗೂ ನಿರಾಣಿ ಪಾಲುದಾರಿಕೆಯದ್ದು. ಈ ಬಾದಾಮಿ ಶುಗರ್ಸ್ ರೈತರನ್ನೇ ಯಾಮಾರಿಸಿ ಹಣ ಗೆಬರಿದ ಕುಖ್ಯಾತಿ ಹೊಂದಿದೆ. ರೈತರಿಂದ ಟನ್ನು ಗಟ್ಟಲೆ ಕಬ್ಬು ಖರೀದಿಸಿ ಅಖಂಡ 9 ಕೋಟಿಯಷ್ಟು ನಾಮ ತೀಡಿದ ವಂಚನೆಯಲ್ಲೂ ಸಹ ನಿರಾಣಿ-ಚಿಮ್ಮನಕಟ್ಟಿ ಪಾಲುದಾರರು! ಈ ಪ್ರಕರಣದಿಂದಾಗಿಯೇ ಬಾದಾಮಿ ಶುಗರ್ಸ್ ಅನ್ನು ಡಿಸಿಸಿ ಬ್ಯಾಂಕ್ ವಶಪಡಿಸಿಕೊಂಡಿದ್ದೀಗ ಇತಿಹಾಸ.

ಇಂಥ ಬಹುತೇಕ ಸಕ್ಕರೆ ಕಾರ್ಖಾನೆಗಳು ಒಂದಿಲ್ಲೊಂದು ಅಕ್ರಮಗಳ ಮೇಲೆಯೇ ತಲೆ ಎತ್ತಿವೆ. ಜಮಖಂಡಿಯ ಹಿಪ್ಪರಗಿಯಲ್ಲಿರುವ ಸಿದ್ದು ಸವದಿ ತಮ್ಮ ಮತ್ತು ನಿರಾಣಿ ಸಹ ಭಾಗಿತ್ವದ ಸಾಯಿಪ್ರಿಯ ಶುಗರ್ಸ್ ಅಂಥಾದ್ದರಲ್ಲಿ ಪ್ರಮುಖವಾದದ್ದು. ಅಖಂಡ 200 ಎಕರೆಯಲ್ಲಿ ಮೈಚಾಚಿಕೊಂಡಿರುವ ಈ ಫ್ಯಾಕ್ಟರಿ ಹಸಿರುವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ!

ಇಂಥಾ ಕಾರ್ಖಾನೆ ಸ್ಥಾಪಿಸುವ ಮುನ್ನ ಕೆಐಎಡಿಬಿಯನ್ನು ವಶಕ್ಕೆ ತೆಗೆದುಕೊಳ್ಳುವ ನಿರಾಣಿ ಐವತ್ತು-ಅರವತ್ತು ಎಕರೆಯನ್ನು ಕೇಳಿದಷ್ಟು ಹಣ ಕೊಟ್ಟು ಖರೀದಿಸುತ್ತಾನೆ. ತದನಂತರ ಮಂತ್ರಿಗಿರಿಯ ಪವರ್ರು ಬಳಸಿ ಆಸುಪಾಸಿನ ಕೃಷಿ ಭೂಮಿಯನ್ನು ಕಬ್ಜಾ ಮಾಡಿಕೊಳ್ಳುತ್ತಾನೆ.

ಈ ಪರಿ ಭೂದರೋಡೆ ಮಾಡುತ್ತಿರುವ ನಿರಾಣಿಯನ್ನು ಸಚಿವನೆಂದು ಒಪ್ಪಿಕೊಳ್ಳಬೇಕಾದದ್ದು ದುರಂತವಲ್ಲದೆ ಮತ್ತೇನು?

ಪ್ರಶ್ನಿಸಿದರೆ ಗೂಂಡಾಗಿರಿಯೇ ಉತ್ತರ!

[illegible] ಗೂಂಡಾಗಿರಿ [illegible] ಉತ್ತರ [illegible]

ಮೊನ್ನೆ ಪರಿಸರ ದಿನದಂದು ತಹಶೀಲ್ದಾರ್ ಕಚೇರಿಯಿಂದ [illegible] ಸಾಂಕೇತಿಕ [illegible] ನಿರಾಣಿಯ ತಮ್ಮ ಅಮರೇಶ್ ನಿರಾಣಿ ಅಖಂಡ [illegible] ಸಜ್ಜಾಗಿ ಬಂದಿದ್ದ ಅವರಲ್ಲ [illegible] ಕೂಗಿದ, ಕತ್ತರಿಸಿ ಹಾಕ್ತೇವೆ ಎಂದು [illegible] ಇದ್ದ ಪೊಲೀಸರೂ ಕೂಡ [illegible]

[illegible]

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ದೊಡ್ಡ ಮನಸ್ಸೊಂದರ ಅನಾವರಣ

'ಆ ದಶಕ'ದಂತಹ ಅಪರೂಪದ ಪುಸ್ತಕವನ್ನು ಕನ್ನಡಿಗರು ಓದುವಂತೆ ಮಾಡಿದ ಲೇಖಕಿ ಕೆ.ಅಕ್ಷತಾ ...ರ ಮುಂದುವರೆದ ಭಾಗವಾಗಿ ಕಡಿದಾಳು ಶಾಮಣ್ಣನವರ ಬದುಕು ಹೋರಾಟಗಳ ಕಥನವನ್ನು 'ಕಾಡತೊರೆಯ ...ಡು'ವಿನಲ್ಲಿ ವಿಶಿಷ್ಟವಾಗಿ ಕಟ್ಟಿಕೊಟ್ಟಿದ್ದಾರೆ. ಈ ಹಿಂದೆ 'ಮಯೂರ', 'ಲಂಕೇಶ್'ಗಳಲ್ಲಿ ಹರಿದ 'ಕಾಡತೊರೆ' ಶಾಮಣ್ಣನವರ ...ಲಕ ಕರ್ನಾಟಕದಲ್ಲಿ ಘಟಿಸಿಹೋದ ಅನೇಕ ಚಾರಿತ್ರಿಕ ವಿದ್ಯಮಾನಗಳ ಅಸಲಿ ಮುಖಗಳು ವರ್ತಮಾನದ ಅರಿವಿನ ...ಲಿಯ ಮೇಲೆ ತೆರೆದುಕೊಳ್ಳುತ್ತವೆ.


'ಆ ದಶಕ'ದಲ್ಲಿ ಶಾಮಣ್ಣನವರ ಬರಹ ಮತ್ತು ಪತ್ರಗಳು ಅವತ್ತಿನ ಬಿಕ್ಕಟ್ಟು ಮತ್ತು ತಲ್ಲಣಗಳೊಂದಿಗೆ ಮಾತಿಗಿಳಿದರೆ, ...ಡತೊರೆ'ಯಲ್ಲಿ ಅವರ ಬದುಕು ನಮ್ಮೊಂದಿಗೆ ಸಾಕ್ಷಿಪ್ರಜ್ಞೆಯಾಗಿ ಅನುಸಂಧಾನಕ್ಕಿಳಿಯುತ್ತದೆ. ಚಳವಳಿಯೊಂದಕ್ಕೆ ತೆತ್ತುಕೊಂಡ ...ನುಷ್ಯನೊಬ್ಬ ಹೋರಾಟದ ಭಾಗವಾಗಿ ತನ್ನ ಸುತ್ತಲ ಜಗತ್ತಿನ ಮನುಷ್ಯಲೋಕದ ದುಃಖ ಸಂಕಟಗಳಿಂದ ಎಲ್ಲವನ್ನೂ ...ಯುತ್ತ ಎಲ್ಲ ಬೆರಗುಗಳನ್ನು ಕಣ್ಣುತುಂಬಿಕೊಳ್ಳುತ್ತಾ, ಯಾರಿಂದಲೂ ಯಾವುದರಿಂದಲೂ ಏನನ್ನು ಪಡೆಯದೆ ಕಡೆಗೆ ...ನ್ನೇ ತಾನು ಕಳೆದುಕೊಂಡು ಅತ್ಯಂತ ವಿನಯದ ದನಿಯಲ್ಲಿ ಮಂಡಿಸಿರುವ ಆತ್ಮಕಥಾನಕವಿದು. ಹೀಗಾಗಿಯೇ ಇಡೀ ...ಯುದ್ದಕ್ಕೂ ಶಾಮಣ್ಣ ನಾಯಕನ ವರಸೆಯ ಅಪ್ಪಣೆ ಘೋಷಣೆಗಳ ಧಿರಿಸು ತೊಡದೆ ಸಾಮಾನ್ಯ ಕಾರ್ಯಕರ್ತನ ...ಗಿಯಲ್ಲೇ ಉಳಿದುಬಿಡುತ್ತಾರೆ. ಇಂತಹ ಶಾಮಣ್ಣನವರ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಸಂದರ್ಭವೊಂದು ರೈತರ ...ವಿದ್ದಾಗಲೇ ಬರುತ್ತದೆ: 'ನಮಗೆ ಅವತ್ತೆ ಸಂಜೆ ನವಲಗುಂದದಲ್ಲಿ ಗೋಲಿಬಾರ್ ಆಗಿ ರೈತರು ಸತ್ತ ಸುದ್ದಿ ತಲುಪಿತು. ...ರುದಿನ ಐದಾರು ಸಾವಿರ ಜನ ಬಾಯಿಗೆ ಕಪ್ಪುಬಟ್ಟೆ ಕಟ್ಟಿಕೊಂಡು ...ನ ಮೆರವಣಿಗೆ ನಡೆಸಿದೆವು. ರೈತರೆಲ್ಲ ಸಂಘಟಿತರಾಗಿ ಶಿಸ್ತಿನಿಂದ ...ವಳಿ ನಡೆಸಿದ್ದು ಬಹುಶಃ ಕರ್ನಾಟಕದ ಇತಿಹಾಸದಲ್ಲೇ ಅದೇ ಮೊದಲ ...ರಿಗಿರಬೇಕು. 'ಏನೇ ಸಿಟ್ಟಿದ್ದರೂ ಅದು ನಿಮ್ಮ ಕಣ್ಣಲ್ಲೆ ವ್ಯಕ್ತವಾಗಬೇಕು ...ತಿನಲ್ಲಿ ಕೂಡ ಅಲ್ಲ. ಕಣ್ಣು ನೋಡಿದರೆ ಸರ್ಕಾರಕ್ಕೆ, ಅಧಿಕಾರಿಗಳಿಗೆ ...ಬೇಕು ರೈತರು ಸಿಟ್ಟಾಗಿದ್ದಾರೆ ಇನ್ನು ನಮ್ಮಾಟ ನಡೆಯಲ್ಲ ಅಂತ' ...ದು ಹೋರಾಟಗಾರರಿಗೆ ಹೇಳಿದ್ವಿ.' ಈ ತರಹದ ಅನೇಕ ತಲ್ಲಣಗಳಿಗೆ ...ಮಣ್ಣ ಬದುಕಿನುದ್ದಕ್ಕೂ ಕಣ್ಣು ಕಿವಿ ದನಿಯಾಗುತ್ತಾರೆ. ಅಕ್ಷರದ ಹೆಸರಿನಲ್ಲಿ ...ಷ ಸ್ಖಲಿಸುವ, ಸಾಹಿತ್ಯದ ಹೆಸರಿನಲ್ಲಿ ಭಾಗವತ ಪುರಾಣ, ವಿಷ್ಣು ...ರಾಣ, ಗರುಡ ಪುರಾಣಗಳನ್ನು ಓದುಗರಿಗೆ ಉಣಬಡಿಸುವ ಈ ...ರಂತದ ಗಳಿಗೆಗಳಲ್ಲಿ ನಮ್ಮ ಕಾಲದ ದೊಡ್ಡ ಮನಸ್ಸೊಂದರ ವ್ಯಕ್ತಿತ್ವವನ್ನು ...ಕ್ಷರಗಳಲ್ಲಿ ಹಿಡಿದಿಟ್ಟ ಅಕ್ಷತಾರಿಗೂ ಮತ್ತು ಶಾಮಣ್ಣನವರ ಬದುಕಿಗೂ ...ತಜ್ಞತೆ ಹೇಳಬೇಕೆನಿಸುತ್ತಿದೆ.



ಕಾಡತೊರೆಯ ಜಾಡು
ಕಡಿದಾಳು ಶಾಮಣ್ಣ
ಸಂಗ್ರಹ ಮತ್ತು ಕೃತಿರೂಪ: ಅಕ್ಷತಾ ಕೆ.
ಪ್ರಕಾಶಕರು: ಅಭಿನವ ಪ್ರಕಾಶನ
ಪುಟಗಳು: 304, ಬೆಲೆ: ರೂ. 150, ಪ್ರಕಟಣೆ: 2011

ರೊಟ್ಟಿ ಮತ್ತು ಹಸಿವಿನ ಧ್ಯಾನದಲ್ಲಿ...

ರೊಟ್ಟಿ ಹಸಿವಿಗೆ ಮುಖ್ಯವಾಗುವ
ಕ್ಷಣ ಕ್ಷಣಿಕ
ಹಸಿವಿನ ಅಪಾರ
ಸಾಧ್ಯತೆಗಳ ಮುಂದೆ
ಆದ್ಯತೆಗಳೂ ಬದಲಾಗುತ್ತದೆ.
ಅಂತಿಮ ಕ್ಷಣದಲ್ಲಿ ರೊಟ್ಟಿಗೆ
ತನ್ನ ಪಾತ್ರ ಮತ್ತು ಸ್ಥಾನದ
ಅರಿವಾಗುತ್ತದೆ.



ರೊಟ್ಟಿ ಮತ್ತು ಹಸಿವಿನ ಸುತ್ತ ಲೇಖಕಿ ರೂಪ ಹಾಸನರು ಬರೆದ 64 ಕಿರು ಪದ್ಯಗಳ ಒಟ್ಟು ಮೊತ್ತವೇ 'ಗಳಿಗೆಬಟ್ಟಲ ತಿರುವುಗಳಲ್ಲಿ'. ಇಲ್ಲಿನ ಎಲ್ಲ ಪದ್ಯಗಳು ರೊಟ್ಟಿ ಮತ್ತು ಹಸಿವನ್ನು ಧ್ಯಾನಿಸಿ ಬರೆದಂತಹವು. ರೊಟ್ಟಿ ತಟ್ಟುವುದರಲ್ಲಿ ಕವಿ ಎಲ್ಲೂ ಹದ ತಪ್ಪಿಲ್ಲ; ಇಲ್ಲಿನ ಹಸಿವು ಕಾವ್ಯದ ಕ್ಷಣಗಳಿಗೆ ಹೊಸ ರೂಪಕಗಳನ್ನು ತೊಡಿಸಿದೆ. ಇಲ್ಲಿನ ರೊಟ್ಟಿ ಮತ್ತು ಹಸಿವು ಒಂದೇ ಮೈದಾನದಲ್ಲಿ ಸ್ನೇಹಕ್ಕೂ ಕುಸ್ತಿಗೂ ಇಳಿಯುತ್ತವೆ. ರೊಟ್ಟಿ ಮತ್ತು ಹಸಿವಿನ ಅಗಾಧ ಸಾಧ್ಯತೆಗಳನ್ನು ಅನೇಕ ಮಗ್ಗಲುಗಳಿಂದ ವಿಸ್ತರಿಸಿರುವುದರಿಂದಲೆ ಇಲ್ಲಿನ ಪದ್ಯಗಳು ವಾಚ್ಯವಾಗುವ ಅಪಾಯದಿಂದ ಪಾರಾಗಿವೆ.

ರುಚಿ ರೊಟ್ಟಿಯಲ್ಲಿಲ್ಲ
ಹಸಿವಿನಲ್ಲಿ
ಸುಮ್ಮನೆ ಪಾಪಪ್ರಜ್ಞೆ,
ಪಾಪದ ರೊಟ್ಟಿಗೆ.
ತಪ್ಪು ರೊಟ್ಟಿಯದೂ ಅಲ್ಲ
ಹಸಿವಿನದೂ ಅಲ್ಲ
ಚಾಣಾಕ್ಷ ರುಚಿಯದು.

'ವಿಶೇಷವೆಂದರೆ ರೊಟ್ಟಿ ಹಸಿವಿನ ಸಂಬಂಧ ಮೂಲದಲ್ಲಿ ಜನ್ಯವಾಗುವ ಈ ಅನುಭಾವ ಆಕಾಶಗಾಮಿಯಾಗುವುದಲ್ಲ; ಬದಲಾಗಿ ಬದುಕಿನ ಬಯಲನ್ನು ಬಿತ್ತಿ ಬೆಳೆಯುವ ನೇಗಿಲ ಸಂತನಾಗುವುದು' ಎಂಬ ಎಸ್.ಜಿ.ಸಿದ್ದರಾಮಯ್ಯನವರ ಮುನ್ನುಡಿಯ ಸಾಲುಗಳು ಹಾಗೂ 'ಪದ್ಯಗಳನ್ನು ಓದಿ ಮುಗಿಸಿದ ನಂತರವೂ ಓದುಗನಿಗೆ ರೊಟ್ಟಿಯಾಸೆಯ ಹಸಿವು ಉಳಿದಿರುತ್ತದೆ' ಎಂಬ ಯು.ಆರ್.ಅನಂತಮೂರ್ತಿಯವರು ಬೆನ್ನಿಗಿದ್ದು ಹೇಳಿರುವ ಮಾತುಗಳು ರೊಟ್ಟಿಯ ಆಕಾರವನ್ನು ಹಸಿವಿನ ಅನಂತತೆಯನ್ನು ಕವಿ ಕಾವ್ಯದಲ್ಲಿ ಕಂಡುಕೊಂಡಿರುವ ಹೊಸ ಮಾದರಿಯನ್ನು ಓದುವಂತೆ ಮಾಡುತ್ತವೆ. ಪಡೆಯುವ ಅರ್ಹತೆ ಕೊಡುವ ಘನತೆಯ ನಡುವಿನ ಒಪ್ಪಂದವೇ ಹಸಿವು ರೊಟ್ಟಿಯ ಸಂಬಂಧವನ್ನು ಏರ್ಪಡಿಸುತ್ತದೆ ಎಂದು ಹೇಳಲು ಹೊರಟಿರುವ ಈ ಕೃತಿ ಕನ್ನಡದ ಕಾವ್ಯ ಪ್ರಕಾರಕ್ಕೆ ವಿಶಿಷ್ಟ ಸೇರ್ಪಡೆ.

ಗಳಿಗೆಬಟ್ಟಲ ತಿರುವುಗಳಲ್ಲಿ
ಲೇಖಕರು: ರೂಪ ಹಾಸನ,
ಪ್ರಕಾಶಕರು: ಸಿರಿವರ ಪ್ರಕಾಶನ
ಪುಟಗಳು: 86, ಬೆಲೆ: ರೂ. 60, ಪ್ರಕಟಣೆ:2010

ಚೆಡ್ಡಿ ಭೈರಣ್ಣನಿಗೊಬ್ಬ ವಿಮರ್ಶಕ ಸಿಕ್ಕನಂತಲ್ಲಾ, ಥೂತ್ತೇರಿ

ಥೂತ್ತೇರಿ ಯಾಹೂ

ಸಂತೆ ಶಿವರದ ಚೆಡ್ಡಿ ಭೈರಣ್ಣನವರಿಗೆ ಕಡೆಗೂ ಕನ್ನಡ ಸಾಹಿತ್ಯ ಲೋಕದಿಂದ ನ್ಯಾಯ ಸಿಕ್ಕಿದೆಯಂತಲ್ಲಾ. "ನವ್ಯೋದಯದ ದಿಗ್ಗಜರ ಕಾಲದಿಂದ ಹಗಲುರಾತ್ರಿ ಕೆರೆಯುತ್ತ ಅಸಂಖ್ಯಾತ ಕಾದಂಬರಿಗಳನ್ನು ಸೃಷ್ಟಿಸುತ್ತ ನಿಷ್ಕಾಮಂತ ಪ್ರಕಾಶಕರಿಂದ ಅವುಗಳನ್ನು ಮಾರಿಸುತ್ತ ಚಿಲ್ಲರೆ ಕಾಸನ್ನೂ ಬಿಡದೆ ಪೈಟು ಪೈ ವಸೂಲು ಮಾಡುತ್ತ ಬರುತ್ತಿದ್ದ ಚೆಡ್ಡಿ ಭೈರಣ್ಣನನ್ನು ಕನ್ನಡ ಸಾಹಿತ್ಯದ ವಿಮರ್ಶಾ ಲೋಕ ಉದ್ದೇಶಪೂರ್ವಕವಾಗಿ ಅಸ್ಪೃಶ್ಯವಾಗಿ ನಡೆಸಿಕೊಂಡಿದೆ. ಹೊಟ್ಟೆಕಿಚ್ಚಿನಿಂದ ನರಳಿದೆ. ಅವರ ದಾರಿಗೆ ಮುಳ್ಳು ಎಳೆದಿದೆ. ಅವರಿಗೆ ಬರಬಹುದಾದ ಪ್ರಶಸ್ತಿಗೆ ಅಡ್ಡಗಾಲಾಕಿದೆ. ಆದರೂ ಛಲಬಿಡದ ತ್ರಿವಿಕ್ರಮನಂತೆ ನಮ್ಮ ಭೈರಣ್ಣ ತನ್ನ ಭೈರಿಗೆಯನ್ನು ಆಳವಾಗಿ ಆಳವಡಿಸುತ್ತಲೇ ಬಂದಿದ್ದಾರೆ" ಎಂದು ಲಾಠಿ ಬಿಟ್ಟು ಲೇಖನಿ ಹಿಡಿದ ಪ್ರತಿಭೆಯೊಂದು ಪ್ರಲಾಪಿಸಿದೆಯಂತಲ್ಲಾ, ಥೂತ್ತೇರಿ!


* * * *

ಯಾವ ಕಡೆಯಿಂದ ನೋಡಿದರೂ ಚೆಡ್ಡಿ ಭೈರಣ್ಣನವರು ರಾಷ್ಟ್ರೋತ್ಥಾನ ಪ್ರಕಾಶನದ ಶ್ರೇಷ್ಠ ಸಾಹಿತಿ. ದೈತ್ಯ ಬರಹಗಾರ. ಅವರ ಮೊದಲ ಕಾದಂಬರಿಯಿಂದ ಹಿಡಿದು 'ಕವಲಿ'ನವರೆಗೂ ಪ್ರಕಟವಾಗಬೇಕಿದ್ದ ಜಾಗ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತು. ಭೈರಣ್ಣನ ಮನಸ್ಸು ಕೆಲಸ ಮಾಡುತ್ತಿರುವ ಮಜಲನ್ನು ಗುರುತಿಸಿದ ಕನ್ನಡದ ವಿಮರ್ಶಕರು ಅವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ತಮ್ಮ ಅರ್ಥಪೂರ್ಣ ಬರಹ ಮತ್ತು ಕೆಲಸದಲ್ಲಿ ತೊಡಗಿದ್ದರು. ಅದಕ್ಕಿಂತ ಕನ್ನಡದಲ್ಲಿ ಯಾವ ಹೊಸ ಕಾದಂಬರಿ ಬಂದರೂ ಅದನ್ನು ಬಿಡದೆ ಓದಿ, ತಮ್ಮ ವಿಮರ್ಶಾ ಸಾಲುಗಳ ಮಧ್ಯೆ ಸೇರಿಸಿಕೊಂಡು ಅವುಗಳಿಗೆ ನ್ಯಾಯ ಒದಗಿಸುತ್ತಿದ್ದರು. ಕುರ್ತಕೋಟಿಯಂತಹ ವಿಮರ್ಶಕರೆ ಭೈರಣ್ಣನ ಸಾಹಿತ್ಯವನ್ನು ಮುಟ್ಟದೆ ಅವರ ಮನೆಯ ಅಡಿಗೆ ಪರಿಕರಗಳನ್ನು ಮಾತ್ರ ಮೆಚ್ಚಿ ಮಾತನಾಡುತ್ತಿದ್ದರು ಎಂಬುದೇ ಅಧ್ಯಯನ ಯೋಗ್ಯವಾದ ವಿಷಯವಲ್ಲವೇ, ಥೂತ್ತೇರಿ!!

* * * *

ಭೈರಣ್ಣನ 'ಕವಲು' ಚಿಗುರೊಡೆದಿದೆ. ಈ ಚಿಗುರೆಲ್ಲಾ ಹಾಹಾಸುಕಳ್ಳೆ ಹೂವಿನಂತೆ ಕಂಗೊಳಿಸುತ್ತ ಭೈರಣ್ಣನ 'ಆವರಣ'ದೊಳಗೆ ಅರಿಕೊಂಡು ಕನ್ನಡ ಸಾಹಿತ್ಯದೊಳಗೆ ಎರ್ರಾಬಿರ್ರಿ ಲಾಠಿ ಬೀಸುತ್ತ ಹೊರಟಿರುವುದನ್ನು ನೋಡಿದ ಕನ್ನಡ ಸಾಹಿತ್ಯದ ಮನಸ್ಸುಗಳು "ಅಂತೂ ಭೈರಪ್ಪನ ಸಾಹಿತ್ಯಕ್ಕೆ ಮತ್ತು ಪ್ರಚಾರಕ್ಕೆ ಪಾರಸುದಾರರು ಹುಟ್ಟಿಕೊಂಡರು. ಹಾಗೇ ಇದ್ದರೆ ಭೈರಣ್ಣನಿಗೆ ಸಿಗಬೇಕಾದ ಗೌರವ ಸಿಗುತ್ತಿತ್ತೇನೋ. ಇನ್ನು ಮುಂದೆ ಅದೂ ಸಿಗದಂತೆ ಅವರ ಕವಲಿನ ಕುಡಿಗಳು ಮಾಡುತ್ತವೆ" ಎಂದು ಅರಿಕೊಂಡರಂತಲ್ಲಾ, ಅದೇನೇ ಆಗಲಿ, ಇಂತಹದ್ದನ್ನೆಲ್ಲ ಬರೆಸುತ್ತ ಕುಳಿತ ಅಡಿಗೆ ಭಟ್ಟ ಕನ್ನಡ ಸಾಹಿತ್ಯವನ್ನು ಏನೆಂದು ತಿಳಿದ ಎಂಬುದೇ ಸಮಸ್ಯೆಯಾಗಿದೆಯಂತಲ್ಲಾ, ಥೂತ್ತೇರಿ!!

* * * *



ಇಷ್ಟಕ್ಕೂ ನಮ್ಮ ಭೈರಣ್ಣನ ಸಾಹಿತ್ಯದಲ್ಲಿರುವ ಕೆಲವು ಜೋಕ್ ಇಂತಿವೆ:


ಹರಿಜನರು ದೇವಸ್ಥಾನಕ್ಕೆ ನುಗ್ಗಿದರೆ ಮೂರ್ಛೆ ಹೋಗುತ್ತಾರೆ. ಅಂತರ್ಜಾತಿ ವಿವಾಹವಾದರೆ ಅಬಾರ್ಷನ್ ಆಗುತ್ತದೆ. ಆದರಲ್ಲೂ ವಿಧವೆಯರನ್ನು ಮದುವೆಯಾದರೆ ಒಂದು ಮಕ್ಕಳೂ ಉಳಿಯುವುದಿಲ್ಲ. ಹಿಂದೂ ಹುಡುಗಿ ಮುಸ್ಲಿಂ ಹುಡುಗ ಮದುವೆಯಾದರೆ ಸಂಭೋಗಕ್ಕೆ ಮುನ್ನ ಈ ದೇಶದಲ್ಲಿ ಸಾಬರು ಧ್ವಂಸ ಮಾಡಿದ ದೇವಸ್ಥಾನಗಳ ಬಗ್ಗೆಯೇ ಮಾತನಾಡುತ್ತಾರೆ. ಕ್ರಿಶ್ಚಿಯನ್ನರ ಮಾತಿನಲ್ಲಿ ಮತಾಂತರದ ಹುನ್ನಾರವಿರುತ್ತದೆ. ಆದ್ದರಿಂದ ಅವರು ಕಾಫಿ ಕೊಡಲು ಬಂದಾಗ ಕೆನ್ನೆಗೆ ಹೊಡೆಯಬೇಕು. ಯಾವುದೇ ಊರಿನ ಮುಂಭಾಗದಲ್ಲಿ ಕ್ರಿಶ್ಚಿಯನ್ನರು ಒಂದು ಕಾಲದಲ್ಲಿ ಚುರುಮುರಿ ಮಾರುತ್ತಿದ್ದರು. ಯಾವುದೇ ಊರಿನ ಕೋಟೆ ಒಡೆದಿದ್ದರೆ ಅದಕ್ಕೆ ಟಿಪ್ಪು ಸುಲ್ತಾನನೇ ಕಾರಣ.

ಭೈರಣ್ಣನ ಲೇಖನಿಗಿಂತ ಲಾಠಿಯೇ ಬಿರುಸಾದ ಕಾರಣಕ್ಕೆ ಉದ್ಭವಿಸಿದ ಅವರ ಸಾಹಿತ್ಯದ ಸಮಸ್ಯೆಗಳು ಇವು. ಇನ್ನು "ಮಹಾಭಾರತದ ಪಾತ್ರಗಳು ಪರಿಪೂರ್ಣವಾಗಿಲ್ಲ, ಆದ್ದರಿಂದ ಅವುಗಳನ್ನು ಸರಿಮಾಡುತ್ತೇನೆ" ಎಂದು ಭಾರತಕ್ಕೆ ಕೈಹಾಕಿದ ಭೈರಣ್ಣ ಶ್ರೀಕೃಷ್ಣನ ಪಾತ್ರವನ್ನು ಜಾರ್ಜ್ ಫರ್ನಾಂಡಿಸ್ ಪಾತ್ರ ಮಾಡಿ ಮಡಗಿದ್ದ. ಇದರಿಂದ ಸಿಟ್ಟಿಗೆದ್ದ ಚೆಡ್ಡಿಗಳು ಭೈರನನ್ನೇ ಬಹಿಷ್ಕರಿಸಿದ್ದವು. ಇನ್ನು ಭೈರನಿಗೆ ಪ್ರಿಯವಾದ ಭೀಮನನ್ನು ವೈಭವೀಕರಿಸಲು ಹೋಗಿ ದುರ್ಯೋಧನನನ್ನೇ ಅಡ್ವಾಣಿಯಂತಹ ಅಸಂಬದ್ಧ ಪಾತ್ರ ಮಾಡಿದ್ದ. ಉಮಾಭಾರತಿ ಮತ್ತು ದ್ರೌಪತಿ ಒಂದೇ ತರ ಇದ್ದಾರೆ. ಶಲ್ಯ ಥೇಟ್ ಮೈ.ಚ. ಜಯದೇವನಂತಿದ್ದಾನೆ. ವಿಧುರನಂತೂ ಥೇಟ್ ಭೈರಪ್ಪನ ಅಪ್ಪ ಚೆನ್ನಿಗರಾಯನೆ. ಹೀಗೆ ಮಹಾಭಾರತವನ್ನೆ ಹಾಳು ಮಾಡಿದ ಭೈರಣ್ಣನ ಪರ್ವದ ಬಗ್ಗೆ ಚೆಡ್ಡಿಗಳು ಚಕಾರವೆತ್ತದೆ, ಬರೀ ಧರ್ಮಶ್ರೀ, ಆವರಣ, ಕವಲು ಕುರಿತು ವರಲುತ್ತಿವೆಯಂತಲ್ಲಾ, ಥೂತ್ತೇರಿ!

* * * *

ಭ್ರಷ್ಟಾಚಾರಿಗೆ ಜ್ಞಾನೋದಯವಾದಾಗ ಒಳ್ಳೆ ಕೆಲಸ ಮಾಡಲು ಶಪಥ ಮಾಡುತ್ತಾನೆ. ಉದಾಹರಣೆ ಎಡೂರಪ್ಪ ಇನ್ನೆರಡು ವರ್ಷ ಒಳ್ಳೆ ಕೆಲಸ ಮಾಡುತ್ತಾರಂತೆ. ಸಿಕ್ಕಿಬಿದ್ದ ವ್ಯಭಿಚಾರಿ ಇನ್ನು ಮುಂದೆ ಯಾರನ್ನೂ ಕಣ್ಣೆತ್ತಿ ನೋಡುವುದಿಲ್ಲವೆಂದು ಶಪಥ ಮಾಡುತ್ತಾನಂತೆ. ಅಕ್ರಮ ಆಸ್ತಿ ಗಳಿಕೆಯ ಜನ ದೇವಸ್ಥಾನ ಕಟ್ಟಿಸುತ್ತಾರಂತೆ ಇಲ್ಲವೆ ದೇವರಿಗೆ ಒಡವೆಗಳನ್ನು ಅರ್ಪಿಸುತ್ತಾರಂತೆ. ಈ ಲೋಕಕ್ಕೇ ನೀತಿಹೇಳುವ ಬರಹಗಾರ ಅಕ್ರಮವೆಸಗಿ ಸಿಕ್ಕಿಬಿದ್ದಾಗ, ಹಗಲೂ ರಾತ್ರಿ ಓದಿ ಒಳ್ಳೆಯದನ್ನು ಬರೆಯಲು ಯತ್ನಿಸುತ್ತಾನಂತೆ. ಹಾಗೆಯೇ ಹೆಸ್ಸನ್ನೇ ಲಾಠಿಯಂತೆ ಬಳಸುವ ಎಳಸು ಮತೀಯನೊಬ್ಬ ಚೆಡ್ಡಿ ಭೈರಣ್ಣನಿಗೆ ನ್ಯಾಯ ದೊರಕಿಸಿಕೊಡಲು ಹೆಣಗಾಡುತ್ತಿರುವುದು ಕನ್ನಡ ಸಾಹಿತ್ಯ ಲೋಕ ಕಂಡರಿಯದ ತಮಾಷೆಯಾಗಿದೆಯಂತಲ್ಲಾ, ಥೂ.ಥೂ ಥೂತ್ತೇರಿ!!

ಯ್ಗೋ



ಫೈಜ್‌ಗೆ ನೂರು

ಫೈಜ್ ಅಹಮದ್ ಫೈಜ್ ಬದುಕಿದ್ದರೆ ಈ ಫೆಬ್ರವರಿಗೆ ಅವರಿಗೆ ನೂರು ವರ್ಷ ತುಂಬುತ್ತಿತ್ತು. ಫೈಜ್ ತುಂಬಾ ಜನರ ಫೇವರಟ್ ಕವಿ. ಪ್ರೇಮದ ಬಗ್ಗೆ ಮುಟ್ಟಿದರೆ ಮುದುರೀತು ಅನ್ನುವಷ್ಟು ಕೋಮಲ -ಮಧುರವಾಗಿ ಮತ್ತು ಕ್ರಾಂತಿಯ ಬಗ್ಗೆ ಖಡ್ಗದಷ್ಟು ಕಟ್ಟಿಂಗ್ ಆಗಿ ಬರೆಯಬಲ್ಲ ಕವಿ ಫೇವರಟ್ ಆಗದೆ ಇರಲಿಕ್ಕೆ ಹೇಗೆ ಸಾಧ್ಯ ಅಲ್ಲವಾ? "ಮೇರೆ ಮೆಹಬೂಬ್ ಮುಝೆ ಪೆಹಲೀಸಿ ಮೊಹಾಬ್ಬತ್‌ನ ಮಾಂಗ್"ನಂತ ಕವಿತೆಗಳಲ್ಲಿಯಂತೂ ಫೈಜ್ ಇವನ್ಯಾವ ಮಾಯಕಾರನಪ್ಪ ಅನ್ನಿಸುವ ಹಾಗೆ ಪ್ರೇಮ ಮತ್ತು ರೋಮಾಂಟಿಕ್ ಪ್ರೇಮದಾಟದ ಕ್ರೂರ ಪ್ರಪಂಚ ಎರಡರ ಬಗ್ಗೆಯೂ ಬರೆಯುತ್ತಾನೆ. ಈ ಪದ್ಯದಲ್ಲಿ ಆಧುನಿಕ ಕಾವ್ಯ ಮತ್ತು ಸಾಂಪ್ರದಾಯಿಕ ಉರ್ದು ಕವಿತ್ವದ ಭಾವುಕ, ಭಾವಗೀತಾತ್ಮಕ ಪ್ರತಿಮೆಗಳನ್ನು ಒಟ್ಟೊಟ್ಟಿಗೆ ಬಳಸುತ್ತಾನೆ ಈ ಮಾರ್ಕ್ಸಿಸ್ಟ್ ಕವಿ.

ಈತ ಕವಿಯಷ್ಟೇ ಅಲ್ಲದೆ ಪತ್ರಕರ್ತ, ಸಂಸ್ಕೃತಿ ಚಿಂತಕ, ಗದ್ಯ ಬರಹಗಾರ, ಅನುವಾದಕ, ಹೋರಾಟಗಾರ ಇತ್ಯಾದಿ. ಪಾಕಿಸ್ತಾನ್ ಟ್ರೇಡ್ ಯೂನಿಯನ್ ಫೆಡರೇಷನ್ನಿನ ಮೊದಲ ಉಪಾಧ್ಯಕ್ಷನಾಗಿ ಮತ್ತು ದೇಶದ ಅಂಚೆ ತೆರಪು ಇಲಾಖೆಯ ನೌಕರರ ಮತ್ತು ರೈಲ್ವೆ ಇಲಾಖಾ ನೌಕಾರರ ಸಂಘಟಕನಾಗಿ ಕೆಲಸ ಮಾಡಿದವ. ಪಾಕಿಸ್ತಾನ ಯುದ್ಧ ಹೂಡಿದಾಗಲೆಲ್ಲಾ ಯುದ್ಧ ವಿರೋಧಿ ಪದ್ಯಗಳನ್ನು ಬರೆದು "ದೇಶದ್ರೋಹಿ" ಅಂತಲೂ ಕೆಲವರಿಂದ ಅನ್ನಿಸಿಕೊಂಡವನು. ಝುಲ್ಫಿಕರ್ ಅಲಿ ಭುಟ್ಟೋ ಆಳ್ವಿಕೆಯ ಕೆಲ ವರ್ಷಗಳು ಪ್ರಭುತ್ವಕ್ಕೆ ಹತ್ತಿರದವನಾದ ಫೈಜ್ ಈ ಸಮಯದಲ್ಲಿ ಪಾಕಿಸ್ತಾನ್ ಆರ್ಟ್ಸ್ ಕೌನ್ಸಿಲ್ ಸಂಸ್ಥಾಪಿಸಿದ. ಭುಟ್ಟೋ ಗಲ್ಲಿಗೇರಿಸಿದ ಜಿಯಾನ ಕಾಲದಲ್ಲಿ ದೇಶ ಬಿಟ್ಟು ಹೋಗಬೇಕಾಯಿತು. ಈ ಸಂದರ್ಭದಲ್ಲಿ ಎಡ್ವರ್ಡ್ ಸಯಿದ್ ಮತ್ತು ಫೈಜ್ ಭೇಟಿ ಆಗಿದ್ದರಂತೆ. ಈ ಭೇಟಿಯ ಬಗ್ಗೆ ಇಬ್ಬರೂ ಬರೆದಿದ್ದಾರೆ? ಒಟ್ಟಾರೆಯಾಗಿ ಫೈಜ್‌ನ ವ್ಯಕ್ತಿತ್ವದ ಈ ಎಲ್ಲಾ ಮುಖಗಳು ಅವನ ಪದ್ಯಗಳಲ್ಲಿ ಕಾಣುತ್ತವೆ.

ಶತಮಾನೋತ್ಸವಗಳು ಸಾಮಾನ್ಯವಾಗಿ ತುಂಬಾ ಸುದ್ದಿ ಸಭೆ ಸಮಾರಂಭಗಳನ್ನು ಹುಟ್ಟಿಹಾಕುತ್ತವೆ. ಆದರೆ ಫೈಜ್ ವಿಷಯದಲ್ಲಿ ಅಲ್ಲೊಂದು ಇಲ್ಲೊಂದು ಬಿಟ್ಟರೆ ಹೆಚ್ಚು ಸುದ್ದಿ ನಮ್ಮಲ್ಲಂತೂ ಕಾಣುತ್ತಿಲ್ಲ, ಎಲ್ಲಾ "ಪಾಕಿ"ಗಳ ಬಗ್ಗೆ ನಮಗೆ ಇರುವ ಅನುಮಾನದ ಅಭಿವ್ಯಕ್ತಿ ಇದಾಗಿರಬಹುದೋ ಅಥವಾ ಅಷ್ಟಾಗಿ ಈ ವಿಷಯ ಯಾರ ಗಮನಕ್ಕೂ ಬಂದಿಲ್ಲವೋ ಗೊತ್ತಿಲ್ಲ. ಪಾಕಿಸ್ತಾನದಲ್ಲಿ ಕತೆ ಏನೋ.

ಫೈಜ್ ಪದ್ಯಗಳು ಸುಮಾರಷ್ಟು ಕನ್ನಡಕ್ಕೆ ಬಂದಿವೆ. ಮೂರು ಸಣ್ಣ ಪದ್ಯಗಳನ್ನು ಇಲ್ಲಿ ಅನುವಾದ ಮಾಡಿದ್ದೇನೆ.

ನೆನಪು

ಹಾಳು ಬಿದ್ದ ತೋಟಕ್ಕೆ ಮೆಲ್ಲನೆ ವಸಂತ ಕಾಲಿಟ್ಟಂತೆ
ಬೆಳಗಿನ ತಂಗಾಳಿ ಬೆಂಗಾಡಲ್ಲಿ ಕಮ್ಮನೆ ಬೀಸಿದಂತೆ
ನರಳುವ ರೋಗಿ ನೆಪವೇ ಇಲ್ಲದೆ ಗೆಲುವಾದಂತೆ
ನಿನ್ನೆ ರಾತ್ರಿ ನಿನ್ನ ಕಳೆದು ಹೋದ ನೆನಪು
ಸುಮ್ಮಸುಮ್ಮನೆ ಬಂದು ನನ್ನೆದೆ ಕದ ತಟ್ಟಿತು.

ಚಿಂತೆ ಇಲ್ಲ

ಮಂದಿ ನನ್ನ ಶಾಯಿ-ಲೇಖನಿ ಕಿತ್ತುಕೊಂಡರೆ ಚಿಂತೆ ಇಲ್ಲ
ಬೆರಳನ್ನೇ ಅದ್ದಿದ್ದೇನೆ ಗುಂಡಿಗೆಯ ಬಿಸಿ ರಕ್ತದಲ್ಲಿ
ನಾಲಿಗೆಗೆ ಸಂಕೋಲೆ ಹಾಕಿದರೆ ಚಿಂತೆ ಏನೇನೂ ಇಲ್ಲ
ಸರಪಳಿಯ ಉಂಗುರುಂಗುರವೂ ಉಸಿರೀತು ನನ್ನ ಮಾತು.

ಮಾತಾಡು

ತುಟಿಗಳಿಗೆ ಅಂಕೆ ಇಲ್ಲ
ಆಡು ಮಾತಾಡು
ನಾಲಿಗೆ ಇನ್ನೂ ನಿನ್ನದೇ
ಆಡು ಮಾತಾಡು.
ದೇಹ ನಿನ್ನ ಸ್ವಂತದ್ದು
ಆಡು ಮಾತಾಡು.
ಜೀವ ಇನ್ನೂ ಉಳಿದಿದೆ
ಆಡು ಮಾತಾಡು

ಶತಮಾನೋತ್ಸವಗಳು ಸಾಮಾನ್ಯವಾಗಿ ತುಂಬಾ ಸುದ್ದಿ, ಸಭೆ ಸಮಾರಂಭಗಳನ್ನು ಹುಟ್ಟಿಹಾಕುತ್ತವೆ. ಆದರೆ ಫೈಜ್ ವಿಷಯದಲ್ಲಿ ಅಲ್ಲೊಂದು ಇಲ್ಲೊಂದು ಬಿಟ್ಟರೆ ಹೆಚ್ಚು ಸುದ್ದಿ ನಮ್ಮಲ್ಲಂತೂ ಕಾಣುತ್ತಿಲ್ಲ.

ನೋಡು ಕಮ್ಮಾರನ ಕುಲುಮೆಯಲಿ
ಜಗಿದೆದ್ದಿದೆ ಜ್ವಾಲೆ, ಕೆಂಪೇರಿದೆ ಲೋಹ
ಸಡಿಲಾಗಿದೆ ಎಲ್ಲ ಬೀಗಗಳ ಬಾಯಿ
ತುಂಡಾಗಿ ಬಿದ್ದಿದೆ ಸರಪಳಿ.

ದೇಹ ನಾಲಿಗೆಗಳ ಸಾವಿನ ಮುಂಚಿನ
ಈ ಎರಡು ಗಳಿಗೆ ಸಮಯವೇ ಸಾಕು
ಆಡು ಮಾತಾಡು
ಸತ್ಯ ಇನ್ನೂ ಉಸಿರಾಡುತ್ತಲಿದೆ
ಆಡು ಮಾತಾಡು
ಹೇಳಲೇಬೇಕಾದ್ದು ಹೇಳಿಯೇಬಿಡು
ಆಡು ಮಾತಾಡು.

* * * * * * * * *

ಕತ್ತಲು ಕವಿಯುವುದು ಮತ್ತು ಬೆಳಕು ಮೂಡುವುದರ ಬಗ್ಗೆ ಅದೆಷ್ಟು ಕವಿಗಳು ಬರೆದಿದ್ದಾರೋ! ಜಾನ್ ಡನ್ ತನ್ನ ಪ್ರೇಯಸಿಯಿಂದ ತನ್ನನ್ನಗಲಿಸುವ ಸೂರ್ಯನನ್ನು ``busy old fool'' ಅಂತ ಬೈದು ಜಾಲಾಡುವುದರಿಂದ ಹಿಡಿದು "ಬೆಳ್ಳಿ ಮೂಡಿತೋ ಕೋಳಿ ಕೂಗಿತೋ" ಅಂತ ಹಾಡುವ ನಮ್ಮದೇ ಖಾಸಾ ಕವಿರತ್ನ ಕಾಳಿದಾಸನವರೆಗೆ? ಲಕ್ಷಲಕ್ಷ.

ಫೈಜ್‌ನ ಸುಮಾರು ಕವಿತೆಗಳೂ ಬೆಳಕು, ನೆರಳು, ಕತ್ತಲೆಯ ಇಮೇಜುಗಳ ಸುತ್ತ ಹೆಣೆದವು. ಇಲ್ಲಿ ನನಗೆ ಚೆಂದ ಅನ್ನಿಸಿದ ಎರಡು ಸ್ವಲ್ಪ ದೀರ್ಘ ಮತ್ತು ಒಂದು ಪುಟ್ಟ ಕವನದ ಅನುವಾದ ಇದೆ. ಎರಡನೆಯದು ಟಿಪಿಕಲ್ ಫೈಜ್ ಪದ್ಯ. ತುಂಬಾ ರೊಮ್ಯಾಂಟಿಕ್ ಇಮೇಜುಗಳಿಂದ ಶುರುವಾಗಿ ಮತ್ತೆ ಇನ್ನೆಲ್ಲಿಗೋ ಓದುಗರನ್ನು ಎಳೆದುಕೊಂಡು ಹೋಗುವಂಥದು.

ನಿಜ ಹೇಳಬೇಕೆಂದರೆ ಮೂರನೆಯದು ಅನುವಾದ ಅನ್ನಿಸಿಕೊಳ್ಳಲಾರದೇನೋ. ಅಲ್ಲಿ ಬಳಸುವ "ಸಾಕಿಗರಿ" ಅನ್ನುವ ಶಬ್ದಕ್ಕೆ ಏನು ಹೇಳುವುದಪ್ಪ ಅಂತ ಹುಡುಕ ಹೊರಟು ಅದು ಬೇರೆಯೇ ಆಗಿಬಿಟ್ಟಿದೆ. ಸಾಕಿ ಅನ್ನುವ ಪದವನ್ನು ಕನ್ನಡ ಗಜಲುಗಳಲ್ಲಿ ಬಳಸುತ್ತಾರಾದರೂ ಅದು ಸರಿಹೋಗೋದಿಲ್ಲ ಅನ್ನಿಸಿ ಅದನ್ನು ಬಿಟ್ಟು ಬೇರೆ ಅರಸಿದ್ದರ ಫಲ ಮೂರನೆ ಪದ್ಯ. ಕನ್ನಡದಲ್ಲಿ ನಾವು ಜಾಣತನದಿಂದ ಭಾವಾನುವಾದ ಅನ್ನುವ ಪದ ಬಳಸಿ ಎಂಥ ಆಟ ಆಡಿಯೂ ತಪ್ಪಿಸಿಕೊಳ್ಳಬಹುದಲ್ಲ, ಆ ಧೈರ್ಯದ ಮೇಲೆ ಮೂರನೆಯದನ್ನೂ ಸೇರಿಸುತ್ತಿದ್ದೇನೆ!

ಸೆರೆಮನೆಯಲ್ಲೊಂದು ಸಂಜೆ

ನೀಹಾರಿಕೆಗಳ ಸುರುಳಿ ಸುರುಳಿ ಮೆಟ್ಟಲುಗಳ
ಇಳಿಯುತ್ತಾ ಬರುತ್ತಿದೆ ಸದ್ದಿಲ್ಲದೆ ರಾತ್ರಿ.
ಬೀಸುವ ಗಾಳಿ ಹತ್ತಿರ, ಹತ್ತಿರ ಸುಳಿದಿದೆ
ಯಾರೋ ಪ್ರೀತಿ ಮಾತು ಕಿವಿಯಲುಸುರಿದ ಹಾಗೆ.
ಅಂಗಳದಲಿ ನಿಂತ ನಿರಾಶ್ರಿತ ಮರಗಳು
ನಭದ ಸೆರಗಲಿ ಬಿಡಿಸಿವೆ ಮರಳುವ ನಾಡಿನ ನಕ್ಷೆ.

ಚಾವಣಿಯ ಮೇಲೆ ಮೆರುಗುತ್ತಿವೆ
ಬೆಳದಿಂಗಳ ಕರುಣೆಯ ಬೆರಳು.
ಕಣಕಣದಲಿ ಕರಗಿದೆ ನಕ್ಷತ್ರದ ಹೊಳಪು
ನೀಲಿ ಕದಡಿದೆ ಆಗಸದ ತುಂಬಾ.
ಹಸಿರು ಮೂಲೆಗಳಲ್ಲಿ ಕಡು ನೀಲಿ ನೆರಳು,
ಆವರಿಸಿದಂತೆ ಮನಸ
ಸ್ವಲ್ಪ ಸ್ವಲ್ಪವೇ ವಿರಹದ ನೋವು.

ಆಹಾ! ಎಷ್ಟು ಸಿಹಿ ಈ ಗಳಿಗೆ.
ಗೆಲ್ಲಲಾರದು ಇಂದು ಎಂದೆಂದೂ
ಇಲ್ಲಿ ವಿಷವ ಬೆರೆಸುವ ಮನುಷು.
ಮಿಲನದ ಮನೆಯ ದೀಪ
ಆರಿಸಿಯಾರು ಬಿಡಿ.
ಚಂದ್ರನನ್ನಳಿಸುವವರು
ಯಾರಾದರೂ ಇದ್ದರೆ ಹೇಳಿ.

ಸೆರೆಮನೆಯಲ್ಲೊಂದು ಬೆಳಗು

ಚಂದ್ರ ದಿಂಬಿನ ಪಕ್ಕ ನಿಂತು 'ಏಳು, ಬೆಳಗಾಯಿತು'
ಅಂದಾಗ ಇನ್ನೂ ರಾತ್ರಿ ಸ್ವಲ್ಪ ಬಾಕಿ ಇತ್ತು.
'ಏಳು! ಈ ರಾತ್ರಿಯ ನಿನ್ನ ಪಾಲಿನ ನಿದ್ದೆಯ ಮದಿರೆ
ತುಟಿಯಿಂದ ಇಳಿದಿಳಿದು ತಳ ಕಂಡಿದೆ' ಅಂದ.

ಪ್ರಿಯತಮೆಯ ಬಿಂಬಕ್ಕೆ ವಿದಾಯ ಹೇಳಿ ಹೊರಳಿದೆ.
ರಾತ್ರಿಯ ಕರಿ ಹೊದಿಕೆಯ ತೆರೆತೆರೆಗಳ ಮೇಲೆ
ಅಲ್ಲಿಲ್ಲಿ ಬೆಳ್ಳಿ ಸುಳಿಸುಳಿಗಳ ನರ್ತನ.
ಚಂದ್ರನ ಕೈಯ್ಯಿಂದ ಉದುರುತ್ತಿವೆ
ಒಂದೊಂದೆ ತಾರೆ ತಾವರೆಯ ಪಕಳೆಗಳು.
ಮುಳುಗುತ್ತ, ಏಳುತ್ತ, ಈಜುತ್ತ, ಮುದುಡುತ್ತ ತೆರೆಯುತ್ತ
ರಾತ್ರಿ ಬೆಳಗನು ತಬ್ಬಿ ಕರಗಿದ್ದು ಅದೆಷ್ಟೋ ಹೊತ್ತು,

ಸೆರೆಮನೆಯ ಅಂಗಳದಲ್ಲಿ ನನ್ನ ಸಂಗಾತಿಗಳ ಹೊಳೆವ ಮುಖ
ಮೆಲ್ಲನೆ ಮೂಡುತ್ತಿದೆ ಕಪ್ಪು ಕತ್ತಲೆಯ ಮೀರಿ.
ನಿದ್ದೆ ಚೆಲ್ಲಿದ ಮರವಳಿಕೆಯ ಹನಿಹನಿ ಅಳಿಸಿದ
ದೇಶದ ಚಿಂತೆ, ಕಾಣದ ಗೆಳತಿಯ ನೆನಪಿನ ನೋ
ದೂರದಲ್ಲೆಲ್ಲೋ ನಗಾರಿ ಬಡಿವ, ವಚ್ಚೆ ಹೆಜ್ಜೆ
ಸದ್ದು.
ಸತಾಯಿಸುವ ಹಸಿವ ಹೊತ್ತು ಗಸ್ತಿಗೆ ಹೊ
ಕಾವಲುಗಾರ.
ಜೊತೆಗೆ ಕೈಕೈ ಹಿಡುದು ನಡೆದಿದೆ ಕೈದಿಗಳ ಆಕ್ರಂ
ಕಮ್ಮನೆ ಕನಸಿನ ಕಂಪ ಇನ್ನೂ ಹೊತ್ತ ಗಾಳಿ ಮೆಲ್ಲನೆ
ಎದ್ದಿವೆ ಹಾಲಾಹಲ ಕದಡಿ ಒಡೆದ ಸೆರೆಮನೆ
ಸದ್ದುಗಳು.
ಅಲ್ಲಿ ಯಾರೋ ಕದ ತೆರೆದ, ಇಲ್ಲಿ ಯಾರ
ಮುಚ್ಚಿದ ಸಪ್ಪಳ.
ಮೆಲ್ಲ ಮುಲುಕಾಡಿದೆ ಸರಪಳಿ, ಮುಲುಕಿ ಬಿಕ್ಕು
ಎಲ್ಲೋ.
ಯಾವುದೋ ಬೀಗದ ಎದೆ ಹೊಕ್ಕಿದೆ ಚೂರಿ
ಚೂಪು.
ಕಿಟಕಿ ದುಬುದುಬುದು ತಲೆಯ ಚಚ್ಚಿಕೊಂಡಿದೆ ಇನ್ನೆಲಿ

ನಿದ್ದೆಯಿಂದ ಮತ್ತೆ ಎದ್ದಂತಿದೆ ಜೀವದ ವೈರಿಗ
ಕಲ್ಲು ಕಬ್ಬಿಣವ ಕಡಿದು ಕೆತ್ತಿದ ಗಟ್ಟಿ ರಕ್ಕಸರು,
ಹಿಂದಿ ಹಿಪ್ಪೆ ಮಾಡಿ ಅಹೋರಾತ್ರಿ ಅಳಿಸುತ್ತಿದ್ದ
ನನ್ನ ನಾಜೂಕು ಬೆಳಗು ಬೈಗಿನ ಕಿನ್ನರಿಯರ.

ಉರಿವ ಭರವಸೆಯ ಬಾಣ ತುಂಬಿದ ಬತ್ತಳಿಕೆ ಹೊ
ಬರುವ ರಾಜಕುವರನ ಹಾದಿ ಕಾದಿವೆ ಹಿಡಿದ
ಜೀವಗಳು .

ಒಂಟಿತನ

ಸಂಜೆ ಮಾಗಿದ ಹಾಗೆ ಒಟ್ಟೊಟ್ಟಿಗೆ
ಹೆಂಡ ಹೀರುವ ಹಳೆಯ ಗೆಳೆಯರಂತೆ,
ಇಂದು ನನ್ನ ಜೋಡಿ ನನ್ನ ಒಂಟಿತನ.
ಇಬ್ಬರೂ ಕಾದಿದ್ದೇವೆ ಚಂದ್ರನುದಯಕ್ಕಾಗಿ
ಕಾಣಲು ನಿನ್ನ ಪ್ರತಿಬಿಂಬ ಪ್ರತಿ ಛಾಯೆಯಲ್ಲೂ.

PostScript:

ಮೊನ್ನೆ 'ಅಕ್ಷರ ಹೊಸ ಕಾವ್ಯ'ದ ಪ್ರತಿ ಕೊಂ
ಅದರ ಪೇಜುಗಳನ್ನು ತಿರುವಿ ಹಾಕುವಾಗ ಸುಮಾರ
ಬೆಳಗು ರಾತ್ರಿಯ ಥೀಮಿನ ಪದ್ಯಗಳು ಕಂಡ
ಉದಾಹರಣೆಗೆ ಇಲ್ಲಿ ಕೆಲವು:

ಚಂದ್ರಕಾಂತ ಕುಸನೂರರ ಒಂದು ಪದ್ಯ:

ಕೋಳಿ ಕೂಗಿಲ್ಲೆಂದು, ಬೆಳಕು ಹರಿದಿಲ್ಲೆಂದು
ಹಚ್ಚಡದ ಪದರದಲಿ ಮುಖ ಮುಚ್ಚಿಕೊಂಡು
ಹಗಲು ಹಗಲಿನ ಮೇಲೆ
ಮಲಗಿಕೊಂಡೆ.

ವೈದೇಹಿಯ "ಕಂಡದ್ದು ಹೇಳಿದರೆ":

ಈಗಿಷ್ಟು ಶಾಂತ ಕಾಣುತ್ತಾನಲ್ಲ
"ರಾತ್ರಿ ಸವಾರಿ ಹೋದದ್ದೆಲ್ಲಿಗೆ?"
ಕೇಳಿ ನೋಡು.
ಹಗಲಿಡೀ
ಉರಿದುರಿದು ಬೀಳುತ್ತಾನೆ.

ಮಂಗೇಶ ನಾಡಕರ್ಣಿ "ಸಂಜೆ ಆಯಿತು" ಪದ್ಯ
ಮೊದಲ ಮೂರು ಸಾಲು:

"ನಮ್ಮೂರಲ್ಲಿ
ಅಕಾರಣವಾಗಿ
ಬೆಳಕಾದ ತಪ್ಪಿಗೆ
ಸಂಜೆ ಆಯಿತು?"

ಶ್ರೀಕೃಷ್ಣ ಆಲನಹಳ್ಳಿಯ 'ಬೆಳಕು' ಕವಿತೆಯಿಂದ:

ಇರುಳು ಬೆತ್ತಲೆ ತೆಕ್ಕೆ ಬಿಡಿಸಿಕೊಂಡೆದ್ದ
ಸೂರ್ಯ ಜಬುರುಗಣ್ಣೊರೆಸುತ್ತಾ ಆಕಳಿಸಿ
ಕೊಬ್ಬಿದಾಡು ಕುರಿ ಕೋಳಿ ಸಿಗಿದು ಸೀಳಿ
ಕಂದು ನೀಲಿ ಬಿಳಿ ಕೆಂಪು ಖಂಡಗಳ ತೂಗಿಟ್ಟು
ಬಣ್ಣಬಣ್ಣದ ಮೂಡಲಂಗಳದ ಮಾಂಸದಂಗಡಿ ತೆರೆದಾ
ನನ್ನೂರಿನಲ್ಲಿ ಬೆಳಗಾಯಿತು.



ಒಳಪ್ವೊಳಗೆ ಸುತ್ತಿ ಸುಡುವ
ಈ ಉಸಿರನ್ನೆಲ್ಲ ಹೊರಬಿಟ್ಟು
ಅಜ್ಞಾತದಲಿ ಕುಳಿತು ಬಿಡಬೇಕೆಂದರೆ
ಮೊಬೈಲು-ಟಿವಿಗಳು ನುಂಗುತ್ತಿವೆ
ನನ್ನೂರಿನ ನೋವುಗಳನು ಸಣ್ಣದು ಮಾಡಿ

ಮನುಷ್ಯದ್ವೇಷಿಯೊಬ್ಬ ಬೊಗಳುತ್ತಿದ್ದರೆ
ಕಿವಿ-ಕಣ್ಣು ಕಿಸಿದು ಕಳಾಯಿಸುವ ಸುದ್ದಿಗಳು
ಅನ್ನ-ನೀರು-ಸೂರು ಇಲ್ಲದ ನರನಾಡಿಗಳ ಮೇಲೆ
ಹಿರೋಯಿಸಂನ ರುಮಾಲು ರೇಖೆಗಳ ದಾಖಲಿಸಿ
ಸರ್ಕಲ್‌ನಲಿ ದೇಶಾವರಿ ನಗೆ ಬೀರುತ್ತಿವೆ

ಊರ ಮನಸಿಗೆ ವಿಷದ ಬರೆ ಎಳೆದು
ಕಾವಿಗಂಟಿದ ಸೆಕ್ಸ್ ಸಿಂಬಾಲುಗಳು
ಜೈಲುಗಂಬವ ಏರಿ
ತುಕ್ಕಿಡಿದು ಬೆವೆತ ದೇವರ ಬೆನ್ನು ತಿಕ್ಕುತ
ನವಿಲುಗರಿಯಲಿ ಅವಿತು ತೂಗುವ
ಕಾಮನಬಿಲ್ಲು ಮುಟ್ಟಿ ನೋಡಲಲ್ಲ; ದೃಷ್ಟಿಗೋಚರ

ಕುಣಿವ ಸ್ವಾಮಿಯೊಬ್ಬ ಕೂಗುತ್ತ ಕುಳಿತು
ರಾಜಗದ್ದುಗೆಯಲಿ ಜೀವ ಕನಸೊಡೆದು
ಹುಚ್ಚರ ಸಂತೆಯಲಿ ಹುಸಿಹುಸಿವ ಹಸಿ ಮೌಲ್ಯಗಳು

ಗಂಟು-ಮೂಟೆಗಳ ಹೊತ್ತು ಹಸಿದು ಕೂತಿವೆ
ರಣಹದ್ದುಗಳನು ಬಗಲಲ್ಲೇ ಬಚ್ಚಿಟ್ಟು

ಲೋಕ ತೋರಬೇಕು ಬಯಲೊಳಗೆ ಭಾವ ಬೆತ್ತಲಾಗಿ
ಕಪ್ಪುಹಣದ ಮೇಲೆ ಸವಾರಿ ಹುಲಿವೇಷ ಸ್ವಾಮಿ
ಕೋಟಿ ಕೋಟಿ ಹೇಗೆ ತೂಗಿದನು ಯೋಗುರು
ಕುಣಿಯುತ್ತಲೇ ಮೈಮರೆತ ಹುಬಿದ್ದ ಕಣ್ಣೊಳಗೆ
ಕಣ್ಣಿಲ್ಲದ ದೇವರಿಗೆ ಕಣ್ಪಟ್ಟನ್ನಿಟ್ಟು ದೈನೇಸಿ ಬೇಡುವ
ದಿಕ್ಕಿಲ್ಲದವರ ಕೂಗು ತಟ್ಟಿ ಜಗವೆದ್ದು ಕೂಗಲಿ ಧಿಕ್ಕಾರ!

• ಅನಸೂಯ ಕಾಂಬಳೆ

ಇನ್ನೊಂದು ದಿನ ಉಪಾಸ ಇದ್ರೂ ರಾಮದೇವ ಗ್ಯಾತಯಸಿಯೋನು!

ಬಿರುಗರಿಯುವ ಗಾಳಿಗೆ ಗೊಗ್ಗರಿಸಿಕೊಂಡು ಕುಳಿತಿದ್ದ ಮಾವನಿಗೆ ಈ ಬಾರಿ ರಣಬೇಸಿಗೆಯ ಅನುಭವವೇ ಲಿಲ್ಲ, ಅವಧಿಗೆ ಮುನ್ನವೇ ಮುಂಗಾರು ಕಾಲಿಟ್ಟಂತಾಗಿ ದಿಷ್ಟು ಆತಂಕವೂ ಆಗಿತ್ತು. ಪರಿಣಾಮವಾಗಿ ಯಾವ ಯದ ಬಗ್ಗೆಯೂ ಅವನಿಗೆ ಆಸಕ್ತಿಯಿರಲಿಲ್ಲ. ಆದ್ದರಿಂದ ಮ್ಮಿ ಕಾಳಮಾವನನ್ನು ಬಿಟ್ಟು ಚಿಕ್ಕಣ್ಣನನ್ನು ಮಾತಿಗೆಳೆದು,

ಬಯಲುಸೀಮೆ

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ನಿನ್ನ ಮಗನಿಗೆ ಮದುವೆ ಮಾಡೊ ಚಿಕ್ಕಣ್ಣ" ದಳು.

"ಈ ಬೋಳಿಮಗನಿಗೆ ಮದುವೆ ಬ್ಯಾರೆ ಕೇಡು, ಡಿರೊ ಕ್ಯಲಸಕ್ಕೆ."

"ಅದ್ಯಾಕೊ ಅಂಗೆ ಬ್ಯೆತೀ. ಮ್ಯಜಾರಿಟಿಗೆ ಬಂದಿರೊ ಗನ್ನ ಅಂಗೆ ಬೋದ್ರೆ ಮಾತು ಕೇಳ್ತವೆ ಅವು?"

"ಅಲ್ಲಾ ಕಣೆ ಜುಮ್ಮಿ, ನೀನೇ ಹೇಳು. ಹಸಿಗೆ ೇರಿ ಕೊಡಿಸಿಗಂಡು ಬಾರ್ಲ ಅಂತ ಕಳಿಸಿದ್ದೆ. ಈ ಂಡೆ ಮಗ ಯಂತ ಕ್ಯಲಸ ಮಾಡಿಬುಟ್ಟವುನೆ ಅಂತ ನ್ನೆ ದಿನ ಗೊತ್ತಾಯ್ತು!"

"ಅದೇನು ಮಾಡಿದ್ನಾ?"

"ಹೋರಿ ತಮ್ಮಣ್ಣನತ್ರಕೆ ಹೋಗದೆಯ ಹಸ ಕಂಡು ದನಿನಾಸುಪತ್ರಿಗೋಗ್ಯವುನೆ. ಆ ಸೂಳೆಮಗ ನ ದಾಗುಟ್ರು, ಸೀಮೆ ಹಸಿಗೆ ಕೊಡೊ ಇಂಜೆಸನ್ನ ನಾಟಿ ಹಸಿಗೆ ಕೊಟ್ಟು ಕಳಿಸ್ಯವುನೆ. ಕರಹಾಕಕ್ಕೆ ಹಸ ಪ್ಪಿ ಗೋಳಾಡ್ತು ಅಂದ್ರೆ, ಹಸ ಉಳದಿದ್ದೇ ಹೆಚ್ಚು ಮದ್ದಾಡಿ ವದ್ದಾಡಿ ಕಡಿಗೆ ಕರಹಾಕಿದಾಗ ನಮ್ಮನಿಯೋಳೆ ಕಂಡ್ಲು."

"ಅಂಗಿತ್ತೆ ಕರ?"

"ಊ. ಸೀಮೆ ತಳಿಯಲ್ವೆ, ಕರ್ರಗೆ ಅಂಗೆ ಗಾಳಿದ್ದಂಗಿತ್ತು. ಮಗಳು ಬೇಜಾರಾಗಿ ಅಲ್ಲೆ ಯಸ್ತು ಒತ್ತಿನಿ ಅಂತಿದ್ಲು. ಗೆ ಹೆಣ್ಣಗರಾಗೋವತ್ತಿಗೆ ಎತ್ತಿಗಂಡು ಬಂದ್ಲು. ಇಂತ ಸ ಮಾಡಿರೋನಿಗೆ ಮದುವೆ ಮಾಡಕ್ಯೋದಿಯಾ?" ದು ಚಿಕ್ಕ ಸಿಟ್ಟಾದ.

"ವಳ್ಳೆ ಕ್ಯಲಸನೆ ಮಾಡ್ಯವುನೆ ಬುಡು. ಮನೆಲೊಂದು ಮೆಹಸ ಬಳಕತ್ತದೆ, ಹೊಟ್ಟೆಗೂ ಹಾಲಾಯ್ತದೆ."

"ಹಾಲಾಯ್ತದೆ ಸರಿ. ಕರ ಬ್ಯಳಕಂಡು ಹಸ ಭಾಳ ಪಡ್ತು ಕಣೆ. ಏನಾರ ಹಸ ಸತ್ತೋಗಿದ್ರೆ ನನ್ನ ಕತಿಯೇನು ತ?"

"ದನಿನ ತಳಿನೆ ಹಾಳು ಮಾಡಿಬುಟ್ರು ಸೂಳೆಮಕ್ಕಳು" ಎಂದ ಕಾಳಮಾವ.

"ಅದು ಮಿಶ್ರತಳಿ ಕಾರ್ಯಕ್ರಮ ಕಣಮಾವ. ಇತ್ಲಗೆ ನಾಟಿ ಹಸುಗಳು ಅಲ್ಲ, ಅತ್ತಗೆ ಸೀಮೆಹಸನೂ ಅಲ್ಲ ಅಂತ ದನ ಬ್ಯಳುಸ್ತಾ ಅವುರೆ" ಎಂದ ಉಗ್ರಿ ನಗಾಡಿದ.

"ಅಂತದ್ನೆ ಒಂದ ತಂದು ಕಟ್ಕೊ ಚಿಕ್ಕಣ್ಣ ನಿನ್ನ ಮಗನಿಗೆ" ಎಂದಳು ಜುಮ್ಮಿ.

"ಯಂತೆದ್ನೆ?"

"ಇತ್ಲಗೆ ಹಳ್ಳಿ ಹೆಣ್ಣೂ ಅಲ್ಲ, ಅತ್ತಗೆ ಸಿಟಿ ಹೆಣ್ಣೂಬ್ಯಾಡ. ಹಳ್ಳಿ ಬುಟ್ಟು ಸಿಟಿ ಗೋಗಿ ಸೆಟ್ಲಾಗ್ಯವೆ ನೋಡು, ಅಂತದ್ಯಾವು ದಾರ ಇದ್ರೆ ನೋಡಿ ತಂದು ಕಟ್ಟು ಅತ್ತಗೆ."

"ಅವುನಿಗೆ ಸಿಟಿ ಹೆಣ್ಣೇಬೇಕಂತೆ."

"ಈ ಕಾಲ್ದಲ್ಲಿ ಸಿಟಿ ಹೆಣ್ಯಾಕೆ ಹಳ್ಳಿಗೆ ಬಂದವೂ? ಹಳ್ಳಿವೆ ಸಿಟಿಗೆ ಹೋಗಿ ಗಾರಮೆಂಟಲ್ಲಿ ಸೇರಿಕಂಡು ಸ್ಲಮ್ಮಲ್ಲಿ ಕಾಲಾಮಾಡ್ತಾ ಅವೆ. ಅಂತದ್ರಲ್ಲಿ ಅದಿನ್ಯಾವ ಸಿಟಿಯೋಳು ಬಂದಳಪ್ಪ?"

"ಇಡೀ ನಾಡೆ ಸಿಟಿ ಸೇರ್ತಾ ಅದೆ ಕಣೆ."

"ಮದ್ಲಿಗೆ ಯಮ್ಮೆಲ್ಲೆಗಳು ಊರಲ್ಲೊ ತಾಲೊಕಲ್ಲೊ ಇರತಿದ್ರು. ಇವತ್ತು ಇಡೀ ಕರ್ನಾಟಕ ಸುತ್ತಿದ್ರೆ ಒಬ್ಬನೇ ಒಬ್ಬ ಎಮ್ಮೆಲ್ಲೆ ಹುಟ್ಟಿದೂರಲ್ಲಿಲ್ಲ. ಜನಗಳಿಂದ ಮರಿಯಾಗಿ ಕಾಲಹಾಕ್ತ ಅವುರೆ. ಅದಕೆ ಏನೊ ಕಾಂಗ್ರೆಸಿನೋರು ಭಾಳ ದಿನಗಳ ಮ್ಯಾಲೆ ಜನರ ಬಳಿಗೆ ನಡೆ ಅಂತ ಕಾರ್ಯಕ್ರಮ ಹಾಯ್ಕಂಡು ಹಳ್ಳಿ ಕಡಿಕ್ಹಂಟವುರಂತೆ."

"ಕಾಂಗ್ರೆಸಿನವು ಕಡಿಗೂ ಬುದ್ಧಿ ಕಲೀಲಿಲ್ಲವಲ್ಲ ಹೇಳು" ಎಂದ ಕಾಳಮಾವ.

"ಅದ್ಯಾಕ್ ಮಾವ ಅಂಗಂತಿ? ಅಲ್ಲಿ ಬುದ್ಧಿವಂತ್ರ ಜಾಸ್ತಿಯಾಗಿ ಪಾರ್ಟಿನೆ ಹಾಳಾಯ್ತಾಯಿದ್ದತಂತೆ."

"ಅಲ್ಲಾ ಕಂಡ್ರ, ಮುಂಗಾರು ಮಳಿ ಬಂದು ಜನಗಳ್ಯಲ್ಲ ವಲಕ್ಕೋಗೊ ಟೈಮಲ್ಲಿ ಆ ಕಾಂಗ್ರೆಸ್ಸಿನವು ಜನಗಳತ್ರಕೆ ಬತ್ತರೆ ಅಂದ್ರೆ ಅವುಕ್ಯಾರೂ ಹೇಳೋರು ಕೇಳೋರು ಇಲವೆ? ಅಥವ ಆ ಮುಂಡೆಮಕ್ಕಳಿಗೆ ತಲಿಯೇ ಇಲ್ವೆ ಅಂತ?"

"ನೀನೇಳೊ ಯರಡು ಮಾತೂ ಸರಿಯಾಗ್ಯವೆ ಕಣ ಮಾವ. ಆ ಕಾಂಗ್ರೆಸ್‌ನವುಕೆ ಕರ್ನಾಟಕದ ಮಟ್ಟದಲ್ಲಿ ಹೇಳೋರು ಕೇಳೋರು ಯಾರೂ ಇಲ್ಲ. ಅವುಕೂ ಯಾವಾಗ ಏನು ಮಾಡಬೇಕು ಅನ್ನದು ಗೊತ್ತಿಲ್ಲ. ಅದ್ಕೆ ಯಲ್ಲ ಕಾರಬ್ಬ ಮಾಡಿ ನೇಗಲು ನ್ವಗ ತಗಂಡು ವಲ್ದಕಡಿಕೆ ಹ್ವಂಟಾಗ ಜನ ಹುಡಿಕ್ಯಂಡು ಬತ್ತಾ ಅವುರೆ. ಕಾಂಗ್ರೆಸ್‌ನೋರ ಕೈಗೆ ಈಗ ಯಾರು ಸಿಕ್ತರೆ ಅಂತ?"

"ಅವುರ ಪಾರ್ಟಿ ವರ್ಕರ್ಸ್ ಸಿಕ್ತರೆ ಕಣೊ ಉಗ್ರಿ" ಎನ್ನುತ್ತ ವಾಟಿಸ್ದೆ ಬಂದ.

"ಕಾಂಗ್ರೆಸ್‌ಗೆ ಪಾರ್ಟಿ ವರ್ಕರ್ಸ್ಸ್ ಇದ್ದರೇ?"

"ಅವುರೆ ಕಣೊ. ಸ್ವಲುಪ ಏಜಾಗಿರಬವ್ರುದು ಅಷ್ಟೆ. ಆದ್ರೆ ಜೆಡಿಎಸ್ ಅಂಡ್ ಬಿಜೆಪಿ ವರ್ಕರ್ಸ್ ತರ ಪೋರ್ಸಾಗಿಲ್ಲ."


"ಒಂದು ಮಾತೇಳದಾದ್ರೆ ಕಾಂಗ್ರೆಸ್‌ನವು ತಿಂದು ಅರಗಿಸಿಗಂಡು ಕುಂತವೆ. ಜೆಡಿಎಸ್‌ನೋರು ತಿಂದು ಮೆಲುಕಾಕ್ತಾ ಅವೆ. ಬಿಜೆಪಿಗಳು ಈಗ ಗಭಗಭಾ ಅಂತ ತಿಂತಾ ಅವೆ ಅಲವೇನೊ?!"

"ನಿಜ ಕಣೊ ಉಗ್ರಿ. ಆದ್ರೆ ಅವುರ್ಯಲ್ಲ ಎಷ್ಟು ಬೇಕು ಅಷ್ಟು ತಿಂದ್ರು. ಆದ್ರೆ ಈ ಬಿಜೆಪಿಗಳಿಗೆ ಎಷ್ಟು ತಿಂದ್ರೂ ಸಾಕಾಗ್ತಾಯಿಲ್ಲ, ತಮ್ಮ ಪರಿವಾರನೆ ಕಟಗಂಡು ತಿಂತಾ ಅವುರೆ ಕಣೊ."

"ತಿನ್ಲಿ ಬುಡು. ಈ ತರ ತಿಂದೋರು ಉದ್ಧಾರಾಗಿರದ ನಾವು ನೋಡಿದ್ವೆ?"

"ಮಿಸ್ಟರ್ ಉಗ್ರಿ, ಅದೇ ನೀನು ತಪ್ಪು ತಿಳಕಂಡಿರದು. ಮತೀಯವಾದಿಗಳತ್ರ ಹೆಚ್ಚು ದುಡ್ಡಿರಬಾರ್ದು ಕಣೊ. ತುಂಬ ಅಪಾಯ. ಕಾಸು ಕೊಟ್ಟು ವಡದಾಟ ಮಾಡುಸ್ತರೆ. ಕಾಸು ಕೊಟ್ಟು ಕೇಸು ಮುಚ್ಚಾಕ್ತರೆ. ಯಲ್ಲಾ ಅನಾಹುತನೂ ಕಾಸಿನಿಂದ್ಲೆ ಮಾಡ್ತರೆ ಗೊತ್ತೆ."

"ಅಂಥೋರಿಗೆ ಶ್ರೀಮಂತಕೆ ತಂದುಕೊಟ್ಟ ಅಪರಾಧ ಈ ಅಪ್ಪ ಮಕ್ಕಳದೆ ಅಲವೇನೋ."



"ಅದ್ಕೆ ಅನುಭವುಸ್ತ ಅವುರಲ್ಲೊ. ದಿನಬೆಳಗಾಯ್ತು ಅಂದ್ರೆ ಅವುನ್ಯಾರೊ ಪುಡಸ್ವಾಮಿ ಅನ್ನೊನು ಕುಮಾರಣ್ಣ ದ್ಯಾವೇಗೌಡನ್ನ ಹಿಡಕಂಡು ಜಾಲಾಡುಸ್ತಲೇ ಇರತನೆ. ಯಾವತ್ತೂ ಬಿಜೆಪಿಗಳು ಒಂದು ಸುಳ್ಳನ್ನೇ ನೂರು ಸತಿ ಹೇಳೋದು. ಸುಮ್ಮನೆ ಬುಟ್ಟರೆ. ನಿಜ ಹೇಳೋರು ಹಿಡಕಂಡು ಮುಂದಕೆ ನೂಕಿ ಸುಮ್ಮನಾಯ್ತರೆ. ಅದಕೆ ಅಲವೆ ಆ ರಾಮದೇವನ ಹಿಂದೆ ನಿಂತಗಂಡು ಮುಂದೆಬುಟ್ಟಿದ್ದು."

"ಅವುನೇನೊ ಉಪಾಸ ಕುಂತಿದ್ನಂತಲ್ಲ ಏನಾದುನ್ನ?" ಎಂದ ಕಾಳಮಾವ.

"ಇನ್ನೊಂದೇ ಒಂದು ದಿನ ಉಪಾಸ ಇದ್ರೆ ಮನೆ ಮುಂದೆ ಬೆಂಕಿ ಹಾಕಂಗೆ ಆಯ್ತಿದ್ದ ದ್ವಡಪ್ಪ, ಅಷ್ಟರಲ್ಲಿ ರವಿಶಂಕ್ರ ಹೋಗಿ ಬದುಕಿಸಿಬುಟ್ಟ."

"ಅಂಗರೆ ತೀರ ಸುಸ್ತಾಗಿದ್ದ ಅನ್ನು."

"ಸುಸ್ತು ಅಂದ್ರೆ ಆಗ್ಲೆ ಕಣ್ಣುಬಾಯಿ ಕಿಸಗಂಡು ಬಿದ್ದೋಗಿದ್ದ ಅವುನ ಕಣ್ಣುಬ್ಯಾರೆ ಸ್ವತಂತ್ರವಾಗಿ ವಡಕತ್ತದೆ. ಬಾಯಿ ತಿರಿಕಂಡದೆ. ಅದ್ರು ಜನಗಳಿಗೆ ಯೋಗ ಕಲುಸ್ತನೆ. ಈ ಮಹಾನ್ ಯೋಗದ ಗುರು ಕೇವಲ ಎಂಟೇ ದಿನಕೆ ನಾಕು ಜನಗಳ ಮ್ಯಾಲೆ ಹೋಗಂಗಾಗಿದ್ದ. ಇವುನಿಗೋಲಿಸಿದ್ರೆ ಯಾವ ಯೋಗನೂ ಮಾಡದೇಯಿದ್ದ ಗಾಂಧೀಜಿ ಮೂವತ್ತು ದಿನಗಟ್ಲೆ ಉಪಾಸ ಮಾಡತಿದ್ರಪ್ಪ."

"ಗಾಂಧಿಮಾತ್ಮ ನಿಜವಾಗ್ಲು ಉಪಾಸ ಮಾಡೋರು. ಅವುರಿಗಂತ ಸಗತಿ ಇತ್ತು ಕಂಡ್ರ. ಇವುರ್ಯಲ್ಲ ಸತ್ರಗತಿಯೇನು ಅಂತ. ಉಪಾಸ ಮಾಡದ್ರಿಂದ ನಾಕೇ ದಿವಸ ನಾಕು ಜನಗಳ ಮ್ಯಾಲೆ ಹೋಗಂಗೆ ಮಾಡ್ತರೆ."

"ಮುಂಡೆ ಮಗ ಅನ್ಯಾಯವಾಗಿ ಅಣ್ಣಾ ಹಜಾರೆ ಚಳವಳಿಯ ಹಾಳು ಮಾಡಿ ಮಡಿಗಿಬುಟ್ಟ ಅತ್ತಗೆ."

"ಅದ್ಯಾಕಂಗೆ ಮಾಡಿದಾ?"

"ಈ ಅಣ್ಣ ಹಜಾರೆ ದ್ವಡಪ್ಪಾ, ಪ್ರಾಮಾಣಿಕವಾದ ಗಾಂಧಿಮಾರ್ಗದೋನು. ಬೆಂಗಳೂರಲ್ಲಿ ದೊರೆಸ್ವಾಮಿ ಅವುರಲ್ಲಾ ಅಂಥೋರ್ಯಲ್ಲ ಅಣ್ಣ ಹಜಾರೆ ಜತೆ ವಂಟಿದ್ರು. ಅದೇ ಟೇಮಿಗೆ ಉಮಾ ಭಾರತಿ ಅನ್ನೋಳು ಅಲ್ಲಿಗೋಗಿದ್ಲು. ಜನ್ಯಲ್ಲ ಗದರಿ ಓಡಿಸಿದ್ರು. ಅಂದ್ರೆ ಅಣ್ಣಾ ಹಜಾರೆ ಚಳವಳಿಗೆ ರಾಜಕೀಯವ ಸೇರಸದಿಲ್ಲ ಅಂತ ಬಿಜೆಪಿಗಳಿಗೆ ಗೊತ್ತಾಯ್ತು, ಸರಿ ಅವೇನು ಮಾಡಿದೊ ಅಂದ್ರೆ, ರಾಮದೇವನ್ನ ಮುಂದಕೆ ಬುಟಗಂಡು ಜನಗಳ್ಯಲ್ಲ ಸೇರಿ ಒಟ್ಟಾದ್ರು. ಅದ ನೋಡಿ ದೇಟಿಗೆ ಕಾಂಗ್ರೆಸ್ಸಿನೋರು ಬಲಿ ಹಾಕಿದ್ರು. ಅಂತೂ ಅಣ್ಣಾ ಹಜಾರೆ ಮಡಕೆಯ ರಾಮದೇವ ರುಬ್ಬಾಕಿದ ಅತ್ತಗೆ."

"ಏನೋ ಮಾಡಕ್ಯೋಗಿ ಇನ್ನೇನೊ ಆಯ್ತಲ್ಲ ಹೇಳು."

"ಕಾಲಾದಿಂದ ಅಂಗೇ ಅಲವೆ ಆಗಿರದು. ಜಯಪ್ರಕಾಶ್ ನಾರಾಯ್ಣ ಯಲ್ಲಾ ಪಾರ್ಟಿಯೋರು ನಿಮ್ಮ ಭಾವುಟ, ಪಾರ್ಟಿ ಪ್ರಣಾಳಿಕೆ ಬಿಸಾಕಿ ಜನತಾಪಾರ್ಟಿ ಕ್ಯಳಿಕೆ ಬನ್ನಿ ಅಂದ್ರು. ಆಗ ಜನ್ಸಂಗ ಮಾಡಿಕಂಡಿದ್ದ ಬಿಜೆಪಿಗಳು ಬಂದು ಸೇರಿಕಂಡ್ರು. ಅದ್ಕೆ ಇವತ್ತಿಂಗಾಗಿರದು. ಜೆಪಿ ತಂಗಡಿರೊ ತೀರ್ಮಾನದಲ್ಲೇ ದೇಸ ದಿಕ್ಕು ತಪ್ಪೊ ಅಂಶ ಸೇರಿಕಂಡಿತ್ತು ಅಂತ ಈಗ ಗೊತ್ತಾಯ್ತು ಅದೆ. ಆದ್ರೆ ಏನೂ ಮಾಡಂಗಿಲ್ಲ. ಇಟೀಸ್ ಟೂ ಲೇಟು ದ್ವಡಪ್ಪ" ಎಂದುಕೊಂಡು ವಾಟಿಸ್ದೆ ಹೊರಟ.

ಚೆಂದಗೊಳಿಸಲೆತ್ನಿಸುವ ಮುಂಗ...

ನಿಮಗೆ ಇದೆಲ್ಲ ಹೇಗೆನ್ನಿಸುತ್ತದೋ ಗೊತ್ತಿಲ್ಲ-ನನಗೆ ಮಾತ್ರ ಭಯ ಹುಟ್ಟಿಸುತ್ತದೆ. ನನ್ನ ಧ್ವನಿಯನ್ನು ನಾನು ರೇಡಿಯೋದಲ್ಲಿ ಕೇಳಲಾರೆ; ನನ್ನನ್ನು ನಾನು ಟಿವಿಯಲ್ಲಿ ನೋಡಲಾರೆ. ಮೊನ್ನೆ ಯಾರೊ ಒಬ್ಬರು ನನ್ನ ಭಾಷಣವೊಂದನ್ನು ವಿಡಿಯೋ ಕ್ಯಾಸೆಟ್‌ನಲ್ಲಿ ಸೆರೆಹಿಡಿದು ತಂದರು. "ನಿಮ್ಮ ಭಾಷಣ, ತುಂಬ ಚೆನ್ನಾಗಿದೆ. ನೀವು ಇಷ್ಟಪಡಬಹುದು ಅಂತ ತಂದೆ" ಎಂದರು. ನಾನು ಏನನ್ನೂ ಹೇಳದೆ, 'ಥ್ಯಾಂಕ್ಸ್' ಅಂದೆ. ಅವರು ಹೋದಮೇಲೆ ಅದನ್ನು ಯಾರಿಗೊ ಕೊಟ್ಟುಬಿಟ್ಟೆ. ಯಾಕೆಂದರೆ ನನ್ನನ್ನು ನಾನು ನೋಡಲು ಆಗುವುದಿಲ್ಲ; ಕನ್ನಡಿಯಲ್ಲಿ ಪ್ರತಿಬಿಂಬವನ್ನು ಕೂಡ ಬಹಳ ಹೊತ್ತು ನೋಡಿಕೊಂಡರೆ ಹೇಗೆಹೇಗೋ ಆಗುತ್ತದೆ. ಇದೆಲ್ಲ ನೀವು ಅರ್ಥ ಮಾಡಿಕೊಳ್ಳಬಲ್ಲಿರಿ ಎಂದು ತಿಳಿದಿದ್ದೇನೆ. ನಾನು ಇನ್ನೂ ಸುಂದರನಾಗಿದ್ದರೆ, ಮಹಾನ್ ಭಾಷಣಕಾರನಾಗಿದ್ದರೆ, ಪುರುಷಶ್ರೇಷ್ಠನಾಗಿದ್ದರೆ-ನನ್ನ ಚಿತ್ರ ನೋಡಲು ನನಗೆ ಇಷ್ಟವಾಗುತ್ತಿತ್ತೆ? ಗೊತ್ತಿಲ್ಲ, ಎಲ್ಲರ ಅಂದವೂ relative- ಯಾರೂ ಪರಿಪೂರ್ಣರಲ್ಲ, ಅದೆಲ್ಲ ಇರಲಿ. ನಿಮಗೆ ಆಶ್ಚರ್ಯವಾಗಬಹುದು. ನಾನು ಎಂದೋ ಬರೆದ ಕತೆ, ನಾಟಕ, ಪದ್ಯವನ್ನು ಇವತ್ತು ಓದುವಾಗ ನನಗೆ ಕಸಿವಿಸಿಯಾಗುತ್ತದೆ. ಇಷ್ಟು ಚೆನ್ನಾಗಿ ಬರೆದನೆ ಅಥವಾ ಇಷ್ಟು ಕೆಟ್ಟದು ಬರೆದನೆ ಎನ್ನಿಸುತ್ತದೆ. ಇಲ್ಲಿ ಸ್ವಲ್ಪ ಬದಲಾಗಬೇಕಿತ್ತು, ಈ ವಾಕ್ಯ ಹೀಗಿರಬಾರದಿತ್ತು ಅನ್ನಿಸುತ್ತದೆ. ಆದರೆ ಈಗ ನಾನು ಈ ಕತೆ, ನಾಟಕ, ಪದ್ಯ ಬರೆದವನಿಗಿಂತ ಉತ್ತಮನಲ್ಲ, ಹೆಚ್ಚು ಕ್ರಿಯಾಶಾಲಿಯಲ್ಲ, ಇದನ್ನು ಒಪ್ಪಿಕೊಳ್ಳಬೇಕಾದ್ದು ನನ್ನ ಮತ್ತು ನನ್ನಂಥವರ ಕರ್ತವ್ಯ, ಆದ್ದರಿಂದ ಎಂದೋ ಬರೆದದ್ದನ್ನು ಈಗ ಓದಿ ತಿದ್ದುವುದಿಲ್ಲ, ಎಷ್ಟೇ ಕೆಟ್ಟದಾಗಿದೆ ಅನ್ನಿಸಿದರೂ ಹಸ್ತಕ್ಷೇಪ ಮಾಡುವುದಿಲ್ಲ, ತೀರಾ ಕೆಟ್ಟದಾಗಿದೆ ಅನ್ನಿಸಿದರೆ 'ಮತ್ತೆ ಅಚ್ಚು ಮಾಡುವುದು ಬೇಡ' ಅನ್ನಬಹುದು; ಹಾಗೆ ಅನೇಕ ಲೇಖಕರು ಮಾಡಿದ್ದಾರೆ. ಆದರೆ ಇಲ್ಲಿ ಕೂಡ ಎಲ್ಲವೂ ಸಂದಿಗ್ಧ ಫ್ರಾಂಜ್ ಕಾಫ್ಕಾ ಸಾಯುವಾಗ 'ನಾನು ಬರೆದದ್ದನ್ನೆಲ್ಲ ಸುಟ್ಟುಬಿಡಿ' ಎಂದು ಹೇಳಿ ತೀರಿಕೊಂಡ. ಅವನ ಗೆಳೆಯ ಸುಡಲಿಲ್ಲ, ಕಾಫ್ಕಾನ ಸಾಹಿತ್ಯ ಹೇಗೆ ನಮಗೆಲ್ಲ ಅರ್ಥಪೂರ್ಣ ಎಂಬುದು ಎಲ್ಲರಿಗೂ ಗೊತ್ತು.

ಯಾಕೆ ಹೀಗೆ? ನಾನು ಚಿಕ್ಕವನಾಗಿದ್ದಾಗ ಬರೆದದ್ದು ಅಷ್ಟು ಸರಿಯಲ್ಲ ಅನ್ನಿಸಿದರೆ, ಈಗ ಅದನ್ನು ತಿದ್ದುವುದರಿಂದ ಉತ್ತಮವಾಗುವುದಾದರೆ ಅದು ಹೇಗೆ ತಪ್ಪು? ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಒಬ್ಬಳು ಚಿಕ್ಕ ಹುಡುಗಿ ಒಂದು ಕತೆ ಬರೆದು ಕೊಡುತ್ತಾಳೆ. ಈ ಹುಡುಗಿ ಎಷ್ಟು ಜೀವಂತ ಮತ್ತು ಎಷ್ಟು ಮುಗ್ಧೆ ಅಂದರೆ ಆಕೆಗೆ ಗೊತ್ತಿರುವುದು ಕತೆ ಮಾತ್ರ-ವ್ಯಾಕರಣ, ವಾಕ್ಯ ಸಮನ್ವಯ, ಗದ್ಯದ ಒಳಸ್ಪಂದನ ಒಂದೂ ಗೊತ್ತಿರುವುದಿಲ್ಲ, ಆದರೆ ತನ್ನ ಅಜ್ಜಿಯ ಮೇಲೆ ಬರೆದಿರುವ ಅವಳ ಕತೆಯಲ್ಲಿ ಅಜ್ಜಿ ಇದ್ದಾಳೆ. ಅಜ್ಜಿಯ ವಿಚಿತ್ರ ವರ್ತನೆ, ಆತಂಕ, ಪ್ರೀತಿ ಎಲ್ಲವೂ ಇದೆ. "ನನ್ನ ಅಜ್ಜಿಯ ಕತೆ ಹೇಳಬೇಕೆಂದು ಕುಂತೆ. ನಾಯಿಮರಿ ಬಂದು ನನ್ನ ಟೇಬಲ್ ಲೆಗ್‌ಗಳನ್ನು ಕಚ್ಚಿತು. ಅದನ್ನು ಲೀಶ್‌ಗೆ ಕಟ್ಟಿಹಾಕಿ ಜಗಲಿಯ ಕಂಬಕ್ಕೆ ಬಿಗಿದೆ. ಅಜ್ಜಿ ಎದುರಿಗೆ ಬಂದು ರೇಗಿತು. ಅಜ್ಜಿ ಮೇಲೆ ಸಿಟ್ಟುಬಂತು. ಚೀರಿಕೊಂಡೆ. ಒಳಗೆ ಬಂದು ಕತೆ ಬರೆಯಬೇಕೆಂದು ತಿಂಕ್ ಮಾಡತೊಡಗಿದೆ. rotten. ಅಜ್ಜಿಯ ಹೆಸರೇ ನನಗೆ ಗೊತ್ತಿಲ್ಲ!" ಎಂದು ಮುಂತಾಗಿ ಶುರುವಾದ ಅವಳ ಕತೆ ಓದುತ್ತಿದ್ದಂತೆಯೇ ಹಲವು ತಪ್ಪುಗಳು ಕಾಣುತ್ತವೆ. ಇಡೀ ಕತೆಯನ್ನು ಬೇರೆ ರೀತಿಯಲ್ಲಿ ಬರೆದರೆ ಚೆನ್ನಾಗಿರುತ್ತದೆಂದು ಅವಳಿಗೆ, "ನನ್ನ ಅಜ್ಜಿಗೆ ಆಗ ಎಂಭತ್ತು ವರ್ಷ. ಅಜ್ಜ ಎಂದೋ ತೀರಿಕೊಂಡಿದ್ದ. ಆದರೆ ಅಜ್ಜಿ ಗಂಡನೊಂದಿಗೆ ಮಾತಾಡಿರಬಹುದು ಎಂದು ಊಹಿಸಲೂ ನನ್ನಿಂದ ಆಗಲಿಲ್ಲ, ಆಕೆ ವಿಧವೆ ಎಂದು ನನಗೆ ಎಂದೂ ಅನ್ನಿಸಿರಲಿಲ್ಲ" ಎಂದು ಬರೆದುಕೊಡುತ್ತೇನೆ. ಪುಟ್ಟ ಹುಡುಗಿಗೆ ನನ್ನ ಕತೆಯೇನೋ ಇಷ್ಟವಾಗುತ್ತದೆ. ಆದರೆ ಅವಳ ನಿರೂಪಣೆಯೇ ಉತ್ತಮ.

ಈ ಪುಟ್ಟ ಹುಡುಗಿಗೆ ವಿಧವೆ, ಗಂಡ, ಸಂಸಾರ ಮುಂತಾದ ಕಲ್ಪನೆಗಳಿಗಿಂತ ಅಜ್ಜಿ, ನಾಯಿ, ಅಜ್ಜಿಯ ಹೆಸರು, ಅವಳು ರೇಗಿದ್ದು-ಇದೇ ಮುಖ್ಯ, ಅಲ್ಲದೆ ಈ ಹುಡುಗಿ ಬರೆದದ್ದು ಮತ್ತು ನಾನು ಬರೆದದ್ದನ್ನು ಹೋಲಿಸಿದರೆ ನಿಮಗೆ ಗೊತ್ತಾಗುತ್ತೆ-ಅವಳ ಕತೆಯಲ್ಲಿನ ಮುಗ್ಧತೆ, ಸರಳತೆ ನನ್ನ ಕತೆಗಿಲ್ಲ, ನಾನು ಎಷ್ಟೇ ಪ್ರಯತ್ನಿಸಿದರೂ ಅವಳಂತೆ ಬರೆಯಲಾಗುವುದಿಲ್ಲ.



ಬರೆಯುವುದೆಂದರೆ ರಕ್ತದ ಚಿಮ್ಮು, ಪ್ರೀತಿಯ ಕಾರಂಜಿ, ಮುಗ್ಧತೆಯ ಕ್ರಿಯೆ. ನಾನೂ ಒಮ್ಮೆ ಈ ಪುಟ್ಟ ಹುಡುಗಿ ಅಥವಾ ಹುಡುಗನಾಗಿದ್ದೆ. ನಾನು ಅವಳಂತೆಯೇ ಯೋಚಿಸುತ್ತಿದ್ದೆ. ಈಗಿನ ಹಾಗೆ ಶರದ್ ಪವಾರ್ ರಾಜಕೀಯ, ಸೋನಿಯಾ ಗಾಂಧಿಯ ಸಂದಿಗ್ಧತೆ ಕುರಿತು ಚಿಂತಿಸುವುದಕ್ಕೆ ಬದಲು ಗುಲಗಂಜಿಗಳಿಗಾಗಿ ಹುಡುಕಿ ಕೋಬಾಳೆ ತೊಟ್ಟಿನ ಮೇಲೆ ಇಟ್ಟು ಊದುವುದಕ್ಕೆ ಹಾತೊರೆಯುತ್ತಿದ್ದೆ; ಕರಿಯ ಅರಣ್ಯದಿಂದ ತರುವ ಗುಂಗೆಗಾಗಿ ಕಾದು ಅದರ ಕುತ್ತಿಗೆಗೆ ದಾರ ಕಟ್ಟಿ ಆಡಿಸುವುದು ನನ್ನ ಖುಷಿಯ ಲೋಕವಾಗಿತ್ತು;


ನನ್ನಲ್ಲಿದ್ದ ಹುಡುಗ ಈಗ ಇದ್ದಾನೋ, ತೀರಿಕೊಂಡಿದ್ದಾನೋ ಗೊತ್ತಿಲ್ಲ, ಅದು ಬೇರೆ ಮಾತು. ನಾನು ಈಗ ಬರೆಯುವುದಕ್ಕೂ ಆಗ ಬರೆದದ್ದಕ್ಕೂ ವ್ಯತ್ಯಾಸವಿದೆ. ನಾನು ಚಿಕ್ಕಂದಿನಲ್ಲಿ ಬರೆದ ಒಂದು ಪುಟ್ಟ ಕೋಮಲ ಕತೆಯನ್ನು ಈಗ ತಿದ್ದಿದರೆ ದಡ್ಡನಾಗುತ್ತೇನೆ. ಅದು ಆತನ ಕತೆ. ಅದನ್ನು ತಿದ್ದುವ ಛಾತಿ ಅಥವಾ ಹಕ್ಕು ನನಗಿಲ್ಲ.

ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ ಆಡೆನ್ ಎಂಬ ಕವಿಯ ಬಗ್ಗೆ ಮೊನ್ನೆ ಓದುತ್ತಿದ್ದೆ. ಅವನು ತನಗೆ ವಯಸ್ಸಾದಂತೆಲ್ಲ ತನ್ನ ಚಿಕ್ಕಂದಿನ ಕವನಗಳನ್ನು ತಿದ್ದಿ ಬರೆದ; ಚಿಕ್ಕಂದಿನಲ್ಲಿ ಆಳವಾದ ಯೋಚನೆ ಇರಲಿಲ್ಲ, ಅನುಭವ ಇರಲಿಲ್ಲ, ಕಾಣ್ಕೆ ಇರಲಿಲ್ಲ- ಎಂದು ಯೋಚಿಸಿದ. ಆತ ತಿದ್ದಿದ್ದೆಲ್ಲ ಕೆಟ್ಟು ಗಬ್ಬಾಯಿತು.

ನಮ್ಮ ಬರಹಗಾರರೂ ಅಷ್ಟೆ. ಅವರಲ್ಲಿ ಅನೇಕರು ಚಿಕ್ಕವರು, ನಡುವಯಸ್ಸಿನವರು, ನನ್ನಿಂದ ಭಿನ್ನರಾದವರು. ಪ್ರತಿಭಾನಂದಕುಮಾರ್ ತನ್ನ ವ್ಯಕ್ತಿತ್ವಕ್ಕೆ ಒಪ್ಪುವಂತೆ ಬರೆಯಬೇಕು. ಜಾಹ್ನವಿ ಕೂಡ. ನಮ್ಮ ಎಳೆಯ ವರದಿಗಾರರಿಗೆ ಹೇಳುತ್ತೇನೆ: 'ಪತ್ರಿಕೆಗೆ ತನ್ನದೇ ಆದ ವಿಶಿಷ್ಟ ಶೈಲಿ ಇಲ್ಲ, ಹಾಗೆ ನೀನು ತಿಳಿದಿದ್ದರೆ ಅದು ತಪ್ಪು, ನಿನ್ನಂತೆ ನೀನು ಬರಿ. ಎಲ್ಲ ಶೈಲಿಗಳು ಸೇರಿ ಒಂದು ಪತ್ರಿಕೆಯಾಗಬೇಕು. ಚಂದ್ರೇಗೌಡ ನೀನಲ್ಲ, ಚಂದ್ರೇಗೌಡ ತೇಜಸ್ವಿಯಲ್ಲ, ಬರವಣಿಗೆಯ ಮರ್ಮವೇ ಅದು. 'ಪತ್ರಿಕೆ'ಯ ಚೆಂದ ಕೂಡ ಅದೇ ಆಗಿದೆ..'

-ಜೂನ್ 7, 1995

ವಂಚಕರಿಗೆ ವಂಚಕರೇ ನಂಟರು



ಎಚ್.ಎಲ್. ಕೇಶವಮೂರ್ತಿ

ಅಣಕ

ಕೆಲವರು ಆಮರಣ ಉಪವಾಸ ಅಂತ ಕೂರುತ್ತಾರೆ. ಓಹೋ ಇವರ ಕತೆ ಹಂಗಾದ್ರೆ ಮುಗಿದಂಗೇಯ ಅನ್ನುವಂತೆಯೂ ಇಲ್ಲ. ಅವರೇನು ಸಾಯುವವರೆಗೂ ಹಾಗೆ ಕೂರಲ್ಲ. ನಡುವೆಯೇ ನಿಲ್ಲಿಸುತ್ತಾರೆ. ಹಾಗಂತ ಅವರ ಬೇಡಿಕೆ ಈಡೇರಿತು ಅಂತಾನೂ ಅಲ್ಲ. ಅಲ್ಲಿಯವರೆವಿಗೂ ಕೂರುತ್ತಿದ್ದರೋ ಏನೋ. ಆದರೆ ಅವರ ದೇಹ ಅನ್ನೋದು ತಡೆಯುವ ಸಾಮರ್ಥ್ಯ ಹೊಂದಿರೋಲ್ಲ. ಹಾಗಂತ ಆಮರಣ ಉಪವಾಸ ನಿಲ್ಲುಸ್ತೀನಿ ಅನ್ನುವ ಹಾಗೂ ಇಲ್ಲ. ಮರ್ಯಾದೆ ಪ್ರಶ್ನೆ ಕಾಡುತ್ತೆ!

ನಮ್ಮಲ್ಲಿ ಹಿರಿಯ ರಾಜಕಾರಣಿ ಇದ್ದರು. ಒಳ್ಳೆಯ ಮನುಷ್ಯರೇ. ಒಮ್ಮೆ ಎಲ್ಲೋ ಅವರ ತಲೆಗೆ ಯಾರೋ ಏನೋ ತುಂಬಿರಬೇಕು. ಯಾವುದೋ ಸಮಸ್ಯೆ. ಅದರ ಪರಿಹಾರಕ್ಕೆ ಆಮರಣ ಉಪವಾಸ ಕುಂತರು. ಅವರಿಗೋ ಭ್ರಮೆ. ಸರ್ಕಾರ ಇದರಿಂದ ಬೆಚ್ಚಿಬೀಳುತ್ತೆ ತಮ್ಮ ಕಾಲ ಬಳಿ ಬಂದು ಬೀಳುತ್ತೆ ಅನ್ನೋದು. ವಸ್ತುಸ್ಥಿತಿ ಹಾಗಿರಲಿಲ್ಲ. ಬಾಲಬಡುಕರು ಕೆಲವರನ್ನು ಬಿಟ್ಟರೆ ಅವರ ಬಗ್ಗೆ ಬೇರೆಯವರಿಗೆ ಯಾವ ಕಾಳಜಿಯೂ ಇರಲಿಲ್ಲ. ಒಂದು ದಿನ ಆಯಿತು. ಎರಡನೇ ದಿನವೂ ಕಳೆಯಿತು. ಸಂಬಂಧಿಸಿದವರಿಗೆ ಸುದ್ದಿ ಮುಟ್ಟಿಸಿದರು. ರೆಕ್ಕೆಕಳೆದುಕೊಂಡ ಹಕ್ಕಿ ಇದು ಎಂಬುದು ಅವರಿಗೆ ತಿಳಿದಿತ್ತು. ಸರ್ಕಾರದ ಕಡೆಯಿಂದ ಯಾರೂ ಮಾತುಕತೆಗೆ ಬರಲಿಲ್ಲ. ಮುದಿದೇಹ ಉಪವಾಸದಿಂದ ನಿತ್ರಾಣಗೊಂಡಿತು. ಉಪವಾಸ ಸಹಿಸುವ ಶಕ್ತಿ ಕ್ಷೀಣಿಸಿತು. ಸಾಯಲು ಮನಸ್ಸು ಬಾರದು. ಪಾಪ ಏನು ಮಾಡಬೇಕು ಅವರು? ತಮ್ಮ ಆಪ್ತರನ್ನು ಕರೆದು ಉಪವಾಸ ಮುಷ್ಕರ ನಿಲ್ಲಿಸುವಂತೆ ಒತ್ತಾಯಿಸಿ ಎಂದು ಸೂಚಿಸಿದರು!

ಬಾಬಾ ರಾಮದೇವ್ ಆಮರಣ ಉಪವಾಸ ಕುಂತರು. ವಿದೇಶದಲ್ಲಿರುವ ಕಪ್ಪುಹಣ ಹಿಂತರುವತನಕ ನಿಲ್ಲಿಸುವುದಿಲ್ಲ ಎಂದು ಘೋಷಿಸಿದರು. ಕಪ್ಪುಹಣ ಬರಲಿಲ್ಲ, ಸರ್ಕಾರ ಭರವಸೆ ನೀಡಲಿಲ್ಲ, ಸಂಧಾನಕ್ಕೂ ಮುಂದಾಗಲಿಲ್ಲ. ಬೇರೆಯವರು ಬಂದರು ನಿಜ. ಆದರೆ ಅವರು ಬಗ್ಗಲಿಲ್ಲ. 'ನನ್ನ ನಿರ್ಧಾರ ಅಚಲ' ಎಂದರು!


ನಮ್ಮ ಮುದಿರಾಜಕಾರಣಿಯ ಪರಿಸ್ಥಿತಿ!

ರವಿಶಂಕರ್ ಗುರೂಜಿ ಪ್ರತ್ಯಕ್ಷ ಆದರು. ಮಧ್ಯಸ್ಥಿಕೆ ವಹಿಸಿದರು. ಉಪವಾಸ ಕೈಬಿಡಲು ರಾಮದೇವ್ ಅವರ ಮನಸ್ಸು ಒಲಿಸಿದರಂತೆ! ರಾಮದೇವ್ ಒಲಿದರಂತೆ!

ವಂಚಕರಿಗೆ ವಂಚಕರೇ ನಂಟರು!

ಪರಿಹಾರಕ್ಕೂ ಜಾತಿ ಸೂತಕ

ಅದೇನು ಗಾಚಾರ ಕಾಯಿತ್ತೊ ಆ ಮನೆಯೋರ್ಗ ತಿಳಿವಲ್ದು. ಹೊತ್ತುಟ್ಟಕ್ಕೆ ಮುಂಚೇನೆ ಹಾಳು ಬಸ್ತಿ ಆನೆ ಮನೆ ಯಜಮಾನ್ನ ತಿವಿದು ತಿವಿದು ಸಾಯಿಸ್ತು. ದುಡೀತಿದ್ದೋನ್ನ ಕಿತ್ಕಂಡು ನಂಬಾಯಿಗೆ ಮಣ್ಣ ಹಾಕಿದಲ್ಲೊ ಸಿವನೆ ಅಂತ ಶಿವನಿಗೆ ಶಾಪ ಹಾಕ್ತ ದುಡಿಸುತ್ತಿತ್ತು. ಅರೆರೆ ಮೈಸೂರಲೆ ಹಿಂಗಾಗದಲ್ಲ ಅಂತಾವ ಅರಣ್ಯ ಮಂತ್ರಿ ಓಡೋಡಿ ಬಂದ್ರು. ಬರೋದು ಬಂದ್ರು. ಬಂದು ನಾಲ್ಕು ಸಮಾಧಾನದ ಮಾತ ಬಿಸಾಕಿ ಕಡ್ದಿದ್ರೆ ಆಯ್ತಿತ್ತು. ಹೊಸದಾಗಿ ಮಂತ್ರಿಯಾಗಿದ್ದೊರಲ್ವಾ. ಅರಣ್ಯ ಇಲಾಖೆಯಿಂದ ಮೂರೂವರೆ ಲಕ್ಷ



ರೂಪಾಯಿ ಪರಿಹಾರ ಕೊಡ್ತೀನಿ ಅಂದ್ರು. ಅದೂ ಸಾಲ್ದು ಅಂತ ಮನೆಯ ಒಬ್ಬರಿಗೆ ಇಲಾಖೇಲಿ ಕೆಲ್ಸಾನೂ ಕೊಡ್ತೀನಿ ಅಂತ ಮಾತು ಕೊಟ್ರು. ಇಷ್ಟೇ ಆಗಿದ್ದರೆ ಹೆಂಗೋ ನಡೆದುಹೋಯ್ತಿತ್ತು. ಮುಖ್ಯಮಂತ್ರಿಗಳಿಗೆ ಮನೆಯವರ ಕಷ್ಟ ಊಹಿಸಿಯೇ ಕರಳು ಬಾಯಿಗೆ ಬಂತು. ಕರುಣೆ ಅನ್ನೋದು ಉಕ್ಕಿಉಕ್ಕಿ ಹರೀತು. ಈ ಮನೆಯೋರ್ಗೆ ಏನಾದ್ರೂ ಮಾಡ್ಲೇಬೇಕು ಸರ್ಕಾರದಿಂದ ಎಂದು ಐದು ಲಕ್ಷ ಪರಿಹಾರ ಕೊಡ್ತೀನಿ ಅಂತ ಸಾರಿದ್ರು.

ಹಿಂಗೆ ಅಂದದ್ದೆ ಬಂತು ನೋಡಿ. ಎಂತೋರ್ಗೂ ಆಗದವರು ಅಂತ ಇರ್ತಾರಲ್ವ. ಅಂತೋರು ಸರ್ಕಾರ ಐದು ಲಕ್ಷ, ಇಲಾಖೆ ಮೂರೂವರೆ ಲಕ್ಷ ಅಂದ್ರೆ ಎಂಟೂವರೆ ಆಯ್ತು. ಮೇಲಾಗಿ ಒಬ್ಬರಿಗೆ ಸರ್ಕಾರಿ ಕೆಲಸ! ಅದೃಷ್ಟ ಅಂದ್ರೆ ಹಿಂಗೆ ಹೊಡೀಬೇಕು. ಸಾಯೋನು ಸಾಯ್ತ ಸರ್ಯಾದ ಟೈಮಿಗೇ ಸರ್ಯಾಗೇ ಸತ್ತವ್ನೆ ಬುಡು ಅಂದ್ಕೊಂಡು ಹೊಟ್ಟೆಗೆ ಬೆಂಕಿ ಸುರ್ಕಂಡ್ರು. ಇದ್ಯಾಕಿಂಗೆ ಹೊಟ್ಟೆ ಉರ್ಕತ್ತೀದೀರಿ , ಅವ್ರು ಕೊಟ್ಟಿರೋದು ಐದು ಲಕ್ಷದ ಚೆಕ್ಕು ಕಣ್ರಪ್ಪ ಎಂಟೂವರೆದಲ್ಲ. ಅದೂ ಅಲ್ದೆ ಇದು ಯಡ್ಯೂರಪ್ಪನೋರ ಸರ್ಕಾರದ ಚೆಕ್ಕು. ಇದ್ನೆ ಯಾವ ಬ್ಯಾಂಕಲ್ಲೂ, ಟ್ರೇಜರೀಲೂ ಮೂರು ಕಾಸಿನ ಕಿಮ್ಮತ್ತಿಲ್ಲ. ಇದ ಯಜಮಾನನ ಸ್ಮಾರಕ ಅಂತ ಬೇಕಾದ್ರೆ ಬೆಳ್ಳಿ ಕಟ್ಟಾಕ್ಸಿ ಮನೇಲಿಟ್ಕೋಬೋದು. ಅಷ್ಟೇಯ ಅಂದ್ರೆ ಕೇಳ್ತೋಲ್ರು. ಚೆಕ್ ಅತ್ಲಾಗಿ ಬಿಸಾಕ್ರಿ. ಕೆಲ್ಸನಾದ್ರೂ ಸಿಕ್ತದಾ. ಅದೂ ಅರಣ್ಯ ಇಲಾಖೆ ಕೆಲಸ. ಅಲ್ಲಿನ ಕೆಲಸ ಅಂದ್ರೆ ಚಿನ್ನದ ಮೊಟ್ಟೆ ಇಡೋ ಕೋಳಿ ಇದ್ದಂಗಲ್ವಾ ಅಂತ ಬಾಯಿ ಕಟ್ತವೆ. ಕಾನೂನು ಅಂತ ಒಂದದಲ್ರಪ್ಪಾ ಹಂಗೆಲ್ಲ ಕೆಲ್ಸಾನ ಕಡ್ಲೆಪುರಿ ಹಂಚಿದಂಗೆ ಹಂಚಾಕೆ ಬರೋದಿಲ್ಲ ಅಂದ್ರೆ ನಮ್ತಾವೆ ಹೊಡೀತ್ತೀರಲ್ರಿ. ಸರ್ಕಾರವೇ ಹಂಗೇಳದೆ ಅಂತ ಬಾಯಿ ಜೋರು ಮಾಡ್ತ ಕುಂತವೆ.

ಮುಂಡೆ ಮದುವೆಗೆ ನೂರೆಂಟು ವಿಘ್ನ ಅಂದಂಗಾಗದೆ ಕತೆ. ಹಾಳಾದ ಕುಮಾರಸ್ವಾಮಿ ಸತ್ತೋನ ಹೆಸರ ಹಿಡ್ಕಂಡು ಅಳ್ಳಾಡುಸ್ತಾ ಅವ್ರೆ. ಆ ಹೆಸರು ನೋಡೇ ಯಡ್ಯೂರೊಪ್ನೋರ ಕರಳು ಮಿಡದದೆ ಅನ್ನೋದು ಅವರ ತಕರಾರು. ಆನೆ ತುಳಿತಕ್ಕೆ ಸತ್ತೋರ್ಗೆಲ್ಲ ಹಿಂಗೇ ಪರಿಹಾರ ಕೊಡಿ ಅಂತ ಕೂಗ್ತಾ ಬಿದ್ದವ್ರೆ. ಅಲ್ರಿ ಕುಮಾರಣ್ಣ ನಿಂತಲೆ ಒಳಗೆ ಏನಿದ್ದಾತು ಅಂತೀನಿ. ಹೆಸರು ಕೇಳಿ ಜಾತಿ ಹೇಳೋ ಕಾಲ ಇದಲ್ರೀ. ಬ್ರಾಹ್ಮಣರ ತಲೆಮೇಲೆ ಹೊಡ್ದಂಗೆ ಹೆಸರಿಟ್ಟುಕೊಂಡಿರ್ತವೆ. ಇವ್ನೂ ನಮ್ಮೋನೇಯ ಅಂತ ಮನೆ ವಳಕ್ಕೆ ಸೇರಿಸ್ಕತಾರೆ. ಆಮೇಲೆ ನೋಡಿದ್ರೆ ಅದು ಯಾವುದೋ ಕಿರುಜಾತಿಗೆ ಸೇರಿರ್ತದೆ. ಆಮೇಲೆ ಅಯ್ಯೋ ಇಂತೋರ್ನೆಲ್ಲ ಮನೆ ಒಳೀಕೆ ಸೇರಿಸ್ಬಿಟ್ನಲ್ಲಾ ಅಂತ ಕೈಕೈ ಹಿಸುಕಿಕೊಂಡು, ಆಗಿದ್ದ ಮೈಲಿಗೇನ ಗೋಮೂತ್ರದಿಂದ ಕಳ್ಕೊತ್ತಾರೆ ಅಲ್ವಾ. ಅದ ಕಾಣ್ತ ನೀವು ಅಂದ್ರೆ ಅವರು ತಕರಾರು ಎತ್ತಿದ್ರೂ ಎತ್ತಬಹುದು. ಈ ಯಡ್ಯೂರಪ್ಪನ ಹಣೇಬರ ನೀವು ಕಾಣ್ರಿ. ಆನೆ ತುಳಿತಕ್ಕೆ ಸಿಕ್ಕಿ ಸತ್ತ ಅಂದ್ರೆ ಅವ್ನ ಮೊದಲು ಕೇಳೋದು ಸತ್ತ ಸ[...] ಸತ್ತಿರೋನು ಯಾವ ಜಾತಿಯೋನು ಅಂತಾವ. ಅದ[...] ಆಧಾರದ ಮೇಲೆ ಪರಿಹಾರ ಸೂಚಿಸೋದು. ಒ[...] ಲಿಂಗಾಯತ ಸತ್ತ ಅಂದ್ರೆ ಒಂದು ಓಟು ಕಡಿಮೆ ಆಯ್ತದ[...] ಅನ್ನೋ ಲೆಕ್ಕಾಚಾರ ಅವ್ರುನ್ದು. ಮನೇಲಿ ಉಳ್ದಿರೋ[...] ಓಟ್ನಾರ ಗ್ಯಾರಂಟಿ ಮಾಡ್ಕಳಾನ ಅಂತ ಹಿಂಗ್ಮಾಡಿರ್ತಾ[...] ಅಂದ್ರೂ ಅನ್ನಬಹುದು!

ಕುಮಾರಣ್ಣನ ಮಾತ್ನ ಸಾರಾಸಗಟಾಗಿ ತೆಗೆದ[...] ಬಿಸಾಕಂಗಿಲ್ಲ ಅನ್ನಿ. ಅಲ್ಲ ಒಕ್ಕಲಿಗರ ಸೀಮೇಲೆಲ್ಲ ದೇವೆ[...] ಗೌಡ್ರ, ಅವರ ಮಕ್ಕಳ ಮೆರುಸ್ತಾ ಕುಂತವ್ರಲ್ಲ ಯಾಕೆ[...] ಅವ್ರೇನು ಸೀಮೆಗಿಲ್ಲದ ಆಡಳಿತಗಾರರು ಅಂತಾನಾ? ಅವ[...] ಒಕ್ಕಲಿಗರು ಅಂತಾನೆ ಅಲ್ವಾ? ಹಿಂಗೇ ಯೋಚಿಸ್ತಾ ಹೋದ[...] ಈ ಕಾಡುಪ್ರಾಣಿಗಳವಲ್ಲ ಅವು ಲಿಂಗಾಯತರ ದರ್ಬಾರಿನಲ್[...] ಲಿಂಗಾಯತರ, ಒಕ್ಕಲಿಗರ ದರ್ಬಾರಿನಲ್ಲಿ ಒಕ್ಕಲಿಗರ ಹಿಂಗ[...] ಯಾವ ಜಾತಿಯವರ ದರ್ಬಾರು ನಡೀತದೋ ಅ[...] ಜಾತಿಯವರನ್ನ ಸಾಯಿಸಬೇಕೆ ಪರಂತು ಬ್ಯಾರೆ ಜಾತಿಯೋರ[...] ತಂಟೆಗೋಗ್ಬಾರ್ದು ಅಂತ ಕಟ್ಟುಮಾಡಬೇಕಾಯ್ತದೋ[...] ಏನೋ! ಅದು ಸರಿ ಯಾವ ಕಾರಣಕ್ಕೂ ಅಧಿಕಾರದ[...] ಹತ್ತಿರಾನೂ ಸುಳಿಯೋ ಅವಕಾಶ ಇಲ್ದಿರೋ ಜಾತಿ ಆದ[...] ಏನು ಮಾಡೀರಿ ಅಂದ್ರಾ... ಅಯ್ಯೋ ಉಡಿಪಡಿ[...] ಜಾತಿಯೋವ್ನೆಲ್ಲ ಬಿಸಾಕ್ರಿ ಅತ್ಲಾಗಿ...

ಆಯ್ಕೆ ನಿಮ್ಮದು

ನರ್ಸ್ ರೇಣುಕ ಯಡ್ಯೂರಪ್ಪನವರ ಸಿನಿಮಾ[...] ತಗೀತಾರಂತೆ. ರಾಜೇಂದ್ರಸಿಂಗ್ ಬಾಬು ಚಿತ್ರಕಥ[...] ಸಿದ್ದಪಡಿಸುತ್ತಿದ್ದಾರಂತೆ. ಸಿನಿಮಾದ ಹೆಸರು ಇನ್ನೂ ನಿರ್ಧಾರ[...] ಆಗಿಲ್ಲವಂತೆ. ಈ ಕೆಳಗಿನ ಯಾವುದಾದರೂ ಆಗಬಹುದಾ?

'ಸುಳ್ಳಿನ ಸರದಾರ'

'ಭಂಡ ಜಗಭಂಡ'

'ಮೂರನ್ನೂ ಬಿಟ್ಟವ ಊರಿಗೆ ದೊಡ್ಡೋನು'

'ಆಸ್ತಿಗಳಿಸಲು ಹನ್ನೆರಡು ಸೂತ್ರಗಳು'

'ಈ ಬೀದೀಲಿ ಉಗಿತ ಮುಂದಿನ ಬೀದೀಲಿ ನೆಗೆತ'

'ಥೂ ಅಂದ್ರೆ ಬಾ ಅಂದ್ರು'

'ಹೆಂಡತಿ ಸಾಯಿಸೋದು ಹೇಗೆ?'

'ಜಾತಿ ಇಲ್ದಿದ್ರೇ ಫಜೀತಿ'

ಎಲ್ಲಾ ಕಾವಿ ಗುರುಗಳು ತಮ್ಮ ಆಸ್ತಿ ಬಹಿರಂಗಪಡಿಸಲಿ

ಏನೋ ಮಾಡಲು ಹೋಗಿ ಅಂದು ಸುಟ್ಟ ಬೆಕ್ಕಿನಂತಾಗಿರುವ ಢೋಂಗಿ ಯೋಗ ಗುರು ಬಾಬಾ ರಾಮದೇವನ ನಿಜಬಣ್ಣವನ್ನು ಬಯಲು ಮಾಡಿ ಸಮಸ್ತ ಕರ್ನಾಟಕಕ್ಕೆ ತಿಳಿಸಿದ 'ಲಂಕೇಶ್' ವಾರ ಪತ್ರಿಕೆಯ ಬಳಗಕ್ಕೆ ಧನ್ಯವಾದಗಳು.

ಬಿಜೆಪಿ ಮತ್ತು ಆರೆಸ್ಸೆಸ್ ಆಣತಿಯಂತೆ ಭ್ರಷ್ಟಾಚಾರ ಮತ್ತು ಕಪ್ಪು ಹಣದ ವಿರುದ್ಧ ಉಪವಾಸ ನಿರಶನ ಆರಂಭಿಸಿದಂತೆ ನಾಟಕವಾಡಿದ ರಾಮದೇವ್ 1152 ಕೋಟಿ ರೂ. ಆಸ್ತಿ ಹೊಂದಿದ್ದು, ಭ್ರಷ್ಟಾಚಾರದ ವಿರುದ್ಧ ಮಾತನಾಡುವ ನೈತಿಕತೆ ಆತನಿಗೆ ಖಂಡಿತ ಇಲ್ಲ. ಬಾಬಾನಿಗೆ ಉಪವಾಸದ ಮುಖವಾಡ ಧರಿಸಿ ಆತನನ್ನು ತಮ್ಮ ಗಾಳವಾಗಿ ಉಪಯೋಗಿಸಿಕೊಂಡ ಬಿಜೆಪಿ ಮತ್ತು ಆರೆಸ್ಸೆಸ್‌ನ ಕಪಟ ನಾಟಕ ಇಡೀ ದೇಶಕ್ಕೆ ಗೊತ್ತಾಗಿದೆ.

ಸಮಾಜ ಉದ್ಧಾರ ಮಾಡುವ, ಧರ್ಮಜಾಗೃತಿ ಮೂಡಿಸುವ ಮುಖವಾಡ ಧರಿಸಿ ಕೋಟ್ಯಾಂತರ ರೂ. ಆಸ್ತಿ ಗಳಿಸಿರುವ ಎಲ್ಲಾ ಕಾವಿ ಗುರುಗಳು ಸ್ವಇಚ್ಛೆಯಿಂದ ತಮ್ಮ ಮಠಗಳ ಸ್ಥಿರ-ಚರ ಆಸ್ತಿಯನ್ನು ಬಹಿರಂಗಪಡಿಸಲಿ.

ಯೋಗ ಗುರು ರಾಮದೇವನ ಜೊತೆ ಭ್ರಷ್ಟಾಚಾರ ವಿರೋಧಿಸಿ ಧರಣಿ ಕೂರುವ ಪೇಜಾವರ ಶ್ರೀಗಳು ದಲಿತರ ಜೊತೆ ಇರಲಿ, ಇತರೆ ಮೇಲು ಜಾತಿಯವರೊಂದಿಗೂ ಸಹ ಪಂಕ್ತಿ ಭೋಜನವನ್ನೇ ಮಾಡುವುದಿಲ್ಲ. ಇಂಥವರು ಸಮಾನತೆ, ಭ್ರಷ್ಟಾಚಾರ ವಿರುದ್ಧ ಮಾತನಾಡುತ್ತಿರುವುದು ಹಾಸ್ಯಾಸ್ಪದವಾಗಿದೆ.

ಸಮಾಜ ತಿದ್ದುವ ಕಾಯಕ ಮಾಡುವ, ಸರ್ವಪರಿತ್ಯಾಗಿ ಶ್ರೀಗಳಿಗೆ ಕೋಟ್ಯಾಂತರ ರೂ. ಆಸ್ತಿ ಯಾಕೆ ಬೇಕು?

ದೇಶದಲ್ಲಿಯೇ ಅತಂತ್ಯ ಭ್ರಷ್ಟ ಮುಖ್ಯಮಂತ್ರಿ ಎಂಬ ಕೀರ್ತಿಗೆ ಪಾತ್ರರಾಗಿರುವ ಯಡಿಯೂರಪ್ಪ ಮಠಗಳಿಗೆ ಹಣ ನೀಡಿದ್ದಾರೆ ಎಂಬ ಕಾರಣಕ್ಕೆ ಅವರ ಎಲ್ಲಾ ಭೂಹಗರಣಗಳನ್ನು ಮರೆತು ಅವರ ಪರ ವಹಿಸಿ ಬೀದಿ ಹೋರಾಟ ಮಾಡಿದ ಹಲವು ಶ್ರೀಗಳ ವರ್ತನೆಯಂತೂ ನಾಚಿಕೆಗೇಡಿನ ಸಂಗತಿ.

ಇಂಥ ಹೋರಾಟಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಶ್ರೀಗಳಿಂದ ಹಾಗೂ ತಾನೇ ಕೋಟ್ಯಾಂತರ ರೂ. ಆಸ್ತಿ ಹೊಂದಿದ್ದೂ ಭ್ರಷ್ಟಾಚಾರದ ವಿರುದ್ಧ ಉಪವಾಸ ನಡೆಸುವ ಬಾಬಾ ರಾಮದೇವ್ ತರಹದ ವ್ಯಕ್ತಿಗಳಿಂದ ಸಮಾಜದ ಏಳ್ಗೆ ಸಾಧ್ಯವೇ?

- ಎಸ್.ಎನ್.ಕುಮಾರ್, ಪುಣಬಗಟ್ಟೆ, ಹರಪನಹಳ್ಳಿ

ರಾಮದೇವ್ ಎಂಬ ವ್ಯಾಪಾರಿಯನ್ನು ಕುರಿತು ಅದ್ಭುತ ವರದಿ ಪ್ರಕಟಿಸಿದ್ದಕ್ಕೆ ಧನ್ಯವಾದಗಳು. ಇದನ್ನು ಓದಿದ ನಂತರವೇ ಈ ಬೂಸಿ ಗುರುವಿನ ನಿಜ ಬಣ್ಣ ನಮಗೆ ಗೊತ್ತಾದದ್ದು. ಇವನಂತೆಯೇ ಇರುವ ಇತರೆ ಢೋಂಗಿ ಬುಸಿನೆಸ್ 'ಗುರು'ಗಳಾದ ರವಿಶಂಕರ್, ಅಮೃತಾಮಯಿ, ವೀರೇಂದ್ರ ಹೆಗ್ಡೆ ಅವರ ಮುಖವಾಡಗಳನ್ನು ಕಳಚಿಹಾಕಿ.

- ಪ್ರಸಾದ್, ಎಸ್‌ಎಂಎಸ್ ಮೂಲಕ



ಜೂನ್ 22.2011ರ ನಿಮ್ಮ ಸಂಚಿಕೆಯಲ್ಲಿ ಮಂಜುನಾಥ ಲತಾರವರ "ದಲಿತಕವಿ(?) ಸಿದ್ಧಲಿಂಗಯ್ಯನವರದು 'ಬ್ರಾಹ್ಮಣ' ಪ್ರೀತಿಯೋ, 'ಬ್ರಾಹ್ಮಣ್ಯ'ದ ಪ್ರೀತಿಯೋ?" ಎಂಬ ಪ್ರತಿಕ್ರಿಯಾತ್ಮಕ ಬರಹ ಬರೋಬರಿ ಇದೆ. ಸಿದ್ಧಲಿಂಗಯ್ಯನವರು ಒಂದಾದ ಮೇಲೆ ಒಂದರಂತೆ ಉನ್ನತ ಹುದ್ದೆಯ ಮೆಟ್ಟಿಲು ಏರಿದಂತೆಲ್ಲಾ ಅಂಬೇಡ್ಕರ್ ತತ್ವಸಿದ್ಧಾಂತಗಳಿಗೆಲ್ಲಾ ತಿಲಾಂಜಲಿ ಕೊಟ್ಟು, ಹೊಳೆದಾಟಿದ ಮೇಲೆ ಅಂಬಿಗನ ಹಂಗ್ಯಾಕೆ ಎಂಬಂತೆ, ಬಡ ಹೊಲೆ-ಮಾದಿಗರ ಹಂಗು ಹರಿದುಕೊಂಡು, ಕಾರ್ಯವಾಸಿ ಕತ್ತೆಕಾಲು ಕಟ್ಟಿದರು ಎಂಬಂತೆ ವರ್ತಿಸುತ್ತಿರುವುದು ಎಲ್ಲರೂ ತಿಳಿದ ವಿಚಾರವೇ.

ಸದ್ಯ ಬಿಜೆಪಿಯಂಥ ಭ್ರಷ್ಟ ಸರ್ಕಾರ ಇನ್ನೊಂದಿಲ್ಲ ಎಂಬ ಕುಖ್ಯಾತಿ ಗಳಿಸಿದ ಸರ್ಕಾರದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರನ್ನು ಕುರಿತು ಕನಿಷ್ಠ ಲಜ್ಜೆಯೂ ಇಲ್ಲದೆ, ಸಾರ್ವಜನಿಕರ ಎದುರು 'ಆಧುನಿಕ ಬಸವಣ್ಣ'ನೆಂದು ಹೊಗಳಿ ಕೇವಲ ಇನ್ನೊಂದೇ ವರ್ಷಕ್ಕೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷನಾಗಿ ಮುಂದುವರಿದಿರುವುದು ಯಾರಿಗಾದರೂ ಅಸಹ್ಯ ಹುಟ್ಟಿಸುವಂತಿದೆ.

ಆದ್ದರಿಂದಲೇ ಇದೇ ತಿಂಗಳು 4 ಮತ್ತು 5 ರಂದು ಕುಪ್ಪಳ್ಳಿಯಲ್ಲಿ ನಡೆದ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಹಮ್ಮಿಕೊಂಡಿದ್ದ ಕಮ್ಮಟದ ಅಂಗವಾಗಿ ನಡೆಯಬೇಕಿದ್ದ ಸಿದ್ಧಲಿಂಗಯ್ಯನವರ 'ಊರುಕೇರಿ' ಕೃತಿ ಆಧಾರಿತ, 'ನೀನಾಸಂ' ತಂಡದವರು ಆಡಲಿದ್ದ, ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿದ್ದ ನಾಟಕವನ್ನು ಕವಿ ಎಸ್.ಜಿ.ಸಿದ್ಧರಾಮಯ್ಯ ಮತ್ತು ನಾನು ಪ್ರತಿಭಟಿಸಲಾಗಿ ನಾಟಕದ ಪ್ರಯೋಗವನ್ನು ರದ್ದುಪಡಿಸಲಾಯಿತು.

ಅಂತೆಯೇ ಸಿದ್ಧಲಿಂಗಯ್ಯನವರ ಬಗ್ಗೆ ಅಭಿನಂದನಾ ಗ್ರಂಥ ತರುವುದಾಗಿ ಹೇಳಿ ಶಿವಕುಮಾರ್ ಕಂಪ್ಲಿ ಅವರು ಲೇಖನ ಕೇಳಿದ್ದರಾದರೂ ನನಗೆ ಬರೆಯಲಾಗಲಿಲ್ಲ. ಅನುಕೂಲ ಸಿಂಧು ಫಿಲಾಸಫಿಯ ಸಿದ್ಧಲಿಂಗಯ್ಯನಂಥ ಹುಸಿ ದಲಿತ-ಬಂಡಾಯಗಾರರನ್ನು ಪ್ರಜ್ಞಾವಂತ ಜನ ಪ್ರತಿರೋಧಿಸಲೇಬೇಕಿದೆ. ದಲಿತ ಯುವಜನರು ಕೂಡ ಈ ಮುನ್ನೆಚ್ಚರಿಕೆಯಿಂದ ನಡೆಯಬೇಕಾಗಿದೆ.

- ಪ್ರೊ. ಶಿವರಾಮಯ್ಯ, ಬೆಂಗಳೂರು

ನೈಜ ಅಭಿನಯಕ್ಕೆ ಇನ್ನೊಂದು ಹೆಸರು ವೈಜನಾಥ ಬಿರಾದಾರ್. ಹಲವು ನಾಯಕರ ಚಿತ್ರಗಳಲ್ಲಿ ಸಣ್ಣಪಾತ್ರಗಳಲ್ಲಿ ಬಂದುಹೋದರೂ ಅವರ ಅಭಿನಯಕ್ಕೆ ಹ್ಯಾಟ್ಸಾಫ್ ಹೇಳಲೇ ಬೇಕು.

ಅಮರೇಶ ನುಗಡೋಣಿ ಅವರ 'ಸವಾರಿ' ಕಥೆಯಾಧಾರಿತ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಕನಸೆಂಬೋ ಕುದುರೆಯನೇರಿ' ಚಿತ್ರದಲ್ಲಿನ ಅಭಿನಯಕ್ಕೆ ಸ್ಪೇನ್ ದೇಶದ ಗೋಲ್ಡನ್ ವೀಲ್ ಪ್ರಶಸ್ತಿ ದೊರೆತಿರುವುದು ಇಡೀ ಉತ್ತರ ಕರ್ನಾಟಕ ಜನರಿಗೆ ಕಿರೀಟವಿಟ್ಟಂತಾಗಿದೆ.

'ಕುದುರೆಯನೇರಿ'ಯಲ್ಲಿ ಅತ್ಯಂತ ಮನೋಜ್ಞ ಅಭಿನಯ ನೀಡಿರುವ ಬಿರಾದಾರ್ ರಾಷ್ಟ್ರಪ್ರಶಸ್ತಿಯಿಂದ ವಂಚಿತರಾದದ್ದು ಸೋಜಿಗ. ಪ್ರಶಸ್ತಿ ಪಡೆಯಲು ಕೇವಲ ಪ್ರತಿಭೆಯಷ್ಟೇ ಅಲ್ಲ ಲಾಬಿಯೂ ಬೇಕು ಎನ್ನುವುದಕ್ಕೆ 'ಪಾ' ಚಿತ್ರದ ಅಭಿನಯಕ್ಕೆ ಬಿಗ್‌ಬಿ ಪ್ರಶಸ್ತಿ ಪಡೆದಿರುವುದು ಸಾಕ್ಷಿಯೆನ್ನಬಹುದೇ?

ಬಿರಾದಾರ್‌ಗೆ ಪ್ರಶಸ್ತಿ ಬಂದ ವಿಷಯವನ್ನು ಪ್ರಸ್ತಾಪಿಸುತ್ತಲೇ ಅವರ ಬದುಕನ್ನು ತೆರೆದಿಟ್ಟಿರುವ ಪರಿಗೆ ಗಾಬರಿಯಾಗಿ ಅತ್ತುಬಿಟ್ಟೆ. ಬಿರಾದಾರ್ ಅವರನ್ನು ಕುರಿತು ವರದಿ ಮಾಡಿದ ಪತ್ರಿಕೆಗೆ ಹಾಗೂ ವರದಿಗಾರರಿಗೆ ತುಂಬು ಕೃತಜ್ಞತೆಗಳು.

- ಬಸವರಾಜ ಹಳ್ಳಿ, ಹಸಮಕಲ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಚಂದ್ರು ಮಗನ ಜಿಮ್ ಮಾಯೆ!

ಕರ್ನಾಟಕದ ಪರ್ಮನೆಂಟ್ ಮುಖ್ಯಮಂತ್ರಿ ಚಂದ್ರು ಅವರ ಎರಡನೇ ಮಗ ಹೊಸಾ ಕಸರತ್ತು ಆರಂಭಿಸಿದ್ದಾನೆ. 6.6 ಅಡಿ ಎತ್ತರವಿರುವ ಶರತ್ ಈಗ ಕರ್ನಾಟಕ ಡಿವಿಜನ್‌ನಲ್ಲಿ ಫಾಸ್ಟ್ ಬೌಲರ್ ಆಗಿ ಕ್ರಿಕೆಟ್ ಪಂದ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಇದರ ಜೊತೆಜೊತೆಗೆ ಈತ ಶುರುಮಾಡಿರುವ ಗರಡಿಮನೆ ಹೆಸರು 'ಜಿಮ್ ಫಾರ್ ಅಥ್ಲೆಟ್'. ಇದು ವಿಶೇಷವಾಗಿ ಆಟಗಾರರಿಗೆಂದೇ ಶುರು ಮಾಡಿರುವ ಜಿಮ್. ಯಾವ ಯಾವ ಆಟಗಾರರಿಗೆ ಯಾವ ರೀತಿಯ ಫಿಟ್‌ನೆಸ್ ಬೇಕು ಎಂಬುದನ್ನು ತೀರ್ಮಾನಿಸಿ ಇಲ್ಲಿ ಅವರನ್ನು ಕೋಚ್ ಮಾಡಲಾಗುತ್ತದಂತೆ.

ಮುಖ್ಯಮಂತ್ರಿ ಚಂದ್ರು ಅವರ ಮೊದಲ ಮಗ ಭರತ್ ಎಂ.ಎಸ್. ಇನ್ಫರ್‌ಮೇಷನ್ ಕಲಿತು ಈಗಾಗಲೇ ಸ್ವಂತದ್ದೊಂದು ಸಾಫ್ಟ್‌ವೇರ್ ಕಂಪೆನಿ ನಡೆಸುತ್ತಿದ್ದಾನೆ. ಸದ್ಯ ಕ್ರಿಕೆಟ್ ಮತ್ತು ಜಿಮ್‌ನಲ್ಲಿ ಬ್ಯುಸಿಯಾಗಿರುವ ಶರತ್‌ಗೆ ಸಿನಿಮಾ ಹೀರೋ ಆಗಬೇಕು ಎಂಬ ಬಯಕೆಯಂತೆ. ಮುಖ್ಯಮಂತ್ರಿ ಚಂದ್ರು ಕೂಡಾ ಹಿಂದೊಮ್ಮೆ ಹೀರೋ ಆಗಲು ಬಂದು ಆನಂತರ ವಿಲನ್ ಆಗಿ ಆಮೇಲೆ ರಾಜಕಾರಣಿಯೂ ಆದವರು. ಈಗ ಮಗನ ಸರದಿ ಬಂದಿದೆ...




ಮೋರೆಯಲ್ಲಿ ಕೋರೆ ಕಾಟ!


ಪರಭಾಷಾ ನಟಿಯರನ್ನು ಕರೆಕರೆದು ಅವರಿಗೆ ಕನ್ನಡ ಚಿತ್ರರಂಗದಲ್ಲಿ ಅವಕಾಶ ಕೊಡುವುದರಿಂದ ಏನೆಲ್ಲಾ ಅನಾಹುತ ಆಗಬಹುದು ಎನ್ನುವುದಕ್ಕೆ ನಮ್ಮಲ್ಲಿ ಒಂದಷ್ಟು ಉದಾಹರಣೆಗಳಿವೆ. ಒಂದು ಕಡೆ ಭಾಷೆ ಪ್ರಾಬ್ಲಮ್ಮು, ಇನ್ನೊಂದೆಡೆ ಟೈಮಿಗೆ ಸರಿಯಾಗಿ ಕೈಕೊಡುವ ಬುದ್ಧಿ. ನಿರ್ದೇಶಕರು ಹೇಳಿದ್ದನ್ನು ಇನ್ನೊಂದು ರೀತಿಯಲ್ಲಿ ಅರ್ಥೈಸಿಕೊಂಡು ಪ್ರೆಸ್‌ಮೀಟ್ ಕರೆದು ಗೋಳು ತೋಡಿಕೊಳ್ಳುವ ಅದೆಷ್ಟೋ ನಟಿಯರನ್ನು ನೋಡಿದ್ದೇವೆ, ಕೇಳಿದ್ದೇವೆ.

ಆದರೆ ಈಗಷ್ಟೇ ತೆರೆಗೆ ಬಂದು ಸೈಲೆಂಟಾಗಿ ಮಲಗಿರುವ 'ದೇವದಾಸ್' ಚಿತ್ರದ ನಾಯಕಿ ದೆಲ್ಲಿ ಮೂಲದ ಜೆನಿತ್ ಪಾಂಡೆಯಿಂದಾಗಿ ಆ ಚಿತ್ರತಂಡ ಏನೆಲ್ಲಾ ಗೋಳು ಅನುಭವಿಸಿದೆ ಎಂದು ಕೇಳಿದರೆ ನೀವು ಎದ್ದೂಬಿದ್ದು ನಗುತ್ತೀರಿ!

ಈ ಜೆನಿತ್ ಪಾಂಡೆಯನ್ನು ಕರೆಸಿದ್ದು ಒಬ್ಬ ಬ್ರೋಕರ್ ಮೂಲಕ. ನಿರ್ದೇಶಕ ಎಬಿಸಿಡಿ ಶಾಂತಕುಮಾರ್ ತಲೆಗೆ ತಿಳಿನೀರು ಬಳಿದು, ಜೆನಿತ್‌ಳ ಫೋಟೋಗಳನ್ನು ತೋರಿಸಿ, ಆಕೆಯನ್ನು ಬುಕ್ ಮಾಡಿ, ಒಂದಷ್ಟು ಕಮಿಷನ್ನೂ ಪಡೆದು ಹೋದ ಬ್ರೋಕರ್ ಸೇಫಾದ. ಆದರೆ, ಯಡವಟ್ಟು ಶುರುವಾಗಿದ್ದು 'ದೇವದಾಸ್' ಚಿತ್ರೀಕರಣ ಶುರುವಾದ ಮೇಲೆ!



ಶಾಟ್ ತೆಗೆಯುವಾಗ ನಿರ್ದೇಶಕರು ಜೆನಿತ್‌ಗೆ ಒಮ್ಮೆ ನಗಲು ಹೇಳಿದರು. ಉಹೂಂ.. ಆಕೆ ಹಲ್ಲು ಬಿಡಲೇ ಇಲ್ಲ, ಯಾಕೆ ಹೀಗೆ ಎಂದು ಕೇಳಿದಾಗ ಅವಳಣ್ಣ "ಸಾರ್.. ಕ್ಷಮಿಸಿ, ಅವಳ ಬಾಯಲ್ಲಿ ಎರಡು ಉದ್ದುದ್ದ ಹಲ್ಲುಗಳಿವೆ. ಜೋರಾಗಿ ನಕ್ಕರೆ ಅದು ಹೊರಬರುತ್ತದೆ" ಎಂದ!




ಅದನ್ನು ಕೇಳಿ ಎಬಿಸಿಡಿ ಶಾಂತಣ್ಣ ಅಲ್ಲೇ ಕುಸಿದುಬಿದ್ದರು. ಅವರು "ಮೋರೆ ನೋಡಿ ಸೆಲೆಕ್ಟ್ ಮಾಡಿದ್ದು ತಪ್ಪಾಯಿತು; ಕೋರೆ ಹಲ್ಲನ್ನೂ ನೋಡಬೇಕಿತ್ತು" ಎಂದು ಎಷ್ಟೋ ಹೊತ್ತು ಗೋಳಾಡಿದರು. ಕೊನೆಗೆ ಅವಳ ಪೋರ್ಷನ್ ಶೂಟಿಂಗ್ ಮುಂದೆ ಹಾಕಿ, ಆಕೆಗೆ ಒಂದು ವಾರ ರಜೆ ಕೊಟ್ಟು, ಹಲ್ಲು ತೆಗೆಸಿಕೊಂಡುಬರಲು ಕಳುಹಿಸಿದರು. ಪಾಂಡೆ ಮೂರು ದಿನಗಳಲ್ಲಿ ಆ ಕೋರೆ ಹಲ್ಲನ್ನು ಸಮಾ ಮಾಡಿಸಿಕೊಂಡು ಬಂದು ನಿರ್ದೇಶಕರ ಮುಂದೆ ನಿಂತು ಹಲ್ಲು ಕಿರಿದಳು. ಕೋರೆ ಇಲ್ಲದ ಮೋರೆ ನೋಡಿ ಎಬಿಸಿಡಿ ನಿರಾಳವಾಗಿ ನಕ್ಕರು!

ಜೆನಿತ್‌ಳಿಂದಾದ ಪಡಿಪಾಟಲು ಅಲ್ಲಿಗೆ ನಿಲ್ಲಲಿಲ್ಲ, ಅಳುವ ಸೀನು ಬಂದಾಗ ಆಕೆಯ ಮುಖ ಮುದುಡುವುದಿರಲಿ, ಕಡೇ ಪಕ್ಷ ಆಕೆಯ ಕಣ್ಣಲ್ಲಿ ನಯಾಪೈಸೆ ಭಾವನೆಯೂ ಬರುತ್ತಿರಲಿಲ್ಲ, ನಿರ್ದೇಶಕರು ಅದಕ್ಕೆ ಮಾಡಿದ ಐಡಿಯಾ-ಒಂದು ದಿನ ಪೂರ್ತಿ ಆಕೆಯ ಕಣ್ಣಿಗೆ ಗ್ಲಿಸರಿನ್ ಮೆತ್ತಿ ಬರೀ ಅಳುವುದೊಂದೇ ಕೆಲಸ ಕೊಟ್ಟು, ಮೂಲೆಯಲ್ಲಿ ಕೂರಿಸಿದ್ದರು!

ನಗುವ ದೃಶ್ಯದಲ್ಲಿ ಅಳುವ, ಅಳುವ ದೃಶ್ಯದಲ್ಲಿ ನಗುವ ಜೆನಿತ್‌ಳಂತ ನಟಿಯರಿಗೆ ಮಣೆ ಹಾಕುವ ನಮ್ಮ ಗಾಂಧಿನಗರದವರು ಕನ್ನಡದ ಹುಡುಗಿಯರಿಗೆ ಇನ್ನಾದರೂ 'ನಟಿಸುವ ಅವಕಾಶ' ಕೊಡಬೇಕಲ್ಲವೆ?

ಡಾಕ್ಟರ್ ಸುಂದರ್‌ರಾಜ್!




ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಡಾಕ್ಟರ್‌ನ ಆಗಮನವಾಗಿದೆ.

ಇನ್ನು ಮುಂದೆ ಪೋಷಕ ನಟ ಸುಂದರ್‌ರಾಜ್ ಅವರನ್ನು ಎಲ್ಲರೂ ಡಾ.ಸುಂದರ್‌ರಾಜ್ ಎಂದು ಸಂಬೋಧಿಸಬೇಕಾಗುತ್ತದೆ. ಅರ್ಥಾತ್ ಅವರಿಗೆ ಡಾಕ್ಟರೇಟ್ ಪದವಿ ಪ್ರಾಪ್ತಿಯಾಗಿದೆ. ಚಿತ್ರರಂಗಕ್ಕೆ ಅವರ ನಲ್ವತ್ತು ವರ್ಷಗಳ ಸೇವೆಯನ್ನು ಪರಿಗಣಿಸಿ ಕೌಲಾಲಂಪುರದ ಕೊಲಂಬಿಯಾ ಯುನಿವರ್ಸಿಟಿ ಅವರನ್ನು ಈ ಡಾಕ್ಟರೇಟ್ ಗೌರವಕ್ಕೆ ಆಯ್ಕೆ ಮಾಡಿದೆ.

ಜೂನ್ ತಿಂಗಳ 19ರಂದು ಮಲೇಷಿಯಾದಲ್ಲಿ ಈ ಡಾಕ್ಟರೇಟ್ ಸಮಾರಂಭ ನಡೆಯಲಿದೆ. ತನ್ನ ತಾರಾ ಪತ್ನಿ ಪ್ರಮೀಳಾ ಜೋಷಾಯ್ ಮತ್ತು ತಾರಾ ಪುತ್ರಿ ಮೇಘನಾ ರಾಜ್ ಜೊತೆಗೆ ಮಲೇಷಿಯಾಗೆ ಹೋಗಿ ಈ ಡಾಕ್ಟರೇಟ್ ಪದವಿಯನ್ನು ಸ್ವೀಕರಿಸುವ ಸಂಭ್ರಮದಲ್ಲಿದ್ದಾರೆ ಸುಂದರ್‌ರಾಜ್.

ಸುಂದರ್‌ರಾಜ್ ಮೂಲತಃ ರಂಗಭೂಮಿ ಕಲಾವಿದ. ರಂಗಭೂಮಿಯಿಂದ ಸಿನಿಮಾಕ್ಕೆ ಜಿಗಿದನಂತರ ಕಲಾತ್ಮಕ ಮತ್ತು ಕಮರ್ಷಿಯಲ್ ಎಂಬ ಎರಡೂ ಪ್ರಾಕಾರದ ಚಿತ್ರಗಳಲ್ಲಿ ನಟಿಸುತ್ತಾ ಬಂದರು. ಆನಂತರ ಇತರೆ ನಟನಟಿಯರಂತೆ ಸುಂದರ್‌ರಾಜ್ ಕೂಡ ಕಿರುತೆರೆಗೂ ಕಾಲಿಟ್ಟರು. ತನ್ನ ಮುದ್ದಿನ ಪತ್ನಿಗಾಗಿ ಒಂದು ಕಲಾತ್ಮಕ ಸಿನಿಮಾವನ್ನು ನಿರ್ಮಿಸಿ ಕೈಸುಟ್ಟುಕೊಂಡರು. ಸುಂದರ್‌ರಾಜ್ ನಲ್ವತ್ತು ವರ್ಷಗಳಿಂದಲೂ ಚಿತ್ರರಂಗದಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದರೂ ಇಂದಿಗೂ ನೆನಪಿಗೆ ಬರುವುದು ಅವರು ನಟಿಸಿದ ಮೊದಲ ಚಿತ್ರ 'ಒಂದಾನೊಂದು ಕಾಲದಲ್ಲಿ' ಚಿತ್ರದಲ್ಲಿನ ಅವರ ಅದ್ಭುತ ನಟನೆ. ಅದೇನೇ ಇರಲಿ, ಸ್ನೇಹಜೀವಿ ಮತ್ತು ಇತ್ತೀಚೆಗೆ 'ಸಂಘಜೀವಿ'ಯಾದ ಸುಂದರ್‌ರಾಜ್ ನಿವೃತ್ತಿಯ ಘಟ್ಟದಲ್ಲಿರುವಾಗ ಡಾಕ್ಟರ್ ಆಗುತ್ತಿರುವುದು ಅಭಿನಂದನೀಯ.

ರಾಜಧಾನಿಯ ಯಶಸ್ಸು!




ಯುವ ನಾಯಕನಟ ಯಶ್ ಗಾಂಧೀನಗರದಲ್ಲಿ ಒಂದು ವಿಚಿತ್ರ ರೀತಿಯಲ್ಲಿ ಸುದ್ದಿ ಮಾಡುತ್ತಿದ್ದಾರೆ. ಮೊನ್ನೆ ಈತ ನಟಿಸಿದ 'ರಾಜಧಾನಿ' ಚಿತ್ರ ಬಿಡುಗಡೆಯಾದಾಗ ಅದರ ಜೊತೆಜೊತೆಗೆ ಮಾಸ್ ಹೀರೋ-ಹೀರೋಯಿನ್ ವಿಜಿ-ರಮ್ಯಾ ನಟಿಸಿದ 'ಜಾನಿ' ಮತ್ತು ಎಸ್.ನಾರಾಯಣ್ ಪುತ್ರ ಪಂಕಜ್ ನಟಿಸಿದ 'ದುಷ್ಟ' ಚಿತ್ರಗಳು ತೆರೆ ಕಂಡಿದ್ದವು. 'ಜಾನಿ' ತಾರೆಯರ ಅಬ್ಬರ, 'ದುಷ್ಟ' ಚಿತ್ರದ ಅಪ್ಪ-ಮಗನ ಕಾಂಬಿನೇಷನ್ ಭಾರೀ ಸುದ್ದಿ ಮಾಡಿತ್ತು, ಆದರೆ 'ರಾಜಧಾನಿ' ಯಾವುದೇ ಅಬ್ಬರವಿಲ್ಲದೆ ಬಿಡುಗಡೆಯಾಗಿತ್ತು, ಅಷ್ಟೇ ಅಲ್ಲ 'ರಾಜಧಾನಿ'ಯಲ್ಲಿ ಯಶ್ ಬಿಟ್ಟರೆ ಪ್ರಕಾಶ್ ರೈ ಒಬ್ಬರೇ ಸುಪರಿಚಿತ ನಟ.

ಈ ಎಲ್ಲ ಕಾರಣಗಳಿಂದಾಗಿ 'ರಾಜಧಾನಿ'ಗೆ ಕೊನೆಯ ಸ್ಥಾನ ಅಥವಾ ತಪ್ಪಿದರೆ ದ್ವಿತೀಯ ಸ್ಥಾನ ಎಂದೇ ಲೆಕ್ಕಾಚಾರ ಹಾಕಲಾಗಿತ್ತು, ಆದರೆ ಮೊದಲ ವಾರದ ಗಳಿಕೆ ನೋಡಿದಾಗ 'ರಾಜಧಾನಿ' ವಿಜಿ ನಟಿಸಿದ 'ಜಾನಿ'ಯನ್ನು ಓವರ್‌ಟೇಕ್ ಮಾಡಿ ಮೊದಲ ಸ್ಥಾನವನ್ನು ಆಕ್ರಮಿಸಿದೆ. ದ್ವಿತೀಯ ಸ್ಥಾನದಲ್ಲಿ 'ಜಾನಿ' ಇದೆ.

ಆದರೂ ಈ ಚಿತ್ರದ ನಿರ್ಮಾಪಕರಿಗೆ ಯಾವ ಲಾಭವನ್ನೂ ತರುವ ಸಾಧ್ಯತೆಯಿಲ್ಲ, ಯಾಕೆಂದರೆ 'ರಾಜಧಾನಿ' ಚಿತ್ರದ ನಿರ್ಮಾಣಕ್ಕೆ ಅದರ ನಿರ್ಮಾಪಕ ಹಾಕಿದ ಬಂಡವಾಳ ಬರೋಬ್ಬರಿ ನಾಲ್ಕೂವರೆ ಕೋಟಿ ರೂಪಾಯಿಗಳು! ಇಷ್ಟೊಂದು ಹಣ ವಾಪಸ್ ಪಡೆಯುವ ತಾರಾಮೌಲ್ಯ ಯಶ್‌ಗೆ ಇನ್ನು ದೊರಕಿಲ್ಲ, ಅದೆಲ್ಲ ಬದಿಗಿರಲಿ, 'ರಾಜಧಾನಿ' ಯಶಸ್ಸಿನ ಸಂಪೂರ್ಣ ಕೀರ್ತಿ ಯಶ್ ಒಬ್ಬರಿಗೆ ಹೋಗುವುದಿಲ್ಲ, ವಾಸ್ತವವಾಗಿ ಈ ಚಿತ್ರಕ್ಕೆ ಸಂಭಾಷಣೆ ಬರೆದ ಮತ್ತು ನಿಂತುಹೋಗಿದ್ದ ಸಿನಿಮಾದ ನಿರ್ದೇಶನದ ಜವಾಬ್ದಾರಿಯನ್ನು ನಿಭಾಯಿಸಿದಂತಹ ಹಳೇ ಹುಲಿ ಕೆ.ವಿ.ರಾಜು ಅವರಿಗೂ ಸಲ್ಲಬೇಕು. ಅಂದರೆ ಹಳಬರು ಮತ್ತು ಹೊಸಬರ ಸಮಾಗಮದಿಂದಾಗಿ 'ರಾಜಧಾನಿ' ಪ್ರೇಕ್ಷಕರ ಮನಗೆದ್ದಿದೆ.

ದೊಡ್ಡ ಗಣಪ ಮತ್ತು ಅದೃಷ್ಟ!



ಸಿನಿಮಾದವರ ಮೂಢನಂಬಿಕೆ, ಅಂಧವಿಶ್ವಾಸಗಳ ಸುತ್ತ ಹಲವಾರು ಕಥೆಗಳಿವೆ.


ಆದರೆ ಅವೆಲ್ಲಕ್ಕಿಂತ ವಿಭಿನ್ನವಾಗೇನೂ ಇಲ್ಲದ ಒಂದು ಸಂಗತಿ ಮೊನ್ನೆ 'ಶಿವ' ಚಿತ್ರದ ಮುಹೂರ್ತದಲ್ಲಿ ನಡೆಯಿತು. ಈ ಚಿತ್ರದ ನಿರ್ಮಾಪಕ ಶ್ರೀಕಾಂತ್ ಮುಹೂರ್ತವನ್ನು ಬಸವನಗುಡಿಯ ದೊಡ್ಡ ಗಣಪತಿ ದೇವಸ್ಥಾನದಲ್ಲಿ ನೆರವೇರಿಸಿದರು. ಶಿವರಾಜ್‌ಕುಮಾರ್ ಈ ಚಿತ್ರದ ನಾಯಕ. ಸಚಿವ ಜಗದೀಶ್ ಶೆಟ್ಟರ್ ಮುಖ್ಯ ಅತಿಥಿಯಾಗಿ ಈ ಸಮಾರಂಭಕ್ಕೆ ಆಗಮಿಸಿದ್ದರು.

ವಿಶೇಷವೆಂದರೆ ಶ್ರೀಕಾಂತ್ ನಿರ್ಮಾಣದ ಈ ಹಿಂದಿನ ಎರಡು ಚಿತ್ರಗಳ 'ಮೈಲಾರಿ' ಮತ್ತು 'ಸಂತ' - ಮುಹೂರ್ತಗಳು ಇದೇ ದೇವಸ್ಥಾನದಲ್ಲಿ ನಡೆದಿತ್ತು. ಈ ಎರಡೂ ಚಿತ್ರಗಳ ನಾಯಕ ನಟ ಮತ್ತೆ ಅದೇ ಶಿವರಾಜ್‌ಕುಮಾರ್. 'ಮೈಲಾರಿ' ಚಿತ್ರದ ಮುಹೂರ್ತಕ್ಕೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯನವರನ್ನು ಕರೆಸಿದ್ದರೆ 'ಸಂತ' ಚಿತ್ರದ ಮುಹೂರ್ತಕ್ಕೆ ಕಾಂಗ್ರೆಸ್ ನಾಯಕ ಡಿ.ಕೆ.ಶಿವಕುಮಾರ್ ಮತ್ತು ಜೆಡಿಎಸ್ ನಾಯಕ ಪಿ.ಜಿ.ಆರ್. ಸಿಂಧ್ಯಾ ಅವರನ್ನು ಶ್ರೀಕಾಂತ್ ಆಹ್ವಾನಿಸಿದ್ದರು.

ವಿಶೇಷವೆಂದರೆ ಆ ಎರಡೂ ಚಿತ್ರಗಳು ಶಿವರಾಜ್‌ಕುಮಾರ್ ಅವರ ತಾರಾವರ್ಚಸ್ಸನ್ನು ವೃದ್ಧಿಸಿದ್ದವು ಮತ್ತು ನಿರ್ಮಾಪಕ ಶ್ರೀಕಾಂತ್‌ರ ಬ್ಯಾಂಕ್‌ಬ್ಯಾಲೆನ್ಸ್ ಅನ್ನು ಹೆಚ್ಚಿಸಿದ್ದವು. ಬಹುಶಃ ಆ ಕಾರಣಕ್ಕೆ ಶ್ರೀಕಾಂತ್ ಈ ಬಾರಿಯೂ ಮುಹೂರ್ತವನ್ನು ದೊಡ್ಡಗಣಪತಿಯ ದೇವಸ್ಥಾನದಲ್ಲಿ ನೆರವೇರಿಸಿದರು.

ಅಂತೂಇಂತೂ ದೊಡ್ಡ ಗಣಪತಿ-ರಾಜಕಾರಣಿ-ಶಿವರಾಜ್‌ಕುಮಾರ್ ಈ ಮೂರು ಕಾಂಬಿನೇಷನ್ ಶ್ರೀಕಾಂತ್‌ಗೆ ಅದೃಷ್ಟ ಮತ್ತು ಅದರೊಂದಿಗೆ ಒಂದಿಷ್ಟು ಮೂಢನಂಬಿಕೆಯನ್ನೂ ತಂದುಕೊಟ್ಟಿದೆ.

ಡಬಲ್ ವಾಸು ದೀಪಕ್ ಜೊತೆ!



'ಡಬಲ್ ಡೆಕ್ಕರ್' ಚಿತ್ರದ ವಾಸು ಒಂದು ಹಂತಕ್ಕೆ ಸೇಫ್ ಆಗಿದ್ದಾರೆ. ಹಿಂದೆ ಇದೇ ಜಗ್ಗೇಶ್ ನಾಯಕನಾಗಿ ನಟಿಸಿದ್ದ 'ಕೋಡಗಾನ ಕೋಳಿ ನುಂಗಿತ್ತಾ' ಚಿತ್ರಕ್ಕೆ ಇವರೇ ಆ್ಯಕ್ಷನ್ ಕಟ್ ಹೇಳಿದ್ದರು. ಆದರೆ, ಅದು ಪ್ರೇಕ್ಷಕರಿಗೆ ವಿಕ್ಸ್ ಆ್ಯಕ್ಷನ್ 500 ಮಾತ್ರೆ ಕೊಂಡುಕೊಳ್ಳುವಂತೆ ಮಾಡಿತ್ತು. 'ಡಬಲ್ ಡೆಕ್ಕರ್' ಚಿತ್ರ ರಿಮೇಕ್ ಆದರೂ ಒಂದು ಹಂತಕ್ಕೆ ಓಕೆ ಆಗಿದೆ. ಜಗ್ಗೇಶ್ ಟಿಪಿಕಲ್ ನಟನೆಯ ಕಾಮಿಡಿ ಚಿತ್ರ ಇತ್ತೀಚೆಗೆ ಬಂದಿರಲಿಲ್ಲ, 'ಲಿಫ್ಟ್ ಕೊಡ್ಲಾ' ಚಿತ್ರದಲ್ಲಿ ಅವರದ್ದು ಒಂಥರಾ ಸೀರಿಯಸ್ ಪಾತ್ರವೇ ಆಗಿತ್ತು.

ಒಂದೆಡೆ '...ಡೆಕ್ಕರ್' ತಕ್ಕಮಟ್ಟಿಗೆ ಉಸಿರಾಡುತ್ತಿರುವುದರಿಂದ ಜಗ್ಗೇಶ್ ಮಿನಿಮಮ್ ಗ್ಯಾರಂಟಿ ನಟ ಎನ್ನುವುದು ಮತ್ತೆ ಪ್ರೂವ್ ಆಗಿದೆ. ಅದೇ ಹ್ಯಾಪಿಯಲ್ಲಿ ವಾಸು ಈಗ ಜಗ್ಗೇಶ್ ಜೊತೆ ಮತ್ತೊಂದು ರಿಮೇಕ್ ಮಾಡಲು ತದಕಾಡುತ್ತಿದ್ದಾರೆ. ಇನ್ನೊಂದೆಡೆ 'ಶಿಷ್ಯ' ಚಿತ್ರದಿಂದ ಬೆಳಕಿಗೆ ಬಂದು ಮತ್ತೆ ಕತ್ತಲಿಗೆ ಹಾರಿ, ಸದ್ಯ ಒಟ್ಟೊಟ್ಟಿಗೇ ನಾಲ್ಕೈದು ಸಿನಿಮಾಗಳಲ್ಲಿ ನಟಿಸುತ್ತಾ ಅತ್ಯಂತ ಬ್ಯುಸೀ ನಟನಾಗಿರುವ ದೀಪಕ್‌ನನ್ನು ಹಾಕಿಕೊಂಡು ಮತ್ತೊಂದು ಸಿನಿಮಾ ಮಾಡಲಿದ್ದಾರೆ.

ಏನೇ ಅನ್ನಿ, ವಾಸು ಒಂಥರಾ ವೆರೈಟಿ ತಲೆಮಾಂಸ ಇರೋ ಮನುಷ್ಯಾರೀ!

Regd.No.KA/RNP/BGS/2036/2011-13 Posted at : GPO, Bangalore-01. Fri/Saturday. R B P LANKESH, Kannada Weekly Price Rs. 14/- 29-6-2011

ಹಳೇ ಲಿಪ್ಪು ಹೊಸಾ ಲಾಕು!

ನಾಯಕ ನಟ ಪ್ರೇಮ್ ನಾಯಕಿಯೊಂದಿಗೆ 'ಲಿಪ್‌ಲಾಕ್' ಮಾಡಿದ್ದಾನೆ ಎಂದು ಭಾರೀ ಪ್ರಚಾರ ಪಡೆದಿರುವ 'ಐ ಆ್ಯಮ್ ಸಾರಿ, ಮತ್ತೆ ಪ್ರೀತ್ಸೋಣ ಬನ್ನಿ' ಚಿತ್ರ ಮುಂದಿನ ವಾರ ತೆರೆ ಕಾಣಲಿದೆ.

ಈ ಚಿತ್ರವನ್ನು ಮೊದಲ ಬಾರಿಗೆ ನಿರ್ದೇಶಿಸಿರುವ ರವೀಂದ್ರ ಪಾಲಿಗೆ ಮಾತ್ರವಲ್ಲ ನಾಯಕ ಪ್ರೇಮ್ ಪಾಲಿಗೂ ಇದರ ಫಲಿತಾಂಶ ಬಹಳ ಮುಖ್ಯವಾಗಿದೆ. ಯಾಕೆಂದರೆ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಆರಕ್ಕೇರದ ಮೂರಕ್ಕಿಳಿಯದ ಗುಂಪಿನ ನಾಯಕನಾಗಿದ್ದಾನೆ ಪ್ರೇಮ್.



ಅಂದಹಾಗೆ ನಾಯಕ–ನಾಯಕಿಯ 'ಲಿಪ್‌ಲಾಕ್' ಬಗ್ಗೆ ಪ್ರಸ್ತಾಪಿಸಿದರೆ "ಅದೆಲ್ಲವೂ ಬರೀ ಗಾಸಿಪ್. ಪತ್ರಿಕೆಗಳೂ ಅದನ್ನು ಅನಗತ್ಯವಾಗಿ ಬೆಳೆಸಿದವು" ಎನ್ನುತ್ತಾರೆ ನಿರ್ದೇಶಕ ರವೀಂದ್ರ ಮತ್ತು ನಾಯಕ ಪ್ರೇಮ್. "ನಮ್ಮ ಚಿತ್ರದ ಒಂದೇ ಒಂದು ದೃಶ್ಯವನ್ನೂ ಸೆನ್ಸಾರ್ ಆಫೀಸರ್ ಕತ್ತರಿಸಲಿಲ್ಲ ಎಂಬುದೇ ನಮ್ಮ ಚಿತ್ರ ಮನೆಮಂದಿಯೆಲ್ಲಾ ನೋಡುವಂಥದ್ದು ಎನ್ನುವುದಕ್ಕೆ ಸಾಕ್ಷಿ" ಎನ್ನುತ್ತಾರೆ ಅವರಿಬ್ಬರು. "ಹಾಗಾದರೆ ಈ ಕಿಸ್ಸಿಂಗ್ ಸೀನ್ ಚಿತ್ರದಲ್ಲಿರುತ್ತಾ?" ಎಂದು ಕೇಳಿದರೆ ರವೀಂದ್ರ ಮಗುಮ್ಮಾಗುತ್ತಾರೆ.

ಇತ್ತೀಚೆಗೆ ಬಂದ ಹೊಸ ಯುವ ನಿರ್ದೇಶಕರೆಲ್ಲಾ ಹಳೇ ಕಾಲದ ಸಾಂಪ್ರದಾಯಿಕ ಪ್ರಚಾರವನ್ನು ಬದಿಗಿಟ್ಟು ಈ ರೀತಿಯ ಹೊಸ ಗಿಮಿಕ್‌ಗಳನ್ನು ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದೆ...



ಆಟೋದಲ್ಲಿ ಸಾರಥಿ


ದರ್ಶನ್ ನಟಿಸಿರುವ 'ಸಾರಥಿ' ಚಿತ್ರದ ಕ್ಯಾಸೆಟ್ ಬಿಡುಗಡೆ ಮುಂದಿನ ವಾರ ವಿಭಿನ್ನವಾಗಿ ನಡೆಯಲಿದೆ.


ಎಂದಿನಂತೆ ಪಂಚತಾರಾ ಹೋಟೆಲ್ಲಿಗೆ ಸೆಲೆಬ್ರಿಟಿಗಳನ್ನು ಕರೆಸಿ, ಪತ್ರಕರ್ತ[ರಿಗೆ] ಗುಂಡು ಹಾಕಿಸಿ, ಕ್ಯಾಸೆಟ್ ಬಿಡುಗಡೆ ಮಾಡುವ ಬದಲು ದರ್ಶನ್ ಹೊ[ಸ] ಹಾದಿ ಹಿಡಿದಿದ್ದಾರೆ.

ಅದೇನೆಂದರೆ ಅವರ ಮನೆಯಿಂದ ಆಟೋರಿಕ್ಷಾದ ಮೆರವಣಿಗೆಯ[ಲ್ಲಿ] ಚಿತ್ರ ತಂಡ ಮಲ್ಲೇಶ್ವರಂನ ಮೈದಾನಕ್ಕೆ ಬಂದು ಅಲ್ಲಿ 'ಸಾರಥಿ' ಕ್ಯಾಸೆಟ್‌ಅ[ನ್ನು] ಬಿಡುಗಡೆ ಮಾಡುತ್ತಾರಂತೆ. ಅಂದಹಾಗೆ, ಕ್ಯಾಸೆಟ್ ಬಿಡುಗ[ಡೆ] ಮಾಡಲಿರುವವರು ಒಬ್ಬ ಆಟೋ ಡ್ರೈವರಂತೆ.

ಬಹುಶಃ ಆಟೋಡ್ರೈವರ್‌ಗಳು ಈ ಚಿತ್ರ ನೋಡಲು ಪ್ರೇರೇಪಿಸ[ಲು] ಈ ಗಿಮಿಕ್‌ಅನ್ನು ಚಿತ್ರದ ನಿರ್ದೇಶಕ ದರ್ಶನ್ ಸಹೋದರ ದಿನಕ[ರ್] ಮಾಡಿರಬಹುದು. ಅಥವಾ ದರ್ಶನ್ ಜನಪ್ರಿಯತೆ ಸಾಕಷ್ಟು ಕುಗ್ಗಿರುವುದರಿಂದ ಜನರ ಬಳಿ ತೆರಳುವ ಐಡಿಯಾ ಇವರಿ[ಗೆ] ಹೊಳೆದಿರಬಹುದು. ಅಥವಾ ಚಿತ್ರದ ನಾಯಕ ಆಟೋರಿಕ್ಷಾಡ್ರೈವ[ರ್] ಆಗಿರಬಹುದು...

ಆದರೆ ಇಂದಿಗೂ ಆಟೋರಿಕ್ಷಾ ಡ್ರೈವರ್‌ಗಳ ನಿಷ್ಠೆ ಮತ್ತು ಪ್ರೀ[ತಿ] ದಿವಂಗತ ಶಂಕರ್‌ನಾಗ್‌ಗೆ ಮಾತ್ರ ಎಂಬುದು ಇವರಿಗೆ ಗೊತ್ತಿಲ್ಲವ[ೋ] ಏನೋ? ದರ್ಶನ್‌ಗಿಂತ ಮೊದಲು ಇದೇ 'ಆಟೋ[...] ಪ್ರೀತಿಗಳಿಸಲು ಉಪೇಂದ್ರ 'ಆಟೋಶಂಕರ್' ಚಿತ್ರದ ಮೂಲಕ ಪ್ರಯತ್ನಿ[ಸಿ] ವಿಫಲರಾಗಿದ್ದರು.







ಆಹಾ ಮೀರಾ ಮದುವೆಯಂತೆ!

ಕನ್ನಡದ 'ದೇವರು ಕೊಟ್ಟ ತಂಗಿ', 'ಮೌರ್ಯ', 'ಅರಸು', 'ಹೂ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿರುವ ಮೀರಾಗೆ ಇತ್ತೀಚಿನ ದಿನಗಳಲ್ಲಿ ಬಣ್ಣದ ಬದುಕು ಕೈಹಿಡಿಯುವಂತೆ ಕಾಣುತ್ತಿಲ್ಲ. ಈ ಹಿನ್ನೆಲೆಯಲ್ಲಿ ಆಕೆ ಈ ಬಣ್ಣದ ಲೋಕಕ್ಕೆ ವಿದಾಯ ಹೇಳುವ ಪ್ಲಾನು ಮಾಡಿದ್ದಾಳೆ.

ಬಹುಕಾಲದ ಗೆಳೆಯ ಮ್ಯಾಂಡೋಲಿನ್ ವಾದಕ ರಾಜೇಶ್ ಅವರನ್ನು ಮೀರಾ ಜಾಸ್ಮಿನ್ ವಿವಾಹವಾಗಲಿದ್ದಾರೆ. ಮೂಲತಃ ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯವರಾದ ರಾಜೇಶ್ ಖ್ಯಾತ ಮ್ಯಾಂಡೊಲಿನ್ ವಾದಕ ಯು. ಶ್ರೀನಿವಾಸ್ ಅವರ ಸಹೋದರ.

ತಮ್ಮ ಹತ್ತು ವರ್ಷಗಳ ಬಣ್ಣದ ಬದುಕಿನಲ್ಲಿ ಮೀರಾ ಜಾಸ್ಮಿನ್ ಹಲವಾರು ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರಗಳಲ್ಲಿ ಮಿಂಚಿದ್ದಾರೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪ್ರತಿಭಾನ್ವಿತ ನಟಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಮೀರಾ ಜಾಸ್ಮಿನ್ ಇತರ ಹಲವು ಪ್ರಶಸ್ತಿಗಳಿಗೂ ಭಾಜನರಾದವರು.

ಭಾರತದ ಕೆಲವೇ ಅದ್ಭುತ ನಟಿಯರಲ್ಲಿ ಮೀರಾ ಕೂಡಾ ಒಬ್ಬಳು. ಆದರೆ ಮದುವೆಯಾದ ಮೇಲೆ ಮೀರಾ ಬಣ್ಣದ ಬದುಕನ್ನು ತೊರೆಯುವ ಸುದ್ದಿ ಕೇಳಿಬರುತ್ತಿದೆ. ಮದುವೆಯ ಬಂಧನಕ್ಕೆ ಸಿಲುಕಿ ಈಕೆ ಸಾಂಸ್ಕೃತಿಕ ನಂಟನ್ನು ಕಡಿದುಕೊಳ್ಳದಿರಲಿ, ಮೀರಾ ಮದುವೆಯ ನಂತರವೂ ನಟಿಸುವಂತಾಗಲಿ.



ಗಿಣಿ ಏಟು!

ಮೊನ್ನೆ ಮೈಸೂರಲ್ಲಿ ನಡೆದ ಘಟನೆಯಿದು.

ಚಿತ್ರದ ಹೆಸರು 'ಟಿಪ್ಪು'. ನಾಯಕ ಆದಿತ್ಯ, ನಾಯಕಿ ರಾಗಿಣಿ. ನಾಯಕನ ಮುಖಕ್ಕೆ ನಾಯಕಿ ಟಪಾರನೆ ಹೊಡೆಯುವ ದೃಶ್ಯದ ಚಿತ್ರೀಕರಣ ನಡೆಯುತ್ತಿತ್ತು, ರಾಗಿಣಿ ಈ ದೃಶ್ಯದ 9ನೇ ಟೇಕ್‌ನಲ್ಲಿ ನಿರ್ದೇಶಕರಿಂದ ಎಸ್ ಅನಿಸಿಕೊಂಡರು. ಪಾಪ ಆದಿತ್ಯನ ಪಾಡು ಏನಾಗಿರಬಹುದು? ನೀವೇ ಊಹಿಸಿ. ಬಹುತೇಕ ಕಷ್ಟಕರ ದೃಶ್ಯಗಳನ್ನೂ ಒಂದೇ ಟೇಕ್‌ನಲ್ಲಿ ನಿರ್ವಹಿಸುವ ರಾಗಿಣಿ ಈ ಸುಲಭದ ದೃಶ್ಯಕ್ಕೆ 9 ಟೇಕ್ ಯಾಕೆ ತೆಗೆದುಕೊಂಡಳೋ ಗೊತ್ತಿಲ್ಲ. ಇದನ್ನು ಕುರಿತು ಸ್ಟ್ಯಾಯಾಂಗ ತನಿಖೆಯಾಗಬೇಕು ಎಂದು ಆದಿತ್ಯನ ಅಭಿಮಾನಿಗಳು ಒತ್ತಾಯ ಮಾಡುತ್ತಾರೋ ನೋಡಬೇಕು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail : lankesh70@rediffmail.com, Printed at Rajhans Enterprises, # 134, 4th Main, Industrial Estate ...